

# ಕರ್ನಾಟಕ ಸ್ಕೌಟ್ ಮತ್ತು ಗೈಡ್

ತಿಂಗಳ ವಾರ್ತಾಪತ್ರಿಕೆ

# Karnataka Scout & Guide

Monthly News Magazine

Vol -20 Issue-06 June 2023 ₹ 10/-



## ವಿಶ್ವ ಪರಿಸರ ದಿನಾಚರಣೆ 2023

ಧ್ಯೇಯ ವಾಕ್ಯ

‘ಪ್ಲಾಸ್ಟಿಕ್ ಮಾಲಿನ್ಯವನ್ನು ನಿರ್ಮೂಲನೆ ಮಾಡುವುದು’



ಮಾನ್ಯ ಉನ್ನತ ಶಿಕ್ಷಣ ಸಚಿವರಾದ ಡಾ॥ ಎಂ.ಸಿ. ಸುಧಾಕರ್‌ರವರನ್ನು ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯರವರು, ರಾಜ್ಯ ಪದಾಧಿಕಾರಿಗಳೊಂದಿಗೆ ಜೂನ್ 23ರಂದು ಭೇಟಿ ಮಾಡಿ ಅಭಿನಂದಿಸಿದರು. ಈ ಸಂದರ್ಭದಲ್ಲಿ ಇಲಾಖೆಯ ಅಧಿಕಾರಿಗಳೊಂದಿಗೆ ನಡೆದ ಸಭೆಯಲ್ಲಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಚಟುವಟಿಕೆಗಳು ಹಾಗೂ ತರಬೇತಿ ವಿಷಯಗಳ ಬಗ್ಗೆ ಚರ್ಚಿಸಲಾಯಿತು. ರೋವರ್ಸ್–ರೇಂಜರ್ಸ್ ಚಟುವಟಿಕೆಗಳಿಗೆ ಇಲಾಖೆಯಿಂದ ಸಹಕಾರ ನೀಡುವಂತೆ ಕೋರಲಾಯಿತು.

ಶ್ರೀ ಎಸ್.ಆರ್. ಉಮಾಶಂಕರ್, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಪ್ರೋ. ವೈ.ಎಸ್. ಸಿದ್ದೇಗೌಡ, ಉಪಾಧ್ಯಕ್ಷರು, ಕರ್ನಾಟಕ ರಾಜ್ಯ ಉನ್ನತ ಪರಿಷತ್ತು, ಶ್ರೀ ಪ್ರದೀಪ್ .ಪಿ, ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಶ್ರೀ ಜಯಪ್ಪ, ವಿಶೇಷಾಧಿಕಾರಿಗಳು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು ಸಭೆಯಲ್ಲಿ ಉಪಸ್ಥಿತರಿದ್ದರು.



23 ಜೂನ್ 2023 ರಂದು ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್.ಸಿಂಧ್ಯರವರು ರಾಜ್ಯ ಪದಾಧಿಕಾರಿಗಳೊಂದಿಗೆ ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರಾದ ಶ್ರೀ ಮಧುಬಂಗಾರಪ್ಪರವರನ್ನು ಭೇಟಿ ಮಾಡಿ ಅಭಿನಂದಿಸಿದರು. ನಂತರ ಸ್ಕೌಟ್ಸ್–ಗೈಡ್ಸ್ ಚಟುವಟಿಕೆಗಳು ಮತ್ತು ತರಬೇತಿ ವಿಷಯಗಳ ಬಗ್ಗೆ ಚರ್ಚಿಸಲಾಯಿತು. ಈ ಸಂದರ್ಭದಲ್ಲಿ ಮಾನ್ಯ ಸಚಿವರು ರಾಜ್ಯ ಸಂಸ್ಥೆಯಿಂದ ಪ್ರಕಟಿಸಿದ 2023–24ನೇ ಸಾಲಿನ **"ಕಾರ್ಯಕ್ರಮ ಮತ್ತು ಯೋಜನಾ ಪುಸ್ತಕವನ್ನು"** ಬಿಡುಗಡೆಗೊಳಿಸಿ ತಾವು ಬೆಂಗಳೂರಿನ ಸೆಂಟ್ ಜೋಸೆಫ್ ಶಾಲೆಯಲ್ಲಿ ಸ್ಕೌಟ್ ಆಗಿದ್ದ ಅನುಭವಗಳನ್ನು ಹಂಚಿಕೊಂಡರು ಮತ್ತು ಸ್ಕೌಟ್–ಗೈಡ್ ಚಟುವಟಿಕೆಗಳನ್ನು ಎಲ್ಲಾ ಶಾಲೆಗಳಲ್ಲಿ ಪ್ರಾರಂಭಿಸಲು ಸರ್ಕಾರದಿಂದ ಸಹಕಾರ ನೀಡುವುದಾಗಿ ಭರವಸೆ ನೀಡಿದರು.



8 ಜೂನ್ 2023 ರಂದು ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯರವರು, ಮಾನ್ಯ ಅರಣ್ಯ ಮತ್ತು ಪರಿಸರ ಇಲಾಖೆ ಸಚಿವರಾದ ಶ್ರೀ ಈಶ್ವರ ಬಿ. ಖಂಡ್ರೆ ಅವರನ್ನು ಭೇಟಿ ಮಾಡಿ ರಾಜ್ಯ ಸಂಸ್ಥೆಯಿಂದ ಅಭಿನಂದಿಸಲಾಯಿತು ಹಾಗು ಸ್ಕೌಟ್ಸ್-ಗೈಡ್ಸ್ ಚಟುವಟಿಕೆಗಳಿಗೆ ಇಲಾಖೆಯಿಂದ ಸಹಕಾರ ನೀಡುವಂತೆ ಕೋರಲಾಯಿತು. ಶ್ರೀ ಪಿ. ಪಳನಿ, ರಾಜ್ಯ ಕೇಂದ್ರ ಸ್ಥಾನಿಕ ಆಯುಕ್ತರು, ಶ್ರೀ ಎಂ.ಎಸ್. ಸತೀಶ್, ಜಿಲ್ಲಾ ಕಾರ್ಯದರ್ಶಿ, ಬೆಂಗಳೂರು ದಕ್ಷಿಣ, ಶ್ರೀ ಬಿ.ಕೆ. ಶೇಷಾದ್ರಿ, ಜಿಲ್ಲಾ ಕಾರ್ಯದರ್ಶಿ, ಬೆಂಗಳೂರು ಉತ್ತರ, ಶ್ರೀ ಎಲ್.ಟಿ. ಲೋಕೇಶ್, ಶ್ರೀ ನಾಗೇಶ್ ಶಿವಪುರ್, ಶ್ರೀಮತಿ ಕೆ.ವಿ. ಶಾಮಲ ಉಪಸ್ಥಿತರಿದ್ದರು.



ಶ್ರೀ ಎನ್.ಎಸ್. ಬೋಸರಾಜು, ಮಾನ್ಯ ಸಣ್ಣ ನೀರಾವರಿ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಹಾಗೂ ಕೊಡಗು ಜಿಲ್ಲಾ ಉಸ್ತುವಾರಿ ಮಂತ್ರಿಗಳು ಮತ್ತು ಅಧ್ಯಕ್ಷರು, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಜಿಲ್ಲಾ ಸಂಸ್ಥೆ, ರಾಯಚೂರು ಇವರು ಜೂನ್ 6 ರಂದು ರಾಜ್ಯ ಕೇಂದ್ರ ಕಾರ್ಯಾಲಯಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯ ರವರು ಅವರನ್ನು ರಾಜ್ಯ ಸಂಸ್ಥೆಯಿಂದ ಸನ್ಮಾನಿಸಿ ಗೌರವಿಸಿದರು. ನಂತರ ಕರ್ನಾಟಕದ ರಾಯಚೂರು ಜಿಲ್ಲೆ ಮತ್ತು ಕಲ್ಯಾಣ ಕರ್ನಾಟಕದ ಜಿಲ್ಲೆಗಳಲ್ಲಿ ಹಾಗು ಅವರು ಉಸ್ತುವಾರಿ ಸಚಿವರಾಗಿರುವ ಕೊಡಗು ಜಿಲ್ಲೆಯಲ್ಲಿ ಸ್ಕೌಟಿಂಗ್-ಗೈಡಿಂಗ್ ಬೆಳೆಸುವಲ್ಲಿ ಪೂರ್ಣ ಸಹಕಾರ ನೀಡುವುದಾಗಿ ಮಾನ್ಯ ಸಚಿವರು ಭರವಸೆ ನೀಡಿದರು. ಈ ಸಂದರ್ಭದಲ್ಲಿ ರಾಜ್ಯ ಸಂಸ್ಥೆ ಅಧಿಕಾರಿಗಳು ಉಪಸ್ಥಿತರಿದ್ದರು.



ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯಿಂದ ಮಕ್ಕಳು ಮತ್ತು ಶಿಕ್ಷಕರುಗಳಿಗಾಗಿ ಚಟುವಟಿಕೆ ಮತ್ತು ತರಬೇತಿಯನ್ನು ಒಳಗೊಂಡ 'ಕಾರ್ಯಕ್ರಮ ಮತ್ತು ಯೋಜನಾ ಪುಸ್ತಕ'ವನ್ನು ರಾಜ್ಯ ಮುಖ್ಯ ಆಯುಕ್ತರೂ ಹಾಗು ಕರ್ನಾಟಕ ಸರ್ಕಾರದ ಮಾಜಿ ಸಚಿವರಾದ ಶ್ರೀ ಪಿ.ಜಿ.ಆರ್. ಸಿಂಧ್ಯಾ ಅವರು ಬಿಡುಗಡೆ ಗೊಳಿಸಿದರು. ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ಈ ಪುಸಕವನ್ನು ರಾಜ್ಯದ ಪ್ರತಿ ಕಬ್, ಬುಲ್ ಬುಲ್, ಸ್ಕೌಟ್–ಗೈಡ್ ಮತ್ತು ರೋವರ್–ರೇಂಜರ್ ದಳಗಳನ್ನು ನಡೆಸುತ್ತಿರುವ ಶಿಕ್ಷಕರು ಮತ್ತು ಉಪನ್ಯಾಸಕರುಗಳಿಗೆ ನೀಡಲಾಗುತ್ತದೆ ಎಂದು ತಿಳಿಸಿದರು. ಈ ಪುಸ್ತಕದಲ್ಲಿ ಪರೋಪಕಾರ, ಸೇವಾ ಮನೋಭಾವ, ಪರಿಸರ ಸಂರಕ್ಷಣೆ, ಸುಸ್ಥಿರ ಅಭಿವೃದ್ಧಿ ಗುರಿಗಳ ಜಾಗೃತಿ, ರಾಷ್ಟ್ರೀಯ ಹಬ್ಬಗಳ ಆಚರಣೆ ಮತ್ತು ವಿಶೇಷತೆ, ಅರಣ್ಯ ಪರಿಚಯ, ವಿದ್ಯಾರ್ಥಿಗಳು ಸ್ಥಳೀಯ ಹಂತದಿಂದ ಅಂತರಾಷ್ಟ್ರೀಯ ಹಂತಕ್ಕೆ ಬೆಳೆಯುವ ಅವಕಾಶಗಳು ವಿವಿಧ ಕೌಶಲ್ಯಾಭಿವೃದ್ಧಿ ತರಬೇತಿಗಳು ಇತ್ಯಾದಿಗಳನ್ನು ಒಳಗೊಂಡ ಗುಣಮಟ್ಟದ ಶಿಕ್ಷಣ ನೀಡುವಂತಹ ಚಟುವಟಿಕೆಗಳನ್ನು ಮತ್ತು ಕಾರ್ಯಕ್ರಮಗಳನ್ನು ನಿರ್ವಹಿಸುವ ಸಂಪೂರ್ಣ ವಿವರಗಳನ್ನು ಹೊಂದಿದೆ ಎಂದು ತಿಳಿಸಿದರು. ಈ ಪುಸ್ತಕದಲ್ಲಿ ಪ್ರತಿ ವಾರಕ್ಕೊಮ್ಮೆ ಶಿಕ್ಷಕ–ಶಿಕ್ಷಕಿಯರು ತಮ್ಮ ದಳಗಳನ್ನು ನಡೆಸುವಾಗ ವಿವಿಧ ವಿಭಾಗಗಳ ವಿದ್ಯಾರ್ಥಿಗಳ ಗುಣಮಟ್ಟದ ಶಿಕ್ಷಣದ ಸಾಧನೆಯಲ್ಲಿಯ ಪ್ರಗತಿಪರ ಶಿಕ್ಷಣದ ಪಠ್ಯದ ಬಗ್ಗೆಯೂ ತಿಳಿಸಲಾಗಿದೆ ಎಂದರು. ಈ ಸಂದರ್ಭದಲ್ಲಿ ರಾಜ್ಯ ಕಾರ್ಯದರ್ಶಿ ಶ್ರೀ ಕೆ. ಗಂಗಪ್ಪ ಗೌಡ, ಪಿಐಬಿ ಅಡಿಷನಲ್ ಡೈರೆಕ್ಟರ್ ಜನರಲ್ ಶ್ರೀ ಎಸ್.ಜಿ. ರವೀಂದ್ರ, ಭಾ.ಸಂ.ಸೇ., ವಿವಿಧ ಮಾಧ್ಯಮ ಪ್ರತಿನಿಧಿಗಳು ಹಾಗೂ ಸಂಸ್ಥೆಯ ಅಧಿಕಾರಿಗಳು  ಉಪಸ್ಥಿತರಿದ್ದರು.



13 ಜೂನ್ 2023 ರಂದು ಬೆಂಗಳೂರಿನ "ಶಿಕ್ಷಕರ ಸದನ"ದಲ್ಲಿ ನಡೆದ ರಾಜ್ಯ ಮಟ್ಟದ ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿಗಳ ಸಭೆಯಲ್ಲಿ ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯರವರು ಭಾಗವಹಿಸಿ ಸ್ಕೌಟ್ಸ್–ಗೈಡ್ಸ್, ಕಬ್ಸ್–ಬುಲ್‌ಬುಲ್ಸ್ ಚಟುವಟಿಕೆಗಳನ್ನು ಎಲ್ಲಾ ಶಾಲೆಗಳಲ್ಲಿ ಪ್ರಾರಂಭಿಸಲು ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿಗಳ ಸಹಕಾರವನ್ನು ಕೋರಿದರು. ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದ ಶ್ರೀ ಸೂರ್ಯಪ್ರಕಾಶ್ ಮೂರ್ತಿ, ನಿರ್ದೇಶಕರು (ಅಲ್ಪಸಂಖ್ಯಾತರ ವಿಭಾಗ), ಶಾಲಾ ಶಿಕ್ಷಣ ಇಲಾಖೆ ಮತ್ತು ಶ್ರೀ ರಮೇಶ್, ಸಹನಿರ್ದೇಶಕರು (ದೈಹಿಕ ಶಿಕ್ಷಣ) ಶಾಲಾ ಶಿಕ್ಷಣ ಇಲಾಖೆ ಇವರುಗಳು ಮಾತನಾಡಿ ಸ್ಕೌಟ್–ಗೈಡ್ ಚಟುವಟಿಕೆಗಳಿಗೆ ಸಂಪೂರ್ಣ ಸಹಕಾರ ನೀಡುವಂತೆ ಭಾಗವಹಿಸಿದ ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿಗಳಿಗೆ ಸೂಚಿಸಿದರು. ಇದಕ್ಕೆ ಎಲ್ಲರೂ ಸ್ಕೌಟ್–ಗೈಡ್ ಚಳವಳಿಯ ಬೆಳವಣಿಗೆಗೆ ಸಹಕಾರ ನೀಡುವುದಾಗಿ ಭರವಸೆ ನೀಡಿದರು.

**ಪೋಷಕರು**

ಪಿ.ಜಿ.ಆರ್. ಸಿಂಧ್ಯ

**ಗೌರವ ಅಧ್ಯಕ್ಷರು**

ಡಾ. ಗೊ.ರು. ಚನ್ನಬಸಪ್ಪ

**ಅಧ್ಯಕ್ಷರು**

ಕೊಂಡಜ್ಜಿ ಬಿ. ಷಣ್ಮುಖಪ್ಪ

**ಸಂಪಾದಕರು**

ಕೆ. ಗಂಗಪ್ಪಗೌಡ

**ಸಹಸಂಪಾದಕರು**

ಎನ್. ಶ್ರೀನಿವಾಸನ್

**ಸಂಚಾಲಕರು**

ಬಿ.ಎಸ್. ರವೀಂದ್ರ

**ಸದಸ್ಯರು**

ಮೋಹನ್ ಕೊಂಡಜ್ಜಿ
ಸಿ.ಪಿ. ಪರಮೇಶ್ವರ
ಚಳ್ಳಕೆರೆ ಯರ್ರಿಸ್ವಾಮಿ
ಎಂ.ಎನ್. ಷಡಕ್ಷರಿ
ಸಿ.ವಿ. ತಿರುಮಲರಾವ್
ಡಾ. ವಿಜಯಲಕ್ಷ್ಮಿ ಬಾಳೆಕುಂದ್ರಿ
ಡಾ. ವಸುಂಧರ ಭೂಪತಿ
ಡಾ. ಶಕುಂತಲ
ಪ್ರಭಾವತಿ ಪಾಟೀಲ್

ಸಂಚಿಕೆಯ ವಾರ್ಷಿಕ ಚಂದಾ ರೂ. 100/-
ವಿದ್ಯಾಸಂಸ್ಥೆ ಹಾಗೂ ಸಂಘ-ಸಂಸ್ಥೆಗಳಿಗೆ
ವಾರ್ಷಿಕ ಚಂದಾ ರೂ. 100/-

ಚಂದಾಹಣವನ್ನು
ಸಂಪಾದಕರು, ಕರ್ನಾಟಕ ಸ್ಕೌಟ್ ಮತ್ತು ಗೈಡ್ ಮಾಸಪತ್ರಿಕೆ
ರಾಜ್ಯ ಕೇಂದ್ರ ಕಛೇರಿ, ಶಾಂತಿಗೃಹ
#39, ಅರಮನೆ ರಸ್ತೆ, ಬೆಂಗಳೂರು - 560 001
ಇಲ್ಲಿಗೆ ಕಳುಹಿಸಲು ಕೋರಿದೆ.

# ಕರ್ನಾಟಕ ಸ್ಕೌಟ್ ಮತ್ತು ಗೈಡ್
ಮಾಸಿಕ ವಾರ್ತಾಪತ್ರಿಕೆ

# KARNATAKA Scout & Guide
MONTHLY NEWS MAGAZINE

Vol: 20 Issue : 06 June 2023

## ಒಳಪುಟಗಳಲ್ಲಿ...

ರಾಜ್ಯ ಮುಖ್ಯ ಆಯುಕ್ತರ ನುಡಿ ...06
ಸಹಜ ಮಾನವ ...07
ಅಮ್ಮನ ಪ್ರಕೃತಿ ಮಡಿಲು ...08
ಜುಲೈ 2023ರ ಕಾರ್ಯಕ್ರಮಗಳು ...09
ಜಿಲ್ಲಾ ವಾರ್ತೆಗಳು ...10




080-2226 0017, 2226 7470
www.bsgkarnataka.org
The Bharat Scouts & Guides-Karnataka

# ರಾಜ್ಯ ಮುಖ್ಯ ಆಯುಕ್ತರ ನುಡಿ



**ಸಮಸ್ತ ಸ್ಕೌಟ್ಸ್ ಮತ್ತು ಗೈಡ್ಸ್ ಬಂಧುಗಳಿಗೆ ಶುಭಾಶಯಗಳು,**

ಮೇ 31 ರಿಂದ ಶಾಲೆಗಳು ಆರಂಭವಾಗಿವೆ. ರಾಜ್ಯ ಸಂಸ್ಥೆಯಿಂದ ಹೊಸ ಶೈಕ್ಷಣಿಕ ವರ್ಷಕ್ಕೆ ಎಲ್ಲ ವಿದ್ಯಾರ್ಥಿಗಳಿಗೆ ಮತ್ತು ಶಿಕ್ಷಕರುಗಳಿಗೆ ಆತ್ಮೀಯ ಶುಭಾಷಯಗಳು.

ರಾಜ್ಯದಲ್ಲಿ ಹೊಸ ಸರ್ಕಾರ ಅಸ್ತಿತ್ವಕ್ಕೆ ಬಂದಿದೆ. ಸನ್ಮಾನ್ಯ ಮುಖ್ಯಮಂತ್ರಿಗಳು, ಮಾನ್ಯ ಉಪ ಮುಖ್ಯಮಂತ್ರಿಗಳು ಮತ್ತು ಸಚಿವರುಗಳನ್ನು ಭೇಟಿ ಮಾಡಿ, ಚಳವಳಿಯ ಬೆಳವಣಿಗೆಗೆ ಸಹಕಾರ ಕೋರುತ್ತಿದ್ದೇವೆ. ಈಗಾಗಲೇ ಮಾನ್ಯ ಅರಣ್ಯ ಮತ್ತು ಪರಿಸರ ಇಲಾಖೆ ಸಚಿವರಾದ ಶ್ರೀ ಈಶ್ವರ್ ಖಂಡ್ರೆ, ಮಾನ್ಯ ಉನ್ನತ ಶಿಕ್ಷಣ ಸಚಿವರಾದ ಡಾ. ಎಂ.ಸಿ. ಸುಧಾಕರ್, ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರಾದ ಶ್ರೀ ಮಧುಬಂಗಾರಪ್ಪ ಅವರುಗಳನ್ನು ಭೇಟಿ ಮಾಡಿದ್ದೇವೆ. ಮಾನ್ಯ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರಾದ ಶ್ರೀ ಎನ್.ಎಸ್. ಭೋಸರಾಜ್ ರವರು ರಾಜ್ಯದ ಕೇಂದ್ರ ಕಛೇರಿಗೆ ಬಂದು ನಮ್ಮ ಮನವಿಗೆ ಸೂಕ್ತವಾಗಿ ಸ್ಪಂದಿಸಿರುತ್ತಾರೆ. ಅವರೆಲ್ಲರುಗಳು ಸ್ಕೌಟ್ಸ್–ಗೈಡ್ಸ್ ಚಳುವಳಿಯ ಬೆಳವಣಿಗೆಗೆ ಸಹಕಾರ ನೀಡುವ ಭರವಸೆ ನೀಡಿದ್ದಾರೆ ಹಾಗು ಸಂಸ್ಥೆಯ ಕೆಲವು ಮನವಿಗಳಿಗೆ ಸಕಾರಾತ್ಮಕವಾಗಿ ಸ್ಪಂದಿಸಿರುತ್ತಾರೆ.

ಈ ವರ್ಷ ಸಾರ್ವಜನಿಕ ಶಿಕ್ಷಣ ಇಲಾಖೆಯ ಅನುಮತಿಯೊಂದಿಗೆ ರಾಜ್ಯಾದ್ಯಂತ ಎಲ್ಲ ಖಾಸಗಿ, ಅನುದಾನಿತ ಮತ್ತು ಅನುದಾನರಹಿತ ಶಾಲೆಗಳ ಅಥವಾ ಕ್ಲಸ್ಟರ್ ಹಂತಗಳಲ್ಲಿ ಸಂಸ್ಥೆಯಿಂದ ಆಯೋಜಿಸಲಾದ "ಬೇಸಿಗೆ ಶಿಬಿರ"ಗಳು ಯಶಸ್ವಿಯಾಗಿ ಜರುಗಿರುತ್ತವೆ. ಒಂದು ಆಂದೋಲನದಂತೆಯೇ ನಡೆದ ಈ ಶಿಬಿರಗಳಲ್ಲಿ ಒಂದೂವರೆ ಲಕ್ಷಕ್ಕೂ ಹೆಚ್ಚು ಮಕ್ಕಳು ಭಾಗವಹಿಸಿದ್ದು ಹೆಮ್ಮೆಯ ವಿಚಾರ ಮತ್ತು ಇದರಿಂದ ನಮಗೆ ಪ್ರೇರಣೆ ಸಿಕ್ಕಿದೆ. ಚಳುವಳಿಯತ್ತ ಪೋಷಕರು ಮತ್ತಷ್ಟು ಒಲವು ತೋರಲು ಪೂರಕವಾಗಿದ್ದಾರೆಂದು ನಾನು ಆಶಿಸುತ್ತೇನೆ.

ಜೂನ್ ತಿಂಗಳ 5 ರಂದು 'ವಿಶ್ವಪರಿಸರ ದಿನಾಚರಣೆ' ಮತ್ತು 21 ರಂದು 'ವಿಶ್ವ ಯೋಗ ದಿನಾಚರಣೆಯ' ಅಂಗವಾಗಿ ನಮ್ಮ ಎಲ್ಲಾ ಜಿಲ್ಲಾ ಮತ್ತು ಸ್ಥಳೀಯ ಸಂಸ್ಥೆಗಳಲ್ಲಿ ಆಯೋಜಿಸಲಾಗಿದ್ದ ವೈವಿಧ್ಯಮಯ ಕಾರ್ಯಕ್ರಮಗಳಲ್ಲಿ ಸ್ಕೌಟ್ಸ್–ಗೈಡ್ಸ್‌ನ ಲಕ್ಷಾಂತರ ವಿದ್ಯಾರ್ಥಿಗಳು ಭಾಗವಹಿಸಿದ್ದಾರೆ. ಅವರೆಲ್ಲರಿಗೂ ನನ್ನ ಶುಭಾಶಯಗಳು. ನಾವೆಲ್ಲರೂ ಪರಿಸರ ವ್ಯವಸ್ಥೆಯನ್ನು ಅತ್ಯಂತ ಕ್ರಿಯಾತ್ಮಕ ರೂಪದಲ್ಲಿ ಮರಳಿ ತರಲು ಪ್ರಾಮಾಣಿಕ ಪ್ರಯತ್ನ ಮಾಡಬೇಕಾಗುತ್ತದೆ. ನಮ್ಮ ನಮ್ಮ ವಾಸಸ್ಥಾನಗಳನ್ನು, ಸಾರ್ವಜನಿಕ ಸ್ಥಳಗಳನ್ನು ಹಸಿರೀಕರಣಗೊಳಿಸಲು ನಾವೆಲ್ಲರೂ ದೃಢ ನಿರ್ಧಾರ ಮಾಡೋಣ.

ತುಮಕೂರು ಜಿಲ್ಲೆ, ಗುಬ್ಬಿ ತಾಲ್ಲೂಕಿನ ಅಮ್ಮನಘಟ್ಟ ಗ್ರಾಮದ ಪರಿಸರ ಪ್ರೇಮಿ, ಸಹಜ ಕೃಷಿಕ ಶ್ರೀ ಮಹೇಶ್ ರವರ ಪ್ರಕೃತಿಯ ಮಡಿಲಿನಂತಿರುವ ತೋಟ ಮತ್ತವರ ಮಣ್ಣಿನ ಮನೆಯಲ್ಲಿ 'ಮಿಂಚು ಐಡಿಯಸ್' 'ಅಮ್ಮನ ಮಡಿಲು' ಮತ್ತು 'ಭಾರತ್ ಸ್ಕೌಟ್ಸ್ & ಗೈಡ್ಸ್'ನ ಜಂಟಿ ಅಶ್ರಯದಲ್ಲಿ ಕಲಬುರ್ಗಿ, ಬೆಳಗಾವಿ, ಮೈಸೂರು ಮತ್ತು ಬೆಂಗಳೂರು ವಿಭಾಗದ ರೋವರ್ಸ್–ರೇಂಜರ್ಸ್‌ಗಳಿಗೆ ರಾಜ್ಯ ಮಟ್ಟದ 'ಪ್ರಕೃತಿ ಚಿಕಿತ್ಸಾ ಶಿಬಿರ'ವನ್ನು ಸಂಘಟಿಸಲಾಗಿತ್ತು. ಪ್ರಾಯೋಗಿಕವಾಗಿ ಆಯೋಜಿಸಲಾಗಿದ್ದ ಈ ಎರಡು ಶಿಬಿರಗಳಲ್ಲಿ ಭಾಗವಹಿಸಿದ್ದವರೆಲ್ಲರೂ ಅದ್ಭುತವಾದ ಅನುಭವವನ್ನು ಪಡೆದಿದ್ದಾರೆ. ಶ್ರೀ ಮಹೇಶ್ ರವರು ಮುಂದಿನ ದಿನಗಳಲ್ಲಿ ಇಂತಹ ಶಿಬಿರಗಳ ಆಯೋಜನೆಗೆ ನಮ್ಮ ಸಂಸ್ಥೆಯೊಂದಿಗೆ ಕೈಜೋಡಿಸುವ ಇಚ್ಛೆ ಹೊಂದಿದ್ದಾರೆ. ಅವರಿಗೆ ಸಂಸ್ಥೆಯ ಧನ್ಯವಾದಗಳು.

ಕಳೆದ ನಾಲ್ಕು ವರ್ಷಗಳಿಂದ ನಡೆಸಿಕೊಂಡು ಬಂದ ಸಂಪ್ರದಾಯದಂತೆ 2023–24ನೇ ಸಾಲಿನಲ್ಲಿ ರಾಜ್ಯ, ಜಿಲ್ಲೆ ಮತ್ತು ಸ್ಥಳೀಯ ಸಂಸ್ಥೆಗಳ ಮಟ್ಟದಲ್ಲಿ ಹಮ್ಮಿಕೊಳ್ಳಬೇಕಾಗುವ ಕಾರ್ಯಕ್ರಮಗಳು, ಚಟುಟಿಕೆಗಳು ಮತ್ತು ತರಬೇತಿ ಶಿಬಿರಗಳ ಬಗ್ಗೆ ಮಾಹಿತಿಗಳನ್ನೊಳಗೊಂಡ "ವಾರ್ಷಿಕ ಕಾರ್ಯಕ್ರಮಗಳ ಯೋಜನೆ 2023–24" ಪುಸ್ತಕವನ್ನು ಸಿದ್ದಪಡಿಸಿದ್ದು, ಸಂಬಂಧಪಟ್ಟವರಿಗೆಲ್ಲ ರಾಜ್ಯ ಸಂಸ್ಥೆಯಿಂದ ಕಳುಹಿಸಿಕೊಡಲಾಗಿದೆ. ನಮ್ಮ ಎಲ್ಲ ಸ್ಕೌಟ್ಸ್–ಗೈಡ್ಸ್ ಬಂಧುಗಳು ಈ ಪುಸ್ತಕವನ್ನು ಮಾರ್ಗಸೂಚಿ ಅಥವಾ ವೇಳಾಪಟ್ಟಿಯಂತೆ ಸದುಪಯೋಗಪಡಿಸಿಕೊಂಡು ಸೂಚಿಸಿರುವ ಕಾರ್ಯಕ್ರಮಗಳನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಬೇಕೆಂದು ಮನವಿ ಮಾಡುತ್ತೇನೆ. 2023–24ನೇ ಶೈಕ್ಷಣಿಕ ಸಾಲು **"ಗುಣಾತ್ಮಕ ಸ್ಕೌಟ್ಸ್–ಗೈಡ್ಸ್ ವರ್ಷ"**ವಾಗಲಿ ಎಂಬುದು ನನ್ನ ಆಶಯ.

ತರಬೇತಿ ಶಿಬಿರಗಳು ನಮ್ಮ ಚಳುವಳಿಯ ಜೀವಾಳ. ಗುಣಮಟ್ಟದ ತರಬೇತಿಗಳಿಂದ ಮಾತ್ರ ಚಳವಳಿಯ ಸದೃಢ ಬೆಳವಣಿಗೆ ಸಾಧ್ಯವೆಂಬುದು ನನ್ನ ಬಲವಾದ ನಂಬಿಕೆ. ಈ ತಿಂಗಳಿನಲ್ಲಿ ರಾಜ್ಯದ ವಿವಿಧ ಜಿಲ್ಲೆ ಮತ್ತು ತಾಲ್ಲೂಕು ಮಟ್ಟಗಳಲ್ಲಿ, ಮೂಲ ತರಬೇತಿ ಶಿಬಿರಗಳು, ಸ್ಕೌಟ್ಸ್–ಗೈಡ್ಸ್, ಕಬ್–ಬುಲ್ ಬುಲ್ ಶಿಕ್ಷಕ ಶಿಕ್ಷಕಿಯರ ಪ್ರಾಥಮಿಕ ಹಾಗೂ ಮುಂದುವರೆದ ತರಬೇತಿ ಶಿಬಿರಗಳು, ರಾಜ್ಯ ಪುರಸ್ಕಾರ ಪೂರ್ವ ಸಿದ್ದತಾ ತರಬೇತಿ ಶಿಬಿರಗಳು ಮತ್ತು ತೃತೀಯ ಸೋಪಾನ ಪರೀಕ್ಷಾ ಶಿಬಿರಗಳು ಯಶಸ್ವಿಯಾಗಿ ನಡೆಯುತ್ತಿರುವುದು ಸಂತೋಷ ತಂದಿದೆ.

ಜೂನ್ ತಿಂಗಳಿನಲ್ಲಿ ನಡೆದ ನಮ್ಮ ಸಂಸ್ಥೆಯ ರಾಜ್ಯ ಹಣಕಾಸು ಸಮಿತಿ ಹಾಗೂ ರಾಜ್ಯ ಕಾರ್ಯಕಾರಿ ಸಮಿತಿ ಸಭೆಗಳಲ್ಲಿ 2023–24ನೇ ಸಾಲಿನ ಆಯವ್ಯಯ, ಚಟುವಟಿಕೆಗಳು, ತರಬೇತಿ ಕಾರ್ಯಕ್ರಮಗಳ ಯೋಜನೆಗಳ ಬಗ್ಗೆ ಚರ್ಚಿಸಲಾಯಿತು. ಸದಸ್ಯರೆಲ್ಲರೂ ಸಕ್ರಿಯವಾಗಿ ಪಾಲ್ಗೊಂಡು ಸಲಹೆ, ಸೂಚನೆಗಳು ಮತ್ತು ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಎಲ್ಲ ಸದಸ್ಯರುಗಳಿಗೆ ಧನ್ಯವಾದಗಳು.

ಸ್ಕೌಟ್ ಮತ್ತು ಗೈಡ್ ವಂದನೆಗಳೊಂದಿಗೆ,

"ಪ್ರಕೃತಿ ಪ್ರತಿಯೊಬ್ಬ ಮನುಷ್ಯನ ಅಗತ್ಯಗಳನ್ನು ಪೂರೈಸುತ್ತದೆಯೇ ಹೊರತು,
ಆತನ ದುರಾಸೆಯನ್ನಲ್ಲ"
– ಮಹಾತ್ಮ ಗಾಂಧಿ

ತಮ್ಮ ವಿಶ್ವಾಸಿ

(ಪಿ.ಜಿ.ಆರ್. ಸಿಂಧ್ಯ)
ರಾಜ್ಯ ಮುಖ್ಯ ಆಯುಕ್ತರು

"ತಿನ್ನಬಹುದಾದ ಎಲ್ಲವನ್ನೂ ತೆಗೆದುಕೊಳ್ಳಿ ಆದರೆ ತೆಗೆದುಕೊಳ್ಳುವ ಎಲ್ಲವನ್ನೂ ತಿನ್ನಿರಿ, ಆಹಾರವನ್ನು ವ್ಯರ್ಥ ಮಾಡಬೇಡಿ"

# ಸಹಜ ಮಾನವ

ನಾಡೋಜ ಡಾ. ಗೊ.ರು. ಚೆನ್ನಬಸಪ್ಪ
ಗೌರವಾಧ್ಯಕ್ಷರು, ಪ್ರಕಟಣೆಗಳ ಸಮಿತಿ,
ಭಾರತ್ ಸ್ಕೌಟ್ಸ್-ಗೈಡ್ಸ್, ಕರ್ನಾಟಕ

"ಹರಿವ ಹಾವಿಗೆ ಕಾಲು ಕೊಟ್ಟು, ಉರಿವ ಕಿಚ್ಚಿಗೆ ಕೈಯನಿಕ್ಕಿ, ಇರಿವ ಆಯುಧಕ್ಕೆ ಕೊರಳ ಕೊಟ್ಟು, ಮತ್ತೆಂತು ಅರುಹಿರಿಯರಾದಿರಿ?" ಹನ್ನೆರಡನೆಯ ಶತಮಾನದ ಶರಣ ಅರಿವಿನ ಮಾರಿತಂದೆಯ ಈ ಪ್ರಶ್ನೆಯನ್ನು ನಾವು ಗಮನಿಸಬೇಕು. ಹರಿಯುವ ಹಾವಿಗೆ ಕಾಲು ಕೊಟ್ಟರೆ ಅದು ಕಚ್ಚುವುದೆಂದು ತಿಳಿದಿದ್ದರೂ, ಕಾಲು ಕೊಟ್ಟು ಕಚ್ಚಿಸಿಕೊಳ್ಳುವ, ಉರಿಯುವ ಬೆಂಕಿಗೆ ಕೈಯಿಟ್ಟರೆ ಅದು ಸುಡುವುದೆಂದೂ ಗೊತ್ತಿದ್ದರೂ ಅದಕ್ಕೆ ಕೈಯಿಟ್ಟು ಸುಟ್ಟುಕೊಳ್ಳುವ, ಇರಿಯುವ ಕತ್ತಿಗೆ ಕೊರಳು ಕೊಟ್ಟರೆ ಅದು ಕೊಯ್ಯುವುದೆಂದು ಅರಿವಿದ್ದರೂ ಅದಕ್ಕೆ ಕೊರಳು ಕೊಟ್ಟು ಕೊಯ್ಯಿಸಿಕೊಳ್ಳುವ ಜನರನ್ನು ಅರಿತವರು, ಹಿರಿಯರು ಎಂದು ಹೇಗೆ ಹೇಳಲಾದೀತು? ಇದು ಆ ವಚನಕಾರನ ಪ್ರಶ್ನೆ.

ಇಲ್ಲಿ ಅವನು ಹೇಳುವ 'ಹರಿವ ಹಾವು' ನಮ್ಮ ಚಂಚಲದ ಚಿತ್ತ. ಈ ಚಿತ್ತಕ್ಕೆ ನಾವು ಅಧೀನರಾಗುವುದೇ ಹಾವಿಗೆ ಕಾಲು ಕೊಡುವುದು. ಸಿಕ್ಕಿದ ಕಾಲನ್ನು ಹಾವು ಕಚ್ಚದೆ ಬಿಡುವುದಿಲ್ಲ. ಅದು ಕಚ್ಚಿತೆಂದರೆ ವಿಷವೇರುವುದು ತಪ್ಪುವುದಿಲ್ಲ. ಏರಿದ ವಿಷ ಮೈಯನ್ನೆಲ್ಲ ಆವರಿಸದೆ ಇರುವುದಿಲ್ಲ. ತಕ್ಷಣದ ಚಿಕಿತ್ಸೆಯಿಲ್ಲದಿದ್ದರೆ ಫಲಿತಾಂಶ ಹೇಳಬೇಕಾಗಿಲ್ಲ.

ಹಾಗೆಯೇ ಉರಿಯುವ ಬೆಂಕಿಗೆ ಕೈ ಇಡುವುದೂ ಕೂಡ. ಇಟ್ಟ ಕೈಯನ್ನು ಸುಟ್ಟು ಬಿಡುವುದು ಬೆಂಕಿಯ ಸ್ವಭಾವ. ನಾವು ಕೈಯಿಡುವುದು ತಪ್ಪೇ ವಿನಃ ಅದು ಸುಡುವುದು ತಪ್ಪಲ್ಲ. ಬೆಂಕಿ ಇರುವುದೇ ಸುಡಲಿಕ್ಕಾಗಿ. ಸುಟ್ಟುಕೊಂಡ ಕೈಯ ಉರಿ ಅಷ್ಟಕ್ಕೆ ಸೀಮಿತವಾಗಿರುವುದಿಲ್ಲ; ಇಡೀ ದೇಹವನ್ನು ನರಳಿಸುತ್ತದೆ. ಸಕಾಲಕ್ಕೆ ಸರಿಯಾದ ಚಿಕಿತ್ಸೆ ನೀಡದಿದ್ದರೆ ಕೈ ಊನವಾಗಬಹುದು; ಅರಿವಿನ ಮಾರಿತಂದೆ ಹೇಳುವ ಈ 'ಉರಿಯುವ ಕಿಚ್ಚು' ನಮ್ಮಲ್ಲಿ ಹುಟ್ಟಿಕೊಳ್ಳುವ ಆಸೆ. ಈ ಆಸೆಯ ಬೆಂಕಿಗೆ ಬಿದ್ದವರ ಸ್ಥಿತಿಯನ್ನು ಏನೆಂದು ಹೇಳುವುದು? ಅದೊಂದು ದಳ್ಳುರಿ. ಅದಕ್ಕೆ ಸಿಕ್ಕಿದ ಸರ್ವವೂ ನಾಶ.

ಇನ್ನು ಈ ವಚನದಲ್ಲಿ ಬರುವ ಇನ್ನೊಂದು ಮಾತು 'ಇರಿಯುವ ಆಯುಧ'. ಕೊಯ್ಯುವುದು ಅಥವಾ ಕತ್ತರಿಸುವುದೇ ಆಯುಧದ ಕೆಲಸ. ಅದನ್ನು ತಿಳಿದೂ ನಾವೇ ಅದಕ್ಕೆ ಕೊರಳೊಡ್ಡಿದರೆ ಅದು ಬಿಟ್ಟೀತೆ? ತನ್ನ ಕೆಲಸವನ್ನು ತಾನು ಮಾಡುತ್ತದೆ. ಹಾವು ಕಚ್ಚಿದರೆ, ಬೆಂಕಿ ಸುಟ್ಟರೆ ಚಿಕಿತ್ಸೆಯ ಪರಿಹಾರವಾದರೂ ಇದ್ದೀತು. ಆದರೆ ಆಯುಧ ಕತ್ತರಿಸಿದ ಕೊರಳಿಗೆ ಪರಿಹಾರವೆಲ್ಲಿ? ಅಲ್ಲಿ ಸಾವೇ ಗತಿ. ಇಲ್ಲಿನ ಆಯುಧವೆಂದರೆ ಕೋಪ. ಇದು ಅತ್ಯಂತ ಹರಿತ. ನಮ್ಮ ಮೈ ಮನಸ್ಸುಗಳು ಈ ಕೋಪದ ಸೆಳೆತಕ್ಕೆ ಒಳಗಾದರೆ ನಾವು ಪಾಪದ ಕೂಪಕ್ಕೆ ಬೀಳುತ್ತೇವೆ.

ಆದುದರಿಂದ ಚಾಂಚಲ್ಯದ ಚಿತ್ತವನ್ನು ಸ್ಥಿರಗೊಳಿಸಿ, ಕುದಿಯುವ ಆಸೆಯನ್ನು ಆರಿಸಿ, ಕೋಪದ ವ್ಯಾಪಾರಗಳನ್ನು ನಿಯಂತ್ರಿಸಿ, ನಿಶ್ಚಯದ ನಿಲುವಿನಲ್ಲಿ ನಿಲ್ಲಬೇಕೆನ್ನುತ್ತಾನೆ ಈ ವಚನಕಾರ. ಹೀಗೆ ನಮ್ಮ ಚಿತ್ತ ಅತ್ತಿತ್ತ ಹರಿದಾಡದಂತೆ, ನಮ್ಮ ಆಸೆ-ಆಮಿಷಗಳು ಅಡಗುವಂತೆ ಮತ್ತು ನಮ್ಮ ಕೋಪದ ಕೈ ಆಡದಂತೆ ನೋಡಿಕೊಳ್ಳಬೇಕು. ಆಗ ನಮಗೆ ನಾವೇ ದೇವರಾಗುತ್ತೇವೆ.

ನಾವು ದೇವರಾಗುವುದೆಂದರೆ ಗುಡಿಯ ಪೂಜಾ ವಿಗ್ರಹವಾಗುವುದು ಎಂದಲ್ಲ. ನಿಜವಾದ ಮಾನವರಾದರೆ ದೇವರಾದಂತೆಯೇ. ಒಳ್ಳೆಯ ವ್ಯಕ್ತಿಯನ್ನು ಕಂಡಾಗ ಈಗಲೂ ನಮ್ಮ ಹಳ್ಳಿಯ ಜನ 'ಅವನು ದೇವರಂತಹ ಮನುಷ್ಯ' ಎಂದು ಹೇಳುವುದುಂಟು. ಎಂದರೆ ನಾವು ಸಹಜ ಮಾನವರಾಗಬೇಕು. ಹಾವಿಗೆ ಕಾಲುಕೊಡದ, ಕಿಚ್ಚಿಗೆ ಕೈ ಇಡದ, ಕತ್ತಿಗೆ ಕೊರಳು ಕೊಡದ ಪ್ರಜ್ಞಾವಂತರಾಗಬೇಕು.

ಅನೇಕ ವೇಳೆ ಅರಿತವರು, ಹಿರಿಯರು ಎಂದು ಹೇಳಿಕೊಳ್ಳುವವರೇ ಅರ್ಥವಿಲ್ಲದ ಆದರ್ಶಗಳನ್ನು ಬೆನ್ನು ಹತ್ತಿ, ಚಿತ್ತವಿಕಾರಕ್ಕೆ ಬಲಿಯಾಗಿ ಬದುಕನ್ನು ವ್ಯರ್ಥಗೊಳಿಸಿಕೊಂಡಿರುವುದನ್ನು ನಾವು ನೋಡುತ್ತೇವೆ. ಅಂತಹ ಅರಿವಿನ ಹಿರಿತನ ನಮಗೆ ಬೇಡ. ನಾವು ಸಹಜ ಮಾನವರಾಗಿದ್ದರೆ ಸಾಕು.

ಈ ಲೋಕದ ಬದುಕಿದೆ ಬೇಕಾಗಿರುವುದು ಪುರಾಣಗಳು ಚಿತ್ರಿಸುವ ದೇವರಲ್ಲ; ಪ್ರತ್ಯಕ್ಷವಾಗಿ ಕಾಣುವ ಮಾನವ. ಪ್ರಾಮಾಣಿಕವಾಗಿ ದುಡಿಯುವ ಮಾನವ. ಪರಿಸರವನ್ನು ಸಂರಕ್ಷಿಸುವ ಮಾನವ. ಪರಿಪಾಕಗೊಂಡ ಮಾನವ. ಪಕ್ಷಪಾತವಿಲ್ಲದ ಮಾನವ. ಪರಮಾರ್ಥದ ಮಾನವ, ಪರಿವರ್ತನಶೀಲ ಮಾನವ. ಪರಿಶುದ್ಧ ಮನಸ್ಸಿನ ಮಾನವ, ಪರಾಕ್ರಮದ ಮಾನವ, ಪರಿಚರ್ಯೆಯ ಮಾನವ. ಪರಶೋಧನೆಯ ಮಾನವ, ಪರ್ಯಾಲೋಚನೆಯ ಮಾನವ, ಪವಿತ್ರ ಹೃದಯದ ಮಾನವ, ಪ್ರಜ್ಞಾವಂತ ಮಾನವ, ಒಟ್ಟಾರೆ ಪರಿಪೂರ್ಣ ಮಾನವ, ನಾವು ನಂಬಬೇಕೆಂದು ಹೇಳುವ ದೇವನಿರುವುದೇ ಇಂತಹ ಮಾನವನಲ್ಲಿ!

ಅರಿವಿನ ಮಾರಿತಂದೆ ತನ್ನ ವಚನದಲ್ಲಿ 'ಹರಿವ ಚಿತ್ತವ ನಿಲಿಸಿ, ಕುದಿವ ಆಸೆಯ ಕೆಡಿಸಿ, ಸರ್ವವ್ಯಾಪಾರವೆಂಬ ಗೊತ್ತಿಗೆ ಚಿತ್ತವನಿಕ್ಕದೆ ನಿಶ್ಚಯವಾಗಿ ನಿಂದುದು ಆತನಿರವೆ ಸದಾಶಿವ ಮೂರ್ತಿ ಲಿಂಗವು ತಾನೆ' ಎಂದಿದ್ದಾನೆ. ಈ ಮಾತನ್ನು ನಾವು ಅರ್ಥಮಾಡಿಕೊಳ್ಳಬೇಕು. ಅರಿವಿನ ಹಿರಿತನದ ಅಮಲಿನಲ್ಲಿ ಅರಿವುಗಡೆಬಾರದು.

ಹಾವು ಕಚ್ಚುತ್ತದೆ, ಕಿಚ್ಚು ಸುಡುತ್ತದೆ, ಕತ್ತಿ ಕೊಯ್ಯುತ್ತದೆ ಎಂಬ ಅರಿವಿಗೆ ಬೇಕಾದುದು ಶಾಸ್ತ್ರ ಗ್ರಂಥಗಳ ಅಧ್ಯಯನವಲ್ಲ; ಸಾಮಾನ್ಯ ಪ್ರಜ್ಞೆ!

# ಅಮ್ಮನ ಪ್ರಕೃತಿ ಮಡಿಲು




ಪ್ರಪ್ರಥಮ ಬಾರಿಗೆ ರೋವರ್ಸ್–ರೇಂಜರ್ಸ್‌ಗಳಿಗೆ ನೈಸರ್ಗಿಕ ಚಿಕಿತ್ಸೆ ಮತ್ತು ಆರೋಗ್ಯಕರ ಜೀವನಕ್ಕೆ ಸಂಬಂಧಿಸಿದ ರಾಜ್ಯ ಮಟ್ಟದ ತರಬೇತಿ ಶಿಬಿರವನ್ನು ಜೂನ್ 16 ರಿಂದ 20ರ ವರೆಗೆ ಕಲಬುರಗಿ ಮತ್ತು ಬೆಳಗಾವಿ ವಿಭಾಗಗಳಿಗೆ ಹಾಗೂ ಜೂನ್ 22 ರಿಂದ 26ರ ವರೆಗೆ ಬೆಂಗಳೂರು ಮತ್ತು ಮೈಸೂರು ವಿಭಾಗಗಳ ರೋವರ್ಸ್–ರೇಂಜರ್ಸ್‌ಗಳಿಗೆ ಅಮ್ಮನ ಪ್ರಕೃತಿ ಮಡಿಲು ಕಾರ್ಯಕ್ರಮವನ್ನು ಮಣ್ಣಿನ ಮನೆ, ಅಮ್ಮನಗಟ್ಟ (ಗ್ರಾಮ), ಗುಬ್ಬಿ ತಾಲ್ಲೂಕು, ತುಮಕೂರು ಜಿಲ್ಲೆ ಇಲ್ಲಿ ರಾಜ್ಯ ಮುಖ್ಯ ಆಯುಕ್ತರ ಮಾರ್ಗದರ್ಶನದಲ್ಲಿ ಆಯೋಜಿಸಲಾಗಿತ್ತು.

ನೈಸರ್ಗಿಕ ಕೃಷಿ, ನೈಸರ್ಗಿಕ ಚಿಕಿತ್ಸೆ, ಆಹಾರ ಪದ್ಧತಿ, ಸರಳ ಮತ್ತು ನೆಮ್ಮದಿಯ ಜೀವನ, ಮಾತ್ರೆಗಳಿಲ್ಲದೇ ಜೀವನ ಸಾಗಿಸುವುದು, ಹಣದ ಖರ್ಚಿಲ್ಲದೇ ದೈನಂದಿನ ಆಹಾರ ಪದ್ಧತಿಯಲ್ಲಿಯೇ ಆರೋಗ್ಯ ಕಾಪಾಡಿಕೊಳ್ಳುವುದು, ಯೋಗಾಸನಗಳು, ವಿವಿಧ ರೋಗಗಳಿಗೆ ಕಷಾಯಗಳ ತಯಾರಿಕೆ ಕುರಿತು ಮಾಹಿತಿಗಳು, ಇತ್ಯಾದಿ ಉತ್ತಮ ಆರೋಗ್ಯಕ್ಕೆ ಬೇಕಾದ ಮಾಹಿತಿಗಳನ್ನು ನೀಡುವುದು ಈ ತರಬೇತಿಯ ಉದ್ದೇಶವಾಗಿತ್ತು.

ಅದರಂತೆ, ಶ್ರೀ ಎ.ಎಸ್. ಮಹೇಶ್, ಪ್ರಗತಿಪರ ರೈತರು ಅಮ್ಮನಗಟ್ಟ ಇವರ ನಾಯಕತ್ವದಲ್ಲಿ ಪ್ಲಾಸ್ಟಿಕ್ ಬಳಕೆ ನಿಷೇಧ, ರಾಸಾಯನಿಕ ಮುಕ್ತ ಆಹಾರ ಮತ್ತು ಜೀವನ, ಆಯಿಲ್ ಮಸಾಜ್, ಮಣ್ಣಿನ ಸ್ನಾನ(ಮಡ್‌ಬಾತ್), ಪಂಚಭೂತಗಳ ಚಿಕಿತ್ಸೆ ಮತ್ತು ಅದರಿಂದಾಗುವ ಉಪಯೋಗಗಳು, ಕಡಿಮೆ ವಸ್ತು ಬಳಸಿ ಹೆಚ್ಚಿನ ಬೆಳೆ/ಲಾಭ ಪಡೆಯುವ ಬಗ್ಗೆ, ನೈಸರ್ಗಿಕ ಗೊಬ್ಬರ, ನೈಸರ್ಗಿಕ ಸೋಪು, ಶಾಂಪು, ತಲೆಗೆ ಹಚ್ಚುವ ಎಣ್ಣೆ, ಸಕ್ಕರೆ ಕಾಯಿಲೆಯನ್ನು ನಿಯಂತ್ರಿಸುವ ಔಷಧಿಯ ಬಗ್ಗೆ ಹಾಗೂ ಇತ್ಯಾದಿ ಉತ್ತಮ ಆರೋಗ್ಯಕ್ಕೆ ಉಪಯುಕ್ತವಾಗುವ ಮಾಹಿತಿಗಳನ್ನು ರೋವರ್ಸ್–ರೇಂಜರ್ಸ್‌ಗಳಿಗೆ ಅತ್ಯುತ್ತಮವಾಗಿ ತಿಳಿಸಿಕೊಟ್ಟರು.

ರಾಜ್ಯ ಮುಖ್ಯ ಆಯುಕ್ತರು ಶ್ರೀ ಎ.ಎಸ್. ಮಹೇಶ್ ಮತ್ತು ಮಿಂಚು ಐಡಿಯಾ ಸಂಸ್ಥೆ ಸಹಯೋಗದೊಂದಿಗೆ ರೋವರ್ಸ್–ರೇಂಜರ್ಸ್‌ಗಳ ಮೂಲಕ 75 ಗಿಡಗಳನ್ನು (ಸಸಿಗಳನ್ನು) ನೆಡಲಾಯಿತು. ಮಿಂಚು ಐಡಿಯಾ ಸಂಸ್ಥೆ ವತಿಯಿಂದ ಶಿಬಿರದಲ್ಲಿ ಉತ್ತಮವಾಗಿ ಶಿಸ್ತಿನಿಂದ ಸೇವೆ ಸಲ್ಲಿಸಿದ ಮತ್ತು ಸಕ್ರಿಯವಾಗಿ ತೊಡಗಿದ್ದ 3 ಮಕ್ಕಳಿಗೆ ಬಹುಮಾನವನ್ನು ಮತ್ತು ಎಲ್ಲಾ ವಿದ್ಯಾರ್ಥಿಗಳಿಗೆ ಸಿಹಿ ತಿಂಡಿಯನ್ನು ಹಂಚಿದರು.

ಡಾ॥ ಮೌಲ್ಯ, ಯೋಗ ಶಿಕ್ಷಕಿ ರವರು ಆರೋಗ್ಯ ಜೀವನಕ್ಕೆ ಬೇಕಾದ ಯೋಗಾಸನಗಳು ಮತ್ತು ಪ್ರಾಣಾಯಾಮಗಳನ್ನು ತಿಳಿಸಿಕೊಟ್ಟರು. ಶ್ರೀ ಮೋಹನ್ ಕುಮಾರ್, ಸಂಪನ್ಮೂಲ ವ್ಯಕ್ತಿ ರವರು ಮೌಲ್ಯವರ್ಧಕದಿಂದ ಹೆಚ್ಚಿನ ಲಾಭಗಳಿಸುವ ಬಗ್ಗೆ ತಿಳಿಸಿಕೊಟ್ಟರು. ಕಲಬುರಗಿ ಮತ್ತು ಬೆಳಗಾವಿ ವಿಭಾಗಗಳಿಂದ 26 ರೋವರ್ಸ್–ರೇಂಜರ್ಸ್‌ಗಳು ಹಾಗೂ ಬೆಂಗಳೂರು ಮತ್ತು ಮೈಸೂರು ವಿಭಾಗಗಳಿಂದ 18 ರೋವರ್ಸ್–ರೇಂಜರ್ಸ್‌ಗಳು ಭಾಗವಹಿಸಿರುತ್ತಾರೆ.

ಶ್ರೀಮತಿ ಸುಶೀಲ ಮಹದೇವ್, ಶ್ರೀ ಗಂಗಾಧರ್, ಎಲ್.ಟಿ(ಸ್ಕೌ) ಹಾಗೂ ಕು. ಪಲ್ಲವಿ ರವರು ಈ ತರಬೇತಿ ಶಿಬಿರದಲ್ಲಿ ಸಹಾಯಕರಾಗಿ ಸೇವೆ ಸಲ್ಲಿಸಿರುತ್ತಾರೆ. ಶ್ರೀಮತಿ ಮಲ್ಲೇಶ್ವರಿ ಜುಜಾರೆ, ಸಹಾಯಕ ರಾಜ್ಯ ಸಂಘಟನಾ ಆಯುಕ್ತರು(ಗೈಡ್) ಹಾಗೂ ರೇಂಜರಿಂಗ್ ಇನ್‌ಚಾರ್ಜ್‌ರವರು ಎರಡು ಶಿಬಿರಗಳ ಸಂಪೂರ್ಣ ಜವಾಬ್ದಾರಿಯನ್ನು ಉತ್ತಮವಾಗಿ ನಿರ್ವಹಿಸಿ ಶಿಬಿರಗಳನ್ನು ಯಶಸ್ವಿಯಾಗಿ ನಡೆಸಿರುತ್ತಾರೆ.

ಶಿಬಿರಕ್ಕೆ ಮಾನ್ಯ ಶ್ರೀ ಪಿ.ಜಿ.ಆರ್.ಸಿಂಧ್ಯ, ರಾಜ್ಯ ಮುಖ್ಯ ಆಯುಕ್ತರು ಹಾಗೂ ಶ್ರೀ ಎಂ.ಪ್ರಭಾಕರ್ ಭಟ್, ರಾಜ್ಯ ಸಂಘಟನಾ ಆಯುಕ್ತರು (ಸ್ಕೌಟ್) ರವರು ಭೇಟಿ ನೀಡಿ ದಿನಾಂಕ –––––– ರಂದು ಶಿಬಿರದಲ್ಲಿ ಪಾಲ್ಗೊಂಡ ರೋವರ್ಸ್–ರೇಂಜರ್ಸ್‌ಗಳನ್ನು ಪ್ರೋತ್ಸಾಹಿಸಿದರು.

# ಜುಲೈ 2023ರ ಕಾರ್ಯಕ್ರಮಗಳು

| ಕ್ರ.ಸಂ | ಕಾರ್ಯಕ್ರಮದ ಹೆಸರು | ದಿನಾಂಕ | ಸ್ಥಳ |
|---|---|---|---|
| 01 | ಮಳೆ ಕೊಯ್ಲು/ನೀರು ಇಂಗಿಸುವ ಕಾರ್ಯಕ್ರಮ | ಜುಲೈ 2023 | ದಳ ಹಂತಗಳಲ್ಲಿ |
| 02 | ಪೋಷಕರ ದಿನಾಚರಣೆ (ಪೋಷಕರಿಗೆ ರಂಗೋಲಿ ಮುಂತಾದ ಸ್ಪರ್ಧೆಗಳನ್ನು ಏರ್ಪಡಿಸಿ, ಬಹುಮಾನವನ್ನು ನೀಡುವುದು. ಮಕ್ಕಳಿಂದ ಗ್ರೀಟಿಂಗ್ ಕಾರ್ಡ್, ಹೂಗುಚ್ಛ ಇತ್ಯಾದಿಗಳನ್ನು ಸಿದ್ಧಪಡಿಸಿ ಪೋಷಕರುಗಳಿಗೆ ನೀಡುವುದು) | 23 ಜುಲೈ 2023 | ದಳ ಹಂತಗಳಲ್ಲಿ |
| 03 | ಕಾರ್ಗಿಲ್ ವಿಜಯೋತ್ಸವ ಕ್ಯಾಂಡಲ್ ಲೈಟ್ ಮೆರವಣಿಗೆ, ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಮಾಜಿ ಸೈನಿಕರಿಗೆ ಗೌರವ ಸಮರ್ಪಣೆ | 26 ಜುಲೈ 2023 | ದಳ ಹಂತಗಳಲ್ಲಿ |
| 04 | ಚಿಣ್ಣರ ವನದರ್ಶನ | ಜುಲೈ 2023 | ದಳ ಹಂತಗಳಲ್ಲಿ |
| 05 | ಕಬ್-ಬುಲ್‌ಬುಲ್, ಸ್ಕೌಟ್-ಗೈಡ್, ರೋವರ್-ರೇಂಜರ್ ಗಳಿಗೆ ಪ್ರತಿಜ್ಞೆ ಮತ್ತು ನಿಯಮದ ಬಗ್ಗೆ- ಎಡ್.ಡಿ.ಜಿ.ಗಳಿಗ ಅನ್ವಯವಾಗುವಂತೆ ತರಬೇತಿ ನೀಡುವುದು | ಜುಲೈ 2023 | ದಳ ಹಂತಗಳಲ್ಲಿ |
| 06 | ಸ್ಕೌಟ್ಸ್-ಗೈಡ್ಸ್; ಕಬ್-ಬುಲ್‌ಬುಲ್ಸ್ ಪದಕ ತರಬೇತಿ ಶಿಬಿರ | ಜುಲೈ 2013 | ಸ್ಥಳೀಯ ಮಟ್ಟ |
| 07 | ಕಬ್ಸ್-ಬುಲ್‌ಬುಲ್ಸ್‌ಗಳಿಗೆ ಜಿಲ್ಲಾ ಮಟ್ಟದ ಪದಕ ತರಬೇತಿ ಶಿಬಿರ | ಜುಲೈ 2023 | ಎಲ್ಲಾ ಜಿಲ್ಲಾ ಮಟ್ಟ |
| 08 | ದಳನಾಯಕರುಗಳಿಗೆ ಸುಸ್ಥಿರ ಅಭಿವೃದ್ಧಿ ಗುರಿಗಳ ಮಾಹಿತಿ ಸಂಕಿರಣ | ಜುಲೈ 2023 | ವಿಭಾಗೀಯ ಮಟ್ಟ |
| 09 | ಜಿಲ್ಲಾ ವಾರ್ಷಿಕ ಮಹಾಸಭೆ (ಪರಿಷತ್ ಸಭೆ) | ಜುಲೈ 2023 | ಜಿಲ್ಲಾ ಮಟ್ಟ |
| 10 | ಎಲ್ಲಾ ಮಹಿಳಾ ಕಾಲೇಜುಗಳಲ್ಲಿ ರೇಂಜರ್ಸ್‌ಗಳಿಗೆ ಜಿಲ್ಲಾ ಮಟ್ಟದ ಪ್ರೇರಣಾ ಕಾರ್ಯಕ್ರಮ | ಜುಲೈ, ಆಗಸ್ಟ್, ಸೆಪ್ಟೆಂಬರ್ 2023 | ಜಿಲ್ಲಾ ಮಟ್ಟ |
| 11 | ರೋವರ್ಸ್-ರೇಂಜರ್ಸ್‌ಗಳಿಗೆ ನಿಪುಣ್ ಪರೀಕ್ಷಾ ಶಿಬಿರ | ಜುಲೈ/ಆಗಸ್ಟ್ 2023 | ಜಿಲ್ಲಾ ಮಟ್ಟ |
| 12 | ಎಸ್.ಎಸ್.ಎಲ್.ಸಿ. ಸಾಧಕರಿಗೆ ಅಭಿನಂದನೆ | ಜುಲೈ 2023 ಬೆಂ., | ರಾಜ್ಯ ಕೇಂದ್ರ ಕಛೇರಿ |
| 13 | ರೇಂಜರ್ಸ್‌ಗಳಿಗೆ ರಾಜ್ಯ ಮಟ್ಟದ ಪ್ರೇರಣಾ ಕಾರ್ಯಕ್ರಮ ಉದ್ಘಾಟನಾ ಶಿಬಿರ<br>ದಿ. 4.7.2023 ರಂದು ದಿ॥ ವೈ.ವಿ.ಕೆ. ಮೂರ್ತಿ, ಮಾಜಿ ಮುಖ್ಯ ಸ್ಕೌಟ್ ಆಯುಕ್ತರು ಅವರ ಹುಟ್ಟುಹಬ್ಬ | ಜುಲೈ 2023<br>ಕಾಲೇಜು, ಚೆನ್ನಗಿರಿ, ದಾವಣಗೆರೆ | ಸರ್ಕಾರಿ ಪ್ರಥಮ ದರ್ಜೆ |
| 14 | ಸಂಘಟಕರುಗಳಿಗೆ ಮಾಹಿತಿ ತಂತ್ರಜ್ಞಾನ ವಿಶೇಷ ತರಬೇತಿ | ಜುಲೈ 2023 | ರಾಜ್ಯ ಕೇಂದ್ರ, ಕಛೇರಿ, ಬೆಂ., |
| 15 | ಕಬ್ಸ್-ಬುಲ್‌ಬುಲ್ಸ್‌ಗಳಿಗೆ ಬಂಗಾರದ ಬಾಣ ನೊಂದಾವಣೆ ಕಾರ್ಯಕ್ರಮ | ಜುಲೈ 2023 | - |
| 16 | ಆನ್‌ಲೈನ್ ಡಿಡಿಪಿಐ (ಆಡಳಿತ ಮತ್ತು ಅಭಿವೃದ್ಧಿ) ಪಿ.ಯು ಡಿಡಿಪಿಯು ಸಭೆ | ಜುಲೈ 2023 | ರಾಜ್ಯ ಮಟ್ಟ |
| 17 | ಆನ್‌ಲೈನ್ ಬಿ.ಇ.ಓ./ನೋಡಲ್ ಅಧಿಕಾರಿಗಳ ಸಭೆ | ಜುಲೈ 2023 | ವಿಭಾಗೀಯ ಮಟ್ಟ |
| 18 | ರೋವರ್ಸ್-ರೇಂಜರ್ಸ್ ಮತ್ತು ಹಿರಿಯ ಸ್ಕೌಟ್ಸ್-ಗೈಡ್ಸ್‌ಗಳಿಗೆ ಶಿಂಷಾ, ಪವರ್ ಪ್ಲಾಂಟ್ ಭೇಟಿ ಮತ್ತು ಪ್ರಕೃತಿ ಅಧ್ಯಯನ ಶಿಬಿರ (1ನೇ ಏಷ್ಯಾ-ಹೈಡ್ರೋಜನ್‌ಪವರ್ ಜನರೇಟ್ ಭೇಟಿ) | ಜುಲೈ 2023 | ಚಾಮರಾಜನಗರ |
| 19 | ಮೂರಾರ್ಜಿ ದೇಸಾಯಿ/ಏಕಲವ್ಯ/ಕಿತ್ತೂರು ರಾಣಿ ಚೆನ್ನಮ್ಮ/ ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆಗಳ ಶಿಕ್ಷಕರಿಗೆ ಸ್ಕೌಟ್ ಮಾಸ್ಟರ್ಸ್ & ಗೈಡ್ ಕ್ಯಾಪ್ಟನ್ಸ್‌ಗಳಿಗೆ ರಾಜ್ಯ ಮಟ್ಟದ ಮೂಲ ತರಬೇತಿ ಶಿಬಿರ | ಜುಲೈ 2023 | ಇನ್ನು ನಿರ್ಧರಿಸಬೇಕಿದೆ |

– ರಾಜ್ಯ ಕಾರ್ಯದರ್ಶಿ



# ಜಿಲ್ಲಾ ವಾರ್ತೆಗಳು

## ಬೆಳಗಾವಿ

ಜೂನ್ 04 ರಿಂದ 06ರ ವರಗೆ ಜಿಲ್ಲಾ ಸಂಸ್ಥೆ ಬೆಳಗಾವಿ ಇಲ್ಲಿ ಜಿಲ್ಲಾ ಮಟ್ಟದ ರಾಜ್ಯ ಪುರಸ್ಕಾರ ರೋವರ್ ಮತ್ತು ರೇಂಜರ್‌ಗಳ ಪೂರ್ವ ತಯಾರಿ ಶಿಬಿರವನ್ನು ಆಯೋಜಿಸಲಾಯಿತು. ಸದರಿ ಶಿಬಿರಕ್ಕೆ ಸ್ಕೌಟ್–ಗೈಡ್ ಜಿಲ್ಲಾ ಮುಖ್ಯ ಆಯುಕ್ತರು ಹಾಗೂ ಉಪಾಧ್ಯಕ್ಷರು ಭಾರತ್ ಸ್ಕೌಟ್–ಗೈಡ್ ಕರ್ನಾಟಕ ಶ್ರೀ ಗಜಾನನ ಮನ್ನಿಕೇರಿರವರು ಭೇಟಿ ನೀಡಿ ರೋವರ್–ರೇಂಜರ್‌ಗಳಿಗೆ ಮತ್ತು ಶಿಬಿರದ ನಾಯಕರುಗಳಿಗೆ ಶುಭ ಕೋರಿದರು.

* ಜೂನ್ 05 ರಂದು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಬೆಳಗಾವಿ ಹಾಗೂ ಭಾರತ್ ಸ್ಕೌಟ್ಸ್–ಗೈಡ್ಸ್, ಕರ್ನಾಟಕ – ಜಿಲ್ಲಾ ಸಂಸ್ಥೆ ಬೆಳಗಾವಿ ಇವರುಗಳ ಸಂಯುಕ್ತಾಶ್ರಯದಲ್ಲಿ ಸ್ಕೌಟ್ಸ್ –ಗೈಡ್ ಭವನದಲ್ಲಿ "ವಿಶ್ವ ಪರಿಸರ ದಿನಾಚರಣೆ"ಯನ್ನು ಆಯೋಜಿಸಲಾಗಿತ್ತು. ಮೊದಲಿಗೆ ರೋವರ್–ರೇಂಜರ್‌ಗಳಿಂದ ಪರಿಸರ ದಿನಾಚರಣೆಯ ಜಾಗೃತಿ ಜಾಥಾಕ್ಕೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಪರಿಸರ ಅಧಿಕಾರಿಗಳು ಶ್ರೀಮತಿ ಶೋಭಾ ಲ. ಪೋಳ ಇವರು ಚಾಲನೆ ನೀಡಿದರು. ನಂತರ ಸ್ಕೌಟ್ ಭವನದ ಆವರಣದಲ್ಲಿ ಸಸಿ ನೆಡುವುದರ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಸದರಿ ಕಾರ್ಯಕ್ರಮದಲ್ಲಿ ಅತಿಥಿ ಉಪನ್ಯಾಸಕರಾಗಿ ಡಾ. ವೀರಣ್ಣ. ಡಿ.ಕೆ., ಗೌರವ ಕಾರ್ಯದರ್ಶಿ ಇನ್ಸ್ಟಿಟ್ಯೂಷನ್ ಆಫ್ ಇಂಜನಿಯರ್ಸ್ ಬೆಳಗಾವಿ ನಿರ್ದೇಶಕರು ಐ.ಇ.ಎಂ.ಎಸ್. 'ಬಿ' ಸ್ಕೂಲ್ ಹುಬ್ಬಳ್ಳಿ ಇವರು "ಪರಿಸರದ ಕುರಿತು ಮಾತನಾಡುತ್ತಾ ಪರಿಸರ ಸಂರಕ್ಷಣೆ ನಮ್ಮೆಲ್ಲರ ಹೊಣೆ. ಪರಿಸರ ಇಲ್ಲವೆಂದರೆ ನಾವು ಬದುಕುವುದು ಕಷ್ಟ" ಎಂದು ಹೇಳಿದರು. ವೈಜ್ಞಾನಿಕ ಪರಿಸರ ಅಧಿಕಾರಿಗಳು ಡಾ. ಜಿ.ಎಂ. ಪಾಟೀಲ, ವಲಯ ಹಿರಿಯ ಪರಿಸರ ಅಧಿಕಾರಿಗಳು ಕ.ರಾ.ಮಾ.ನಿ ಮಂಡಳಿ ಬೆಳಗಾವಿ ಶ್ರೀ ಗೋಪಾಲ ಸಣತಂಗಿ, ಉಪನ್ಯಾಸಕರು ಶ್ರೀ ಕೆ.ಎಲ್.ಇ. ಲಿಂಗರಾಜ ಮಹಾವಿದ್ಯಾಲಯ ಬೆಳಗಾವಿ ಡಾ. ಜಿ.ಎನ್. ಶೀಲಿ, ಶ್ರೀ ಕೆ.ಬಿ. ಹಿರೇಮಠ ಕಾರ್ಯದರ್ಶಿಗಳು ಬೇಸ್ ಬೆಳಗಾವಿ ಇವರುಗಳು ಉಪಸ್ಥಿತರಿದ್ದರು. 160 ರೋವರ್–ರೇಂಜರ್‌ಗಳು ಭಾಗವಹಿಸಿದ್ದರು. ಶ್ರೀ ಡಿ.ಬಿ. ಅತ್ತಾರ ಕಾರ್ಯಕ್ರಮ ನಿರೂಪಿಸಿ ಸ್ವಾಗತಿಸಿದರು. ಶ್ರೀ ವಿಠ್ಠಲ ಎಸ್.ಬಿ. ವಂದಿಸಿದರು.

* ಜೂನ್ 07 ಮತ್ತು 08 ರಂದು ಜಿಲ್ಲಾ ಸಂಸ್ಥೆ ಬೆಳಗಾವಿ ಇಲ್ಲಿ ಜಿಲ್ಲಾ ಮಟ್ಟದ ರಾಜ್ಯ ಪುರಸ್ಕಾರ ಸ್ಕೌಟ್ಸ್–ಗೈಡ್ಸ್‌ಗಳ ಪೂರ್ವ ತಯಾರಿ ಶಿಬಿರವನ್ನು ಆಯೋಜಿಸಲಾಯಿತು. ಸದರಿ ಶಿಬಿರಕ್ಕೆ ಸ್ಕೌಟ್–ಗೈಡ್ ಜಿಲ್ಲಾ ಆಯುಕ್ತರು(ಗೈ) ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳು ಶ್ರೀ ರಾಯಬಾಗ ಅವರು ಭೇಟಿ ನೀಡಿ ಸ್ಕೌಟ್ಸ್–ಗೈಡ್ಸ್‌ಗಳಿಗೆ ಶುಭ ಕೋರಿದರು.

* ಜೂನ್ 09 ರಿಂದ 10ರ ವರೆಗೆ ಸವದತ್ತಿ ನಗರದ ಗುರುಭವನದಲ್ಲಿ ಜರುಗಿದ ತಾಲ್ಲೂಕು ಮಟ್ಟದ ಸ್ಕೌಟರ್–ಗೈಡರ್‌ಗಳ ಪುನಶ್ಚೇತನ ತರಬೇತಿ ಶಿಬಿರವನ್ನು ಜಿಲ್ಲಾ ಮುಖ್ಯ ಆಯುಕ್ತರು ಶ್ರೀ ಗಜಾನನ ಮನ್ನಿಕೇರಿ ಇವರು ಸಸಿಗೆ ನೀರು ಹಾಕುವ ಮೂಲಕ ಉದ್ಘಾಟಿಸಿದರು. ವೇದಿಕೆಯಲ್ಲಿ ಉಪಸ್ಥಿತರಿದ್ದ ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಸಹಾಯಕ ಜಿಲ್ಲಾ ಆಯುಕ್ತರು ಸ್ಕೌಟ್ ಶ್ರೀ ಎಸ್.ಸಿ. ಕರೀಕಟ್ಟಿ ಮಾತನಾಡಿ ತರಬೇತಿಯಲ್ಲಿ ಭಾಗವಹಿಸಿದ ಶಿಕ್ಷಕರುಗಳು ಸ್ವ–ಇಚ್ಛೆಯಿಂದ ನಿಮ್ಮ ಹಂತದಲ್ಲಿ ಘಟಕಗಳನ್ನು ಮುಂದುವರೆಸಿ. ಏನಾದರೂ ಸಮಸ್ಯೆಗಳು ಬಂದಲ್ಲಿ ಕಛೇರಿಯಿಂದ ಸಹಾಯ ಸಹಕಾರ ನೀಡುತ್ತೇವೆಂದು ಹೇಳಿದರು. ಶ್ರೀ ಗುದಗಪ್ಪನವರ ಕಾರ್ಯಕ್ರಮ ನಿರೂಪಿಸಿದರು. ಶ್ರೀ ವಿ.ಎಚ್. ಪಾಟೀಲ ವಂದಿಸಿದರು. ಶಿಬಿರದಲ್ಲಿ 75ಕ್ಕೂ ಹೆಚ್ಚು ಸ್ಕೌಟರ್–ಗೈಡರ್‌ಗಳು ಭಾಗವಹಿಸಿದ್ದರು.





* ಜೂನ್ 20 ರಂದು ಬೆಳಗಾವಿ ನಗರದ ಲಿಂಗರಾಜ ಮಹಾವಿದ್ಯಾಲಯದ ಕೇಂದ್ರ ಸಭಾ ಭವನದಲ್ಲಿ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಜಿಲ್ಲಾ ಮಟ್ಟದಲ್ಲಿ ಆಯೋಜಿಸಿದ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ಮಕ್ಕಳಿಗೆ "ಪ್ರಶಸ್ತಿ ವಿತರಣಾ ಸಮಾರಂಭ"ದ ಉದ್ಘಾಟನೆಯನ್ನು ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸದಸ್ಯ ಕಾರ್ಯದರ್ಶಿಗಳು ಕಾನೂನು ಸೇವೆಗಳ ಪ್ರಾಧಿಕಾರ ಬೆಳಗಾವಿಯ ಶ್ರೀಯುತ ಪಿ. ಮುರಳಿಮನೋಹರ ರೆಡ್ಡಿ, ಇವರು ಸಸಿಗೆ ನೀರು ಹಾಕುವ ಮೂಲಕ ನೆರವೇರಿಸಿದರು. ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಂಶುಪಾಲರಾದ ಡಾ. ಎಚ್.ಎಸ್. ಮೇಲಿನಮನಿ ವಹಿಸಿದ್ದರು. ಪರಿಸರದ ದಿನಾಚರಣೆ ಕುರಿತು ಪರಿಸರ ಅಧಿಕಾರಿಗಳು ಕ.ರಾ.ಮಾ.ನಿ ಮಂಡಳಿ ಬೆಳಗಾವಿ ಶ್ರೀಮತಿ ಶೋಭಾ ಲ. ಪೋಳ ಪ್ರಾಸ್ತಾವಿಕವಾಗಿ ಮಾತನಾಡಿದರು. ವಲಯ ಹಿರಿಯ ಪರಿಸರ ಅಧಿಕಾರಿಗಳು ಕ.ರಾ.ಮಾ.ನಿ ಮಂಡಳಿ ಬೆಳಗಾವಿ ಶ್ರೀ ಗೋಪಾಲಕೃಷ್ಣ ಸಣತಂಗಿ, ಪರಿಸರದ ಕುರಿತು ಉಪನ್ಯಾಸ ನೀಡಿದರು. ವೈಜ್ಞಾನಿಕ ಪರಿಸರ ಅಧಿಕಾರಿಗಳು ಶ್ರೀ ಜಿ.ಎಂ. ಪಾಟೀಲ ಹಾಗೂ ಕಚೇರಿಯ ಎಲ್ಲ ಅಧಿಕಾರಿಗಳು ಉಪಸ್ಥಿತರಿದ್ದರು. ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ಸ್ಕೌಟ್-ಗೈಡ್ ಮಕ್ಕಳಿಗೆ ಉದ್ಘಾಟಕರು ಮತ್ತು ಮುಖ್ಯ ಅತಿಥಿಗಳು ಪ್ರಶಸ್ತಿ ಪ್ರದಾನ ಮಾಡಿದರು. ಕಾರ್ಯಕ್ರಮದಲ್ಲಿ ಜಿಲ್ಲಾ ಸಂಘಟಕರುಗಳು ಉಪಸ್ಥಿತರಿದ್ದರು.



* ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ ಬೈಲಹೊಂಗಲ, ಸ್ಥಳೀಯ ಸಂಸ್ಥೆ ಬೈಲಹೊಂಗಲ, ಶ್ರೀ ಸೋಮೇಶ್ವರ ಸುಗರ್ಸ ಬೆಳವಡಿ ಮತ್ತು ಶ್ರೀ ವಿಜಯಕಾಂತ್ ಡೈರಿ ಮತ್ತು ಫುಡ್ ಪ್ರಾಡಕ್ಟ್. ಲಿ. ನೇಗಿನಹಾಳ ಇವರಗಳ ಸಹಯೋಗದಲ್ಲಿ ಬೈಲಹೊಂಗಲ ತಾಲ್ಲೂಕಿನ ಸ್ಕೌಟ್-ಗೈಡ್ಸ್ ವಿದ್ಯಾರ್ಥಿಗಳಿಗೆ ಪ್ರಾಥಮಿಕ, ಪ್ರೌಢ ಹಾಗೂ ಕಾಲೇಜು ವಿಭಾಗಗಳಲ್ಲಿ ಪರಿಸರ ದಿನಾಚರಣೆ ನಿಮಿತ್ಯವಾಗಿ ವಿವಿಧ ಸ್ಪರ್ಧೆಗಳನ್ನು ಶಾಸಕರ ಮಾದರಿ ಶಾಲೆ ನಂ.4ರಲ್ಲಿ ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀ ಎ.ಎನ್. ಪ್ಯಾಟಿಯವರು ಪರಿಸರವನ್ನು ನಾವು ಸಂರಕ್ಷಿಸಬೇಕಾದರೆ ಮೊದಲು ತಿಳುವಳಿಕೆಯನ್ನು ಹೊಂದಬೇಕಾಗುತ್ತದೆ. ಏಕ ಬಳಕೆಯ ಪ್ಲಾಸ್ಟಿಕ್‌ನ್ನು ಸ್ಕೌಟ್-ಗೈಡ್ಸ್ ವಿದ್ಯಾರ್ಥಿಗಳು ಬಳಸದೆ ಪರಿಸರವನ್ನು ಸ್ವಚ್ಛ ಹಾಗು ಸುಂದರ ಮಾಡಬೇಕು" ಎಂದರು. ಕಾರ್ಯಕ್ರಮವನ್ನು ಶ್ರೀ ಮಂಜುನಾಥ ಕಡಸಗಟ್ಟಿ ನಿರೂಪಿಸಿದರು. ಶ್ರೀಮತಿ ಯುವರಾಣಿ ಎಸ್. ವಂದನೆ ಸಲ್ಲಿಸಿದರು ಕಾರ್ಯಕ್ರಮದ ಉಸ್ತುವಾರಿಯನ್ನು ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ ಶ್ರೀ ಅಜ್ಜಪ್ಪ ಅಂಗಡಿ ವಹಿಸಿದ್ದರು.

* ಜೂನ್ 15 ರಂದು ಕಿತ್ತೂರ ನಾಡ ವಿದ್ಯಾವರ್ಧಕ ಸಂಘದ ಕಲಾ ಮತ್ತು ವಾಣಿಜ್ಯ ಮಹಾ ವಿದ್ಯಾಲಯದಲ್ಲಿ ರೋವರ್-ರೇಂಜರ್ ಘಟಕಗಳ ಉದ್ಘಾಟನಾ ಸಮಾರಂಭ ಜರುಗಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಸ್ಥೆಯ ಅಧ್ಯಕ್ಷರಾದ ಶ್ರೀ ಜೆ.ವಿ. ವಸ್ತ್ರದ ವಹಿಸಿದ್ದರು. ಸಂಘದ ನಿರ್ದೇಶಕರಾದ ಶ್ರೀ ವಳಸಂಗ, ಕಾಲೇಜಿನ ಪ್ರಾಂಶುಪಾಲರಾದ ಡಾ. ಜಿ.ಕೆ. ಭೂಮನಗೌಡರ್, ರೋವರ್ ಲೀಡರ್ ಶ್ರೀ ಎ.ಕೆ. ಕರೆಪ್ಪನವರ, ರೇಂಜರ್ ಲೀಡರ್ ಶ್ರೀಮತಿ ಪ್ರಿಯಾಂಕಾ ಧಾಮೋನೆ ಹಾಗೂ ಎ.ಎಸ್.ಓ.ಸಿ. ಸ್ಕೌಟ್ ಶ್ರೀ ಡಿ.ಬಿ. ಅತ್ತಾರ, ಶ್ರೀ ವಿಠ್ಠಲ ಎಸ್.ಬಿ. ಉಪಸ್ಥಿತರಿದ್ದರು. ಐಕ್ಯೂಎಸಿ ಸಂಯೋಜಕರಾದ ಶ್ರೀಮತಿ ಆರ್.ಬಿ. ಹವಿನಾಳೆ ಕಾರ್ಯಕ್ರಮ ನಿರೂಪಿಸಿದರು. ಶ್ರೀ ಎಂ.ಕೆ. ಕರೆಪ್ಪನವರ ವಂದಿಸಿದರು.




* ಸರಕಾರಿ ಪ್ರಥಮ ದರ್ಜೆ ಮಹಾವಿದ್ಯಾಲಯ ಬೀಡಿ ತಾಲ್ಲೂಕು, ಖಾನಾಪೂರದಲ್ಲಿ ರೋವರ್-ರೇಂಜರ್ ಘಟಕಗಳ ಉದ್ಘಾಟನಾ ಸಮಾರಂಭ ಜರುಗಿತು. ಕಾರ್ಯಕ್ರಮವನ್ನು ಎ.ಎಸ್.ಓ.ಸಿ. ಸ್ಕೌಟ್ ಶ್ರೀ ಡಿ.ಬಿ. ಅತ್ತಾರ ಮತ್ತು ಶ್ರೀ ವಿಠ್ಠಲ ಎಸ್.ಬಿ. ಸಸಿಗೆ ನೀರು ಹಾಕುವ ಮೂಲಕ ಉದ್ಘಾಟಿಸಿದರು. ನಂತರ ಸ್ಕೌಟಿಂಗ್ ಚಳುವಳಿಯ ಕುರಿತು ಮಾಹಿತಿಯನ್ನು ನೀಡಲಾಯಿತು. ಅಧ್ಯಕ್ಷತೆಯನ್ನು ಕಾಲೇಜಿನ ರೇಂಜರ್ ಲೀಡರ್ ಮತ್ತು ಪ್ರಾಂಶುಪಾಲರಾದ ಡಾ. ಮಂಜುಳಾ ಸವದತ್ತಿ ವಹಿಸಿದ್ದರು. ರೋವರ್ ಲೀಡರ್ ಶ್ರೀ ತಿಪ್ಪೇಶ ಬಿ. ಪ್ರಾಸ್ತಾವಿಕವಾಗಿ ಮಾತನಾಡಿದರು. ವೇದಿಕೆಯಲ್ಲಿ ಕಾಲೇಜಿನ ಎಲ್ಲ ಪ್ರಾಧ್ಯಾಪಕರುಗಳು ಉಪಸ್ಥಿತರಿದ್ದರು. 50ಕ್ಕೂ ಹೆಚ್ಚು ರೋವರ್-ರೇಂಜರ್‌ಗಳು ಭಾಗವಹಿಸಿದ್ದರು.

## ಬೆಂಗಳೂರು ದಕ್ಷಿಣ

ಜೂನ್ 05 ರಂದು ವಿಶ್ವ ಪರಿಸರ ದಿನಾಚರಣೆಯನ್ನು ಬೆಂಗಳೂರು ದಕ್ಷಿಣ ಜಿಲ್ಲೆಯ ಸ್ಥಳಿಯ ಮತ್ತು ದಳ ಮಟ್ಟದಲ್ಲಿ ಆಯೋಜಿಸಲಾಯಿತ್ತು. ಮತ್ತು ಪರಿಸರ ಮಾಲಿನ್ಯ ಇಲಾಖೆಯ ವತಿಯಿಂದ ಆಯೋಜಿಸಿದ



ಶಾಂತಿ ಜಾಥದಲ್ಲಿ 410 ಸ್ಕೌಟ್ಸ್–ಗೈಡ್ಸ್, ರೋವರ್ಸ್–ರೇಂಜರ್ಸ್ ಭಾಗವಹಿಸಿದ್ದರು.

* ಜೂನ್ 05 ರಂದು ವಿಶ್ವ ದಿನಾಚರಣೆಯ ಅಂಗವಾಗಿ ಸಸಿ ನೆಡುವ ಕಾರ್ಯಕ್ರಮವನ್ನು ಬೆಂಗಳೂರು ದಕ್ಷಿಣ ಜಿಲ್ಲಾ ಸಂಸ್ಥೆಯ ವಿಜಯನಗರ ಸ್ಥಳೀಯ ಸಂಸ್ಥೆಯ ವತಿಯಿಂದ ಸೇಕ್ರೆಡ್ ಚಿಲ್ಡ್ರನ್ ಸ್ಕೂಲ್ ಅಪೂರ್ವಿ ಸನಪಿ ಚಾರಿಟೇಬಲ್ ಟ್ರಸ್ಟ್ ಹಾಗೂ ಚಿಕ್ಕನಹಳ್ಳಿ ಗ್ರಾಮ ಪಂಚಾಯಿತಿ ಇವರ ಸಹಯೋಗದೊಂದಿಗೆ ಹಮ್ಮಿಕೊಳ್ಳಲಾಯಿತ್ತು. ಕಾರ್ಯಕ್ರಮಕ್ಕೆ ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯಾರವರು ಮುಖ್ಯ ಅತಿಥಿಯಾಗಿ ಭಾಗವಹಿಸಿದರು. ಕಾರ್ಯಕ್ರಮದಲ್ಲಿ ಶ್ರೀ ಬಸವರಾಜು, ಶ್ರೀಯುತ ಜಿ.ವಿ. ರಾಜು, ಶ್ರೀಮತಿ ಭಾಗ್ಯಮ್ಮ ಹನುಮಂತಯ್ಯ, ಶ್ರೀಮತಿ ನೀಲವ್ವ ಅಂದಪ್ಪ ಹಳ್ಳಿರವರು, ಡಾ. ಮಂಜುನಾಥ್ ಹಾಗೂ ಸ್ಥಳೀಯ ಸಂಸ್ಥೆ ಪದಾಧಿಕಾರಿಗಳು ಭಾಗವಹಿಸಿದರು.



* ಜೂನ್ 10 ರಂದು ಬೆಂಗಳೂರು ದಕ್ಷಿಣ ಜಿಲ್ಲಾ ಸಂಸ್ಥೆಯ ವತಿಯಿಂದ ಜಿಲ್ಲಾ ಸ್ಕೌಟ್ಸ್–ಗೈಡ್ಸ್, ರೋವರ್ಸ್–ರೇಂಜರ್ಸ್ ಮತ್ತು ದಳ ನಾಯಕರುಗಳಿಗೆ "ಪರ್ಪಲ್ ಸಾಟರ್ ಡೇ" ಕಾರ್ಯಕ್ರಮವನ್ನು ಆಯೋಜನೆ ಮಾಡಲಾಯಿತು. ಕಾರ್ಯಕ್ರಮದಲ್ಲಿ ಪ್ರಾವೀಣ್ಯತ ಪದಕ ಬಗ್ಗೆ, ದಳ ನಾಯಕರುಗಳಿಗೆ ವಾರ್ಷಿಕ ಕಾರ್ಯಕ್ರಮದ ಯೋಜನೆ ಬಗ್ಗೆ ಶ್ರೀ ಟಿ.ಕೆ. ನಾರಾಯಣಸ್ವಾಮಿ ಎಲ್.ಟಿ.(ಸ್ಕೌ) ಜಿಲ್ಲಾ ತರಬೇತಿ ಆಯುಕ್ತರು ಮಾಹಿತಿಯನ್ನು ನೀಡಿದರು. ಮ್ಯಾಪಿಂಗ್ ಮತ್ತು ಕಾಂಪ್ಪಸ್ ಬಗ್ಗೆ ಶ್ರೀ ಜೀತೇಶ್ ಹೆಚ್.ಡಬ್ಲ್ಯೂ.ಬಿ(ಸ್ಕೌ)ರವರು ಮಕ್ಕಳಿಗೆ ಮಾಹಿತಿಯನ್ನು ನೀಡಿದರು. ಕಾರ್ಯಕ್ರಮದಲ್ಲಿ ಶ್ರೀ ಪಿ. ಪಳನಿ, ಜಿಲ್ಲಾ ಆಯುಕ್ತರು(ಸ್ಕೌ), ಜಿಲ್ಲಾ ರೋವರ್ಸ್–ರೇಂಜರ್ಸ್, ಸ್ಕೌಟ್ಸ್–ಗೈಟ್ಸ್ ಪ್ರಾವೀಣ್ಯಕ ಪದಕ ಬಗ್ಗೆ ಮಾಹಿತಿಯನ್ನು ನೀಡಿದರು. ಕಾರ್ಯಕ್ರಮದಲ್ಲಿ 200 ಸ್ಕೌಟ್ಸ್–ಗೈಡ್ಸ್, ರೋವರ್ಸ್–ರೇಂಜರ್ಸ್ ಮತ್ತು ದಳ ನಾಯಕರುಗಳು ಭಾಗವಹಿಸಿದರು.




* ಜೂನ್ 16 ರಂದು ಬೆಂಗಳೂರು ದಕ್ಷಿಣ ಜಿಲ್ಲೆಯ ಚಾಮರಾಜ ಪೇಟೆಯ ಸ್ಥಳಿಯ ಅನಿಕೇತನ ಪಬಿಕ್ಲ್ ಶಾಲೆಯ ದಳ ಉದ್ಘಾಟನಾ ಸಮಾರಂಭವನ್ನು ಹಮ್ಮಿಕೊಳ್ಳಲಾಯಿತ್ತು. ಈ ಕಾರ್ಯಕ್ರಮಕ್ಕೆ ಮುಖ್ಯ ಅಥಿತಿಯಾಗಿ ಶ್ರೀ ಎಂ.ಎ. ಚಲ್ಲಯ್ಯ, ಸ್ಕೌಟಿಂಗ್ ಹಿರಿಯ ನಾಯಕರು ಆಗಮಿಸಿ ದಳವನ್ನು ಉದ್ಘಾಟಿಸಿ ಮಕ್ಕಳನ್ನು ಉದ್ದೇಶಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಶಾಲೆಯ ಚೆರ್‌ಮೇನ್‌ರವರಾದ ಶ್ರೀ ಅಶ್ವಥ್, ಶಾಲೆಯ ಕಾರ್ಯದರ್ಶಿಗಳಾದ ನಾಗೇಂದ್ರ, ದಳ ನಾಯಕಿರಾದ ಸುನೀತಾ ಸಿಂಗ್ ಎಸ್, ಸ್ಕೌಟ್ಸ್–ಗೈಡ್ಸ್ ಮಕ್ಕಳು ಕಾರ್ಯಕ್ರಮದಲ್ಲಿ ಭಾಗವಹಿಸಿದರು.



## ಬೆಂಗಳೂರು ಉತ್ತರ

ಬೆಂಗಳೂರು ಉತ್ತರ ಜಿಲ್ಲೆ ವತಿಯಿಂದ ಜಿಲ್ಲಾ ಮಟ್ಟದ ಸ್ಕೌಟ್ಸ್–ಗೈಡ್ಸ್ ಕಬ್–ಬುಲ್‌ಬುಲ್ ಶಿಕ್ಷಕರ ಪ್ರಾಥಮಿಕ ಶಿಬಿರವು ಮೇ 27 ರಿಂದ ಜೂನ್ 02ರ ವರೆಗೆ ಡಾ. ಅನ್ನಿ ಬೆಸೆಂಟ್, ಸ್ಕೌಟ್ಸ್–ಗೈಡ್ಸ್ ತರಬೇತಿ ಮತ್ತು ಶಿಬಿರ ಕೇಂದ್ರ ದೊಡ್ಡಬಳ್ಳಾಪುರ ಇಲ್ಲ ನಡೆಯಿತು. ಜಿಲ್ಲಾದ್ಯಂತ 25 ಸ್ಕೌಟ್ಸ್ ಮಾಸ್ಟರ್, 32 ಗೈಡ್ಸ್ ಕ್ಯಾಪ್ಟನ್, 13 ಕಬ್ ಮಾಸ್ಟರ್, 18 ಫ್ಲಾಕ್ ಲೀಟರ್ ಶಿಕ್ಷಕ ಶಿಕ್ಷಕಿಯರು ತರಬೇತಿ ಪಡೆದರು. ಸ್ಕೌಟ್ಸ್ ವಿಭಾಗದ ನಾಯಕರಾಗಿ ಶ್ರೀ ಬಿ. ಆನಂದ ಅಡಿಗ, ಗೈಡ್ಸ್ ವಿಭಾಗದ ನಾಯಕರಾಗಿ ಶ್ರಿಮತಿ ಅರುಣಮಾಲ, ಕಬ್ ವಿಭಾಗದ ನಾಯಕರಾಗಿ ಶ್ರೀಮತಿ ಸಂದ್ಯಾ ರಾಣಿ, ಫ್ಲಾಕ್ ವಿಭಾಗದ ನಾಯಕರಾಗಿ ಶ್ರೀಮತಿ ಪುಷ್ಪವಿಜಯನ್ ಇವರು ಸಹಕರಿಸಿದರು. ಸಹನಾಯಕರಾಗಿ, ಶ್ರಿ ಮೋಹನ್ ಕುಮಾರ್, ಶ್ರೀ ಯೋಗಿಶ್, ಶ್ರೀ ವಿತೇಶ್ ಕಾಂಚಾನ್, ಶ್ರೀಮತಿ ಚಂದ್ರಕಲಾ, ಶ್ರಿಮತಿ ಸುನೀತಾ, ಜಿಲ್ಲಾ ಕಾರ್ಯದರ್ಶಿ ಶ್ರೀ ಬಿ.ಕೆ. ಶೇಷಾದ್ರಿ ಇವರು ಸಹಕರಿಸಿದರು. ಮೇ 28 ರಂದು ರಾಜ್ಯ ಮುಖ್ಯ ಆಯುಕ್ತರು ಶ್ರೀ ಪಿ.ಜಿ.ಆರ್. ಸಿಂದ್ಯಾ ಆಗಮಿಸಿ ಭಾಗವಹಿಸಿದ ಶಿಕ್ಷಕರಿಗೆ ಸ್ಕೌಟಿಂಗ್ ಮಾಡಿರುವ ಕಾರ್ಯಗಳು ಹಾಗು ಶಿಬಿರಾರ್ಥಿಗಳು ಸ್ಕೌಟಿಂಗ್ ಹೇಗೆ ಬೆಳೆಸಬೇಕೆಂದು ಕರೆ ನೀಡಿ ಶುಭ ಹಾರೈಸಿದರು ಬಿ.ಬಿಎಂ.ಪಿ. ಮಾಜಿ ಸಂಯೋಜಕಾರದ ಶ್ರೀ ಎಂ.ಎ. ಚೆಲ್ಲಯ್ಯ ಆಗಮಿಸಿದ್ದರು. ಶಿಬಿರದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಸಹಾಯಕ ರಾಜ್ಯ ಆಯುಕ್ತ ಶ್ರೀ ಎನ್. ಶ್ರೀನಿವಾಸನ್, ರಾಜ್ಯ ಆಯುಕ್ತ (ವಯಸ್ಕ ಸಂಪನ್ಮೂಲ) ಶ್ರೀ ಸಿ.ಎಸ್. ರೆಡ್ಡಿ, ರಾಜ್ಯ ತರಬೇತಿ ಆಯುಕ್ತಕರು ಸ್ಕೌಟ್ಸ್–ಗೈಡ್ಸ್‌ರಾದ ಶ್ರೀ ನಾಗೇಶ್ ಆರ್. ಶಿವಪುರ, ಶ್ರೀಮತಿ ಶ್ಯಾಮಲ ಕೆ.ವಿ. ಆಗಮಿಸಿ ಶುಭ ಹಾರೈಸಿದರು.









* ಬೆಂಗಳೂರು ಉತ್ತರ ಜಿಲ್ಲೆ ವತಿಯಿಂದ ಜಿಲ್ಲಾ ಮಟ್ಟದ ರೋವರ್ಸ್/ ರೇಂಜರ್ಸ್ ನಿಪುಣ್ ಪರೀಕ್ಷಾ ಶಿಬಿರವು ಮೇ 28 ರಿಂದ 30ರ ವರೆಗೆ ಡಾ. ಅನ್ನಿ ಬೆಸೆಂಟ್ ಸ್ಕೌಟ್ಸ್-ಗೈಡ್ಸ್ ತರಬೇತಿ ಮತ್ತು ಶಿಬಿರ ಕೇಂದ್ರ ದೊಡ್ಡಬಳ್ಳಾಪುರ ಇಲ್ಲ ನಡೆಯಿತು. ರೋವರ್ ವಿಭಾಗದ ನಾಯಕರಾಗಿ ಶ್ರೀ ಸತ್ಯಜೀತ್ ಚಟಾರ್ಜಿ, ಎ.ಎಲ್.ಟಿ. (ರೋವರ್) ಹಾಗೂ ರೇಂಜರ್ ವಿಭಾಗದ ನಾಯಕರಾಗಿ ಶ್ರೀಮತಿ ಶುಭ, ನಾಯಕರಾಗಿ ಸಹಕರಿಸಿದರು. ಸಹನಾಯಕರಾಗಿ ರೋವರ್ ವಿಭಾಗದಲ್ಲಿ ಶ್ರೀ ವಿತೇಶ್ ಕಾಂಚಾನ್, ರೇಂಜರ್ ವಿಭಾಗದಲ್ಲಿ ಕು॥ ಸಿಂಧು, ರೇಂಜರ್ ಲೀಡರ್ ಇವರು ಸಹಕರಿಸಿದರು. ಜಿಲ್ಲಾದ್ಯಂತ 110 ರೋವರ್-ರೇಂಜರ್ ಶಿಬಿರದಲ್ಲಿ ಭಾಗವಹಿಸಿದರು.

* ಯಲಹಂಕ ಸ್ಥಳೀಯ ಸಂಸ್ಥೆ ವತಿಯಿಂದ ದ್ವೀತಿಯ ಸೋಪನಾ ಪರೀಕ್ಷಾ ಶಿಬಿರ ಜೂನ್ 10 ಹಾಗೂ 11 ರಂದು ನ್ಯೂಟೌನ್ ಪಬ್ಲಿಕ್ ಸ್ಕೂಲ್ ಯಲಹಂಕದಲ್ಲಿ ನಡೆಯಿತು. ಶಿಬಿರದ ಉದ್ಘಾಟನೆಯನ್ನು ಯಲಹಂಕ ಸ್ಥಳೀಯ ಸಂಸ್ಥೆಯ ಅಧ್ಯಕ್ಷರಾದ ಶ್ರೀಮತಿ ರಾಣಿ ಸುಸಾಯಿ ನೇರವೇರಿಸಿದರು. ಮುಖ್ಯ ಅತಿಥಿಯಾಗಿ ಶ್ರೀಮತಿ ವನಿತಾ ನಾರಾಯಣ್, ಜಿಲ್ಲಾ ಗೈಡ್ ಆಯುಕ್ತರು, ಶ್ರೀ ಅನಂತ್ ಆಚಾರ್, ಜಿಲ್ಲಾ ಸಹ ಆಯುಕ್ತರು, ಶ್ರೀ ರಾಮ್ ಸಿಂಗ್ ಠಾಕೂರ್, ಸ್ಥಾನಿಯ ಆಯುಕ್ತ ಉಪಸ್ಥಿತರಿದ್ದರು. ಶಿಬಿರದಲ್ಲಿ 250 ಸ್ಕೌಟ್ಸ್-ಗೈಡ್ಸ್ ಭಾಗವಹಿಸಿದ್ದರು. ಶಿಬಿರವನ್ನು ಶ್ರಿ ಮೋಹನ್ ಕುಮಾರ್ ಯಲಹಂಕ ಕಾರ್ಯದರ್ಶಿ ಶಿಬಿರವನ್ನು ಸಂಘಟಿದಿಸಿದರು.



* ಯಲಹಂಕ ಸ್ಥಳೀಯ ಸಂಸ್ಥೆಯ ವಿಡಿಯಾ ಪೂರ್ಣಪ್ರಜ್ಞಾಸ್ಕೂಲ್. ಟಿ.ದಾಸರಹಳ್ಳಿ ಇಲ್ಲಿ ಸ್ಕೌಟ್ಸ್- ಗೈಡ್ಸ್‌ಗಳು ಬೆಂಕಿ ಬಳಸಿ ಆಹಾರ ಪದಾರ್ಥವನ್ನು ತಯಾರಿಸಿ ಹೊಸ ಅನುಭವ ಪಡೆದಕೊಂಡರು. ಶಾಲೆಯ ಪ್ರಾಂಶುಪಾಲರಾದ ಶ್ರೀ ಕೆ.ಎಸ್. ಶ್ರೀಧರ್ ಇವರು ಸ್ಕೌಟ್ಸ್-ಗೈಡ್ಸ್ ಕಾರ್ಯಕ್ರಮವನ್ನು ಗುರುತಿಸಿ ಶ್ಲಾಘಿಸಿದರು. ಮುಖ್ಯ ಶಿಕ್ಷಕರು ಶ್ರೀಮತಿ ಭುವನೇಶ್ವರಿ ಪ್ರಾಥಮಿಕ ವಿಭಾಗ ಇವರು ಸ್ಕೌಟ್ಸ್-ಗೈಡ್ಸ್ ತಯಾರಿಸಿದ ಆಹಾರದ ರುಚಿ-ಸವಿದರು ಹಾಗೂ ಶ್ರೀಮತಿ ಶೋಭ ಪಿ.ಪಿ. ಲೇಡಿ ಸ್ಕೌಟ್ಸ್ ಮಾಸ್ಟರ್ ಕಾರ್ಯಕ್ರಮವನ್ನು ಸಂಘಟಿಸಿದರು.

* ಸ್ಕೌಟ್ಸ್-ಗೈಡ್ಸ್ ನಡಿಗೆ ಹಳ್ಳಿ ಕಡೆಗೆ ಎಂಬ ಸಮುದಾಯ ಸೇವಾ ಕಾರ್ಯಕ್ರಮದಡಿಯಲ್ಲಿ 11ನೇ ತಿಂಗಳ ಕಾರ್ಯಕ್ರಮವು ಮೇ 21 ರಂದು ಗಂಟಿಗಾನಹಳ್ಳಿಯಲ್ಲಿ ಯಲಹಂಕ ಬೆಂಗಳೂರಿಲ್ಲಿ ಸಮುದಾಯ ಸೇವೆ ಮಾಡಲಾಯಿತು. ಗಂಟಿಗಾನಹಳ್ಳಿಯ ನದಿಯ ದಂಡೆಯಲ್ಲಿ ಶೇಖರಣೆಗೊಂಡ ಪ್ಲಾಸ್ಟಿಕ್ ತ್ಯಾಜ್ಯವನ್ನು ತೆಗೆದು ಸ್ವಚ್ಚಗೊಳಿಸಲಾಯಿತು. ಕಾರ್ಯಕ್ರಮಕ್ಕೆ ಗಂಟಿಗಾನಗಾಹಳ್ಳಿಯ ರಸ್ತೆಯಲ್ಲಿರುವ ಸರ್ಕಲ್‌ನ್ನು ಸ್ವಚ್ಛತೆ ಮಾಡಲಾಯಿತು. ಹಾಗು ಪಿ.ಡಿ.ಒ.ರವರು ತಮ್ಮ ಸಹಕಾರ ನೀಡಿದರು






ಹಾಗು ನಮ್ಮ ಜತೆ ಸೇವೆಯಲ್ಲಿ ಭಾಗವಹಿಸಿದ್ದರು. ಬೆಂಗಳೂರು ಉತ್ತರ ಜಿಲ್ಲೆಯ ವಿವಿಧ ಕಾಲೇಜುಗಳಿಂದ 42 ಜನ ಭಾಗವಹಿಸಿದ್ದರು.

## ಬೆಂಗಳೂರು ಪೂರ್ವ

ಜೂನ್ 05 ರಂದು "ವಿಶ್ವ ಪರಿಸರ ದಿನಾಚರಣೆ" ಪ್ರಯುಕ್ತ ಎಲ್ಲಾ ಶಾಲಾ ಕಾಲೇಜುಗಳಲ್ಲೂ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ಸಸಿ ನೆಡುವ ಕಾರ್ಯಕ್ರಮ, ಜನ ಜಾಗೃತಿ ಜಾಥಾ, ಚಿತ್ರಕಲಾ ಸ್ಪರ್ಧೆ, ಬೀದಿ ನಾಟಕ ಇನ್ನೂ ಮುಂತಾದ ಕಾರ್ಯಕ್ರಮಗಳಲ್ಲಿ ಸ್ಕೌಟ್ಸ್-ಗೈಡ್ಸ್, ರೋವರ್ಸ್-ರೇಂಜರ್‌ಗಳು ಭಾಗವಹಿಸಿದ್ದರು.



* ಜೂನ್ 09 ರಿಂದ 11ರ ವರೆಗೆ ಎಸ್.ಎಫ್.ಎಸ್. ಕಾಲೇಜಿನ ರೋವರ್-ರೇಂಜರ್‌ಗಳಿಗಾಗಿ ಬೇಸಿಗೆ ಶಿಬಿರ ಆಯೋಜಿಸಲಾಗಿತ್ತು. ಶಿಬಿರವನ್ನು ಜಿಲ್ಲಾ ಕಾರ್ಯದರ್ಶಿ ಶ್ರೀ ಎ.ಎನ್. ನರೇಂದ್ರಕುಮಾರ್ ಉದ್ಘಾಟಿಸಿದರು. ಕಾಲೇಜಿನ ಉಪ ಪ್ರಾಂಶುಪಾಲರಾದ ಶ್ರೀ ರೆವೆರೆಂಡ್ ಫಾದರ್ ಜಿಜೊ ಜೋಸ್‌ರವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ ಶ್ರೀ ಪಿ. ಪ್ರಸನ್ನಕುಮಾರ್, ರೋವರ್ ಸ್ಕೌಟ್ ಲೀಡರ್ ಶ್ರೀ ಆರ್. ಸಂಪತ್ ಕುಮಾರ್, ರೇಂಜರ್ ಲೀಡರ್ ಶ್ರೀ ಕ್ರಿಸ್ಟೀನ ಮೇರಿ ಮೊದಲಾದವರು ಉಪಸ್ಥಿತರಿದ್ದರು. ಸುಮಾರು 60ಕ್ಕೂ ಹೆಚ್ಚು ರೋವರ್ಸ್ ಮತ್ತು ರೇಂಜರ್ಸ್ ಶಿಬಿರದಲ್ಲಿ ಭಾಗವಹಿಸಿದ್ದರು.



## ಚಾಮರಾಜನಗರ

ಜೂನ್ 05 ರಂದು "ವಿಶ್ವ ಪರಿಸರ ದಿನಾಚರಣೆ" ಅಂಗವಾಗಿ ಅರಣ್ಯ ಇಲಾಖೆ ಹಾಗೂ ಚಾಮರಾಜನಗರ ಜಿಲ್ಲಾ ಸಂಸ್ಥೆ ಇವರ ಸಹಯೋಗದೊಂದಿಗೆ ಚಾಮರಾಜನಗರದ ಶ್ರೀ ಕರಿವರದ ರಾಜನ ವೃಕ್ಷ ವನದಲ್ಲಿ "ಬಿತ್ತೋತ್ಸವ" ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮದಲ್ಲಿ ಅರಣ್ಯ ಇಲಾಖೆಯ ಶ್ರೀಮತಿ ದೀಪ್ ಜೆ. ಕಂಟ್ರಾಕ್ಟರ್, ಅರಣ್ಯ ಸಂರಕ್ಷಣಾಧಿಕಾರಿಗಳು ಮತ್ತು ನಿರ್ದೇಶಕರು (ಡಿ.ಸಿಎಫ್., ಬಿ.ಆರ್.ಟಿ.) ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳಾದ ಡಿ.ಎಚ್.ಓ. ಡಾ. ವಿಶ್ವೇಶ್ವರಯ್ಯ, ಸಾಧನ ಸಂಸ್ಥೆಯ ಶ್ರೀ ಸುರೇಶ್ ಹಾಗೂ ಅರಣ್ಯ ಇಲಾಖೆಯ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು. ಈ ಕಾರ್ಯಕ್ರಮದಲ್ಲಿ ಮೊದಲಿಗೆ ಪರಿಸರ ದಿನಾಚರಣೆಯ ಪ್ರಯುಕ್ತ ಅರಣ್ಯ ಸಂರಕ್ಷಣಾಧಿಕಾರಿಗಳು ಪರಿಸರದಿಂದ ಮನುಕುಲಕ್ಕೆ ಆಗುವ ಪರಿಣಾಮಗಳನ್ನು ತಿಳಿಸಿದರು. ನಂತರ ಅರಣ್ಯ ಸುತ್ತಲೂ "ಬಿತ್ತೋತ್ಸವ" ಕಾರ್ಯಕ್ರಮವನ್ನು ಪ್ರಾರಂಭಿಸಲಾಯಿತು. ಈ ಕಾರ್ಯಕ್ರಮದಲ್ಲಿ ಸೇವಾ ಭಾರತಿ ಪ್ರಥಮ ದರ್ಜೆ ಕಾಲೇಜು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಕುದೇರು, ಜೆ.ಎಸ್.ಎಸ್. ಮಹಿಳಾ ಕಾಲೇಜು, ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಗುಂಡ್ಲುಪೇಟೆಯ ಸುಮಾರು 80 ರೋವರ್ಸ್ ಮತ್ತು ರೇಂಜರ್ಸ್‌ಗಳು ಭಾಗವಹಿಸಿದ್ದರು.

* ಜೂನ್ 11 ರಂದು ಸಂಜೆ 5 ಗಂಟೆಯಿಂದ 6.30 ಗಂಟೆಯವರೆಗೆ ವರ್ಚುಯಲ್ ಶಿಬಿರಾಗ್ನಿ ಕಾರ್ಯಕ್ರಮವನ್ನು ಭೂಮಿ ವಿಷಯ ಕುರಿತು ಹಮ್ಮಿಕೊಳ್ಳಲಾಗಿತ್ತು. ಈ ಭೂಮಿ ಸಂರಕ್ಷಣೆ ಭೂಮಿ ಉಪಯೋಗ



ಮತ್ತು ಮಾನವ ಅತಿ ದುರಾಸೆಯಿಂದ ಭೂಮಿ ಮೇಲೆ ಉಂಟಾಗುವ ದುಷ್ಪರಿಣಾಮ ಕುರಿತು ಸ್ಕೌಟ್ಸ್-ಗೈಡ್ಸ್, ರೋವರ್ಸ್-ರೇಂಜರ್ಸ್ ವಿದ್ಯಾರ್ಥಿಗಳು ಮಾತನಾಡಿದರು. ಈ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯಾರವರು ಭಾಗವಹಿಸಿ ಮಕ್ಕಳನ್ನುದ್ದೇಶಿಸಿ ಹಿತನುಡಿ ನುಡಿದು ಹಾರೈಸಿದರು. ಈ ಸಂದರ್ಭದಲ್ಲಿ ರಾಜ್ಯ ಸಂಘಟನಾ ಆಯುಕ್ತರಾದ ಶ್ರೀ ಎಂ. ಪ್ರಭಾಕರ್ ಭಟ್‌ರವರು ಹಾಗೂ ಕೊಪ್ಪಳ ಜಿಲ್ಲೆಯ ಜಿಲ್ಲಾ ಸ್ಕೌಟ್ ಆಯುಕ್ತರು ಶ್ರೀ ಮಲ್ಲಿಕಾರ್ಜುನ್ ಚೌಕಿಮಠ್‌ರವರು ಭಾಗವಹಿಸಿದ್ದರು.

## ಚಿಕ್ಕಮಗಳೂರು

ಜೂನ್ 01 ರಿಂದ 03ರ ತನಕ ನರ್ಚರ್ ಇಂಟರ್ನ್ಯಾಷನಲ್ ಶಾಲೆಯಲ್ಲಿ ಬೇಸಿಗೆ ಶಿಬಿರ ನಡೆಯಿತು 263 ಕ್ಕಿಂತಲೂ ಹೆಚ್ಚು ಸ್ಕೌಟ್–ಗೈಡ್, ಕಬ್–ಬುಲ್‌ಬುಲ್‌ಗಳು ಭಾಗವಹಿಸಿದ್ದರು.

* ಜೂನ್ 03 ರಂದು ಶ್ರೀ ಆದಿಚುಂಚನಗಿರಿ ಪ್ರೌಢಶಾಲೆ, ಹೌಸಿಂಗ್ ಬೋರ್ಡ್, ಚಿಕ್ಕಮಗಳೂರು ಇಲ್ಲಿ ಬೇಸಿಗೆ ಶಿಬಿರ ನಡೆಯಿತು. 64 ಸ್ಕೌಟ್ ಮತ್ತು ಗೈಡ್ ವಿದ್ಯಾರ್ಥಿಗಳು ಭಾಗವಹಿಸಿದ್ದರು.

* ಜೂನ್ 05 ರಂದು ಬಿ.ಜಿ.ಎಸ್. ಆಂಗ್ಲ ಮಾಧ್ಯಮ ಶಾಲೆ ಹೌಸಿಂಗ್ ಬೋರ್ಡ್ ಇಲ್ಲಿ ವಿಶ್ವಪರಿಸರ ದಿನವನ್ನು ಆಚರಿಸಲಾಯಿತು. ಶಾಲಾ ಮುಖಸ್ಥರು ಹಾಗೂ ಶಾಲಾ ಶಿಕ್ಷಕ ವೃಂದದವರು ಭಾಗವಹಿಸಿದ್ದರು.

* ಜೂನ್ 05 ರಂದು ಐ.ಡಿ.ಎಸ್.ಜಿ. ಕಾಲೇಜ್ ಇದರ ರೋವರ್ಸ್ ಮತ್ತು ರೇಂಜರ್ಸ್‌ಗಳಗಳ ನೂತನ ಘಟಕಗಳನ್ನು ಶ್ರೀ ಎಂ.ಎನ್. ಷಡಕ್ಷರಿ, ಜಿಲ್ಲಾ ಮುಖ್ಯ ಆಯುಕ್ತರು ಉದ್ಘಾಟಿಸಿದರು. ಜಿಲ್ಲಾ ತರಬೇತಿ ಆಯುಕ್ತರು ಶ್ರೀಮತಿ ಸಂಧ್ಯಾರಾಣಿ, ಜಿಲ್ಲಾ ಸಂಘಟನಾ ಆಯುಕ್ತಾರಾದ ಶ್ರೀ ಬಿ.ಎನ್. ಕಿರಣ್‌ಕುಮಾರ್, ಎಸ್.ಜಿ.ವಿ. ನಿಹಾಲ್., ಎನ್.ಎಸ್., ಕಾಲೇಜಿನ ಪ್ರಾಂಶುಪಾಲರಾದ ಶ್ರೀ ರಮೇಶ್, ಕಾಲೇಜಿನ ಆರ್.ಎಸ್.ಎಲ್. ಶ್ರೀಮತಿ ಸುಧಾ ಹಾಗೂ ಎಲ್ಲಾ ರೋವರ್ಸ್–ರಂಜರ್ಸ್‌ಗಳು ಉಪಸ್ಥಿತರಿದ್ದರು.

* ಜೂನ್ 06 ರಂದು ಚಿಕ್ಕಮಗಳೂರು ಜಿಲ್ಲೆಯ ಸಿ.ಆರ್.ಪಿ., ಬಿ.ಆರ್.ಸಿ., ಇ.ಸಿ.ಓ., ಟಿ.ಪಿ.ಓ.ಗಳ ಒಂದು ದಿನದ ಮಾಹಿತಿ ಶಿಬಿರವನ್ನು ಜಿಲ್ಲಾ ಸಂಸ್ಥೆ ವತಿಯಿಂದ ಆಯೋಜಿಸಲಾಯಿತು. ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀ ಎಸ್.ಆರ್. ಮಂಜುನಾಥ್ ಮಾತನಾಡಿ ಸ್ಕೌಟ್ ಗೈಡ್ ವಿದ್ಯಾರ್ಥಿಗಳಲ್ಲಿ ಕೌಶಲ್ಯ ನಾಯಕತ್ವ ಗುಣದೊಂದಿಗೆ ಸಾಧನ ಮನೋಭಾವ ಬೆಳೆಸಲಿದೆ ಈ ತರಬೇತಿಯನ್ನು ಕರಗತ ಮಾಡಿಕೊಂಡು ಸಾಧನ ತೋರುವಂತೆ ತಿಳಿಸಿದರು.



* ಸ್ಥಳೀಯ ಸಂಸ್ಥೆ ಮೂಡಿಗೆರೆ ಇಲ್ಲಿ ಜೂನ್ 09 ರಂದು ಸಿ.ಆರ್.ಪಿ. ಮತ್ತು ಬಿ.ಆರ್.ಪಿ. ಸಭೆಯನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಯಲ್ಲಿ ನಡೆಸಲಾಯಿತು. ಈ ಸಭೆಯಲ್ಲಿ ಚೇರ್ಮನ್ ಶ್ರೀ ಹೇಮಂತ್ ರಾಜ್, ಅಧ್ಯಕ್ಷರಾದ ಶ್ರೀ ಮಗ್ಗಲ ಮಕ್ಕಿ ಗಣೇಶ್, ಉಪಾಧ್ಯಕ್ಷರಾದ ಶ್ರೀ ಹಮೀದ್, ಜಿಲ್ಲಾ ಸಂಘಟಕರಾದ ಶ್ರೀ ಕಿರಣ್ ಕುಮಾರ್ ಭಾಗವಹಿಸಿದ್ದರು.

* ಜೂನ್ 09 ರಿಂದ 11ರ ತನಕ ಸೇಂಟ್ ಮೇರಿಸ್ ಶಾಲೆಯಲ್ಲಿ ಬೇಸಿಗೆ ಶಿಬಿರ ನಡೆಸಲಾಯಿತು. 150ಕ್ಕಿಂತ ಹೆಚ್ಚು ಸ್ಕೌಟ್–ಗೈಡ್‌ಗಳು ಭಾಗವಹಿಸಿದರು.

* ಜೂನ್ 12 ರಿಂದ 14ರ ತನಕ ಬೀರೂರು ಸರ್ಕಾರಿ ಫಸ್ಟ್ ಗ್ರೇಡ್ ಕಾಲೇಜಿನಲ್ಲಿ ಬೇಸಿಗೆ ಶಿಬಿರ ಮತ್ತು ಚಾರಣವನ್ನು ನಡೆಸಲಾಯಿತು.

* ಜೂನ್ 16 ರಂದು ಜಿಲ್ಲಾ ಸಂಸ್ಥೆ ಚಿಕ್ಕಮಗಳೂರು ಹಾಗೂ ಸ್ಥಳೀಯ ಸಂಸ್ಥೆ ಕಡೂರು ಇವರ ಆಶ್ರಯದಲ್ಲಿ ಕಡೂರು ತಾಲ್ಲೂಕಿನ ಬಿ.ಆರ್.ಪಿ., ಸಿ.ಆರ್.ಪಿ. ಮತ್ತು ಮುಖ್ಯ ಶಿಕ್ಷಕರುಗಳಿಗೆ ಸಾಮಾನ್ಯ ಮಾಹಿತಿ ಕಾರ್ಯಾಗಾರವನ್ನು ಸರಕಾರಿ ಪದವಿ ಪೂರ್ವ ಕಾಲೇಜಿನ ಸಭಾಂಗಣದಲ್ಲಿ ಏರ್ಪಡಿಸಲಾಯಿತು. ಶ್ರೀ ಸಿದ್ದರಾಜು ನಾಯ್ಕ್ ಕ್ಷೇತ್ರ ಶಿಕ್ಷಣಾಧಿಕಾರಿಗಳು ಸಭೆಯ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿ "ಕಡೂರು ತಾಲ್ಲೂಕಿನ ಎಲ್ಲಾ ಶಾಲೆಗಳಲ್ಲಿ ಸ್ಕೌಟ್ಸ್–ಗೈಡ್ಸ್ ಚಟುವಟಿಕೆಗಳನ್ನು ಪ್ರಾರಂಭಿಸಲಾಗುವುದು" ಎಂದು ತಿಳಿಸಿದರು. ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಎಂ.ಎನ್. ಷಡಕ್ಷರಿ ಇವರು ಸ್ಕೌಟ್ಸ್ ಗೈಡ್ಸ್ ಸಂಸ್ಥೆ ಇತಿಹಾಸ, ಮೂಲಭೂತ ತತ್ವಗಳನ್ನು ವಿವರಿಸಿದರು. ಶ್ರೀ ಪ್ರಭಾಕರ್ ಭಟ್, ರಾಜ್ಯ ಸಂಘಟನಾ ಆಯುಕ್ತರು ಸ್ಕೌಟ್ಸ್–ಗೈಡ್ಸ್ ಕಾರ್ಯಕ್ರಮಗಳು, ಚಟುವಟಿಕೆಗಳ ಬಗ್ಗೆ ವಿವರಿಸಿದರು. ಕಡೂರು ಸ್ಥಳೀಯ ಸಂಸ್ಥೆಯ ಅಧ್ಯಕ್ಷರು ಶ್ರೀ ಶರತ್ ಕೃಷ್ಣಮೂರ್ತಿ ಇವರು ತಾಲ್ಲೂಕಿ ಯೋಜಿತ ಕಾರ್ಯಕ್ರಮಗಳ ಬಗ್ಗೆ ತಿಳಿಸಿ ಸ್ಕೌಟಿಂಗ್–ಗೈಡಿಂಗ್ ಬೆಳವಣಿಗೆಗೆ ಮುಖ್ಯೋಪಾದ್ಯರುಗಳ ಸಹಕಾರವನ್ನು ಕೋರಿದರು. ನಿವೃತ್ತ ಡಿಡಿಪಿಐ ಶ್ರೀ ನಿಂಗಪ್ಪ, ಸರಕಾರಿ ನೌಕರರ ಸಂಘದ ಅಧ್ಯಕ್ಷರು ಶ್ರೀ ಮಲ್ಲಿಕಾರ್ಜುನ್, ಶಿಕ್ಷಕರ ಸಂಘದ ತಾಲ್ಲೂಕು ಅಧ್ಯಕ್ಷರು ಶ್ರೀ ಲಿಂಗರಾಜು ಮುಂತಾದವರು ಉಪಸ್ಥಿತರಿದ್ದರು. ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ ಶ್ರೀ ಪ್ರಕಾಶ್ ಮೂರ್ತಿ ಮತ್ತು ಗೈಡರ್ ಶ್ರೀಮತಿ ಶಬಿತಾ ಬೇಗಂ ಕಾರ್ಯಕ್ರಮ ಸಂಘಟಿಸಿದರು.





'ಸ್ಕೌಟಿಂಗ್ ಮತ್ತು ಗೈಡಿಂಗ್' ಈ ಉಡುಗೊರೆಯಿಂದ
ನಮಗೆ ಬಹಳಷ್ಟು ಸಂತೋಷ ದೊರೆಯುತ್ತದೆ.
ಬಹಳಷ್ಟು ಸ್ನೇಹಿತರನ್ನು ಪಡೆಯುತ್ತೇವೆ.
ವಿನೋದವು ಚಳವಳಿಯ ಕೊಟ್ಟು–ಕೊಳ್ಳುವ ಆದರ್ಶವಾಗಿದೆ.
– ಲೇಡಿ ಬೇಡನ್ ಪೋವೆಲ್

## ದಕ್ಷಿಣ ಕನ್ನಡ

ಜೂನ್ 04 ರಂದು ಸ್ಕೌಟ್ಸ್ ಮತ್ತು ಗೈಡ್ಸ್ ಕನ್ನಡ ಭವನ ಇಲ್ಲಿ ನವೀಕರಣಗೊಂಡ ಈಜುಕೊಳದ ಉದ್ಘಾಟನೆಯನ್ನು ಕರ್ನಾಟಕ ಸರಕಾರದ ವಿಧಾನಸಭೆಯ ಮಾನ್ಯ ಸಭಾಪತಿ ಶ್ರೀ ಯು.ಟಿ. ಖಾದರ್ ರವರು ಉದ್ಘಾಟಿಸಿ, 'ಯುವ ಜನಾಂಗವು ಭವಿಷ್ಯದ ಭಾರತವನ್ನು ಮುನ್ನಡೆಸುವವರು. ದೇಶ ಬಲಿಷ್ಠವಾಗಬೇಕಾದರೆ ವಿದ್ಯಾರ್ಥಿ ಸಮೂಹ ಸದೃಢವಾಗಬೇಕು. ವಿದ್ಯಾರ್ಥಿಗಳ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಲು ಸ್ಕೌಟ್ಸ್-ಗೈಡ್ಸ್ ಸಹಕಾರಿಯಾಗಿದೆ' ಎಂದರು. ಸಭಾಧ್ಯಕ್ಷತೆ ವಹಿಸಿಕೊಂಡು ಮಾತಾನಾಡಿದ ಮೂಡಬಿದ್ರೆ ಕ್ಷೇತ್ರದ ಶಾಸಕ ಶ್ರೀ ಉಮಾನಾಥ್ ಎ. ಕೋಟ್ಯಾನ್ ಇವರು "ಶಿಕ್ಷಣದ ಕಾಶಿ ಮೂಡಬಿದ್ರೆಯು ಎಲ್ಲಾ ಕ್ಷೇತ್ರದಲ್ಲಿ ಗಣನೀಯ ಸಾಧನೆಯನ್ನು ಮಾಡಿದೆ, ಇದರ ಹಿಂದೆ ಡಾ. ಮೋಹನ್ ಆಳ್ವರವರ ಶ್ರಮವನ್ನು ಮೆಚ್ಚುತಕ್ಕದ್ದು" ಎಂದರು. ಮುಖ್ಯ ಅತಿಥಿಗಳಾಗಿ ಉಪಸ್ಥಿತರಿದ್ದು, ಮಾತನಾಡಿದ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ ರಾಜ್ಯ ಸಂಸ್ಥೆಯ ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯ ಇವರ ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೆ ಸ್ಕೌಟಿಂಗ್-ಗೈಡಿಂಗ್ ಪಾತ್ರ ಹಿರಿದಾದದ್ದು. ದಕ್ಷಿಣ ಕನ್ನಡ ಜಿಲ್ಲೆಯು ರಾಜ್ಯದಲ್ಲಿ ಮುಂಚೂಣಿಯಲ್ಲಿದ್ದುಕೊಂಡು ಇವರ ಚಟುವಟಿಕೆಗಳು ಇತರ ಜಿಲ್ಲೆಗೆ ಮಾದರಿಯಾಗಿದೆ ಎಂದರು.

"ಸ್ಕೌಟ್ಸ್ – ಗೈಡ್ಸ್ ಆಂದೋಲನ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆರಂಭಗೊಂಡು ನೂರು ವರ್ಷಗಳಾಗುತ್ತಿರುವ ಸುಸಂದರ್ಭದಲ್ಲಿ ಅಂತಾರಾಷ್ಟ್ರೀಯ ಸಾಂಸ್ಕೃತಿಕ ಜಾಂಬೂರಿಯ ಸವಿ ನೆನಪಿನೊಂದಿಗೆ ಪಿಲಿಕುಳದ ಹತ್ತು ಎಕರೆ ಜಾಗದಲ್ಲಿ ಸುಸಜ್ಜಿತ ಭವನವೊಂದನ್ನು ವರ್ಷಾಂತ್ಯದೊಳಗೆ ನಿರ್ಮಿಸುವ ಗುರಿಯಿರಿಸಲಾಗಿದೆ. ಇದಕ್ಕೆ ಶಾಸಕರಾಧಿಯಾಗಿ, ಜನಪ್ರತಿ ನಿಧಿಗಳು, ಸರಕಾರ ಸೂಕ್ತ ರೀತಿಯ ಸ್ಪಂದನೆ, ಬೆಂಬಲ ನೀಡಬೇಕೆಂದು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ದಕ್ಷಿಣ ಕನ್ನಡ ಜಿಲ್ಲಾ ಸಂಸ್ಥೆಯ ಮುಖ್ಯ ಆಯುಕ್ತರಾದ ಡಾ. ಎಂ. ಮೋಹನ ಆಳ್ವರವರು ಸ್ವಾಗತದೊಂದಿಗೆ ಪ್ರಾಸ್ತಾವಿಕ ಮಾತುಗಳನ್ನಾಡಿದು. ವೇದಿಕೆಯಲ್ಲಿ ಪುರಸಭಾ ಮಾಜಿ ಅಧ್ಯಕ್ಷ ಶ್ರೀ ಪ್ರಸಾದಕುಮಾರ್, ಉದ್ಯಮಿ ಶ್ರೀ ಕೆ. ಪತಿಭಟ್, ಚೌಟರ ಅರಮನೆಯ ಶ್ರೀ ಕುಲದೀಪ್ ಎಂ., ಎಂ.ಸಿ.ಎಸ್. ಬ್ಯಾಂಕ್ ಅಧ್ಯಕ್ಷ ಶ್ರೀ ಎಂ. ಬಾಹುಬಲಿ ಪ್ರಸಾದ್, ಎಂ.ಸಿ.ಎಸ್. ಬ್ಯಾಂಕ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀ ಚಂದ್ರಶೇಖರ ಎಂ., ಕ್ಷೇತ್ರ ಶಿಕ್ಷಣಾಧಿಕಾರಿ ಗಣೇಶ ವೈ., ಎರ್ಮಾಳ್ ಉದಯಕುಮಾರ್ ಶೆಟ್ಟಿ, ತಹಶೀಲ್ದಾರ್ ಶ್ರೀ ಸಚ್ಚದಾನಂದ ಸತ್ಯಪ್ಪ



ಕುಚನೂರ್, ರಾಜ್ಯ ಸಂಘಟನಾ ಆಯುಕ್ತರಾದ ಶ್ರೀ ಎಂ. ಪ್ರಭಾಕರ್ ಭಟ್, ಜಿಲ್ಲಾ ಸಂಸ್ಥೆ ಹಾಗೂ ಸ್ಥಳೀಯ ಸಂಸ್ಥೆಯ ಪದಾಧಿಕಾರಿಗಳು ಸೇರಿದಂತೆ ಗಣ್ಯರು ಉಪಸ್ಥಿತರಿದ್ದರು. ವೇಣುಗೋಪಾಲ್ ಶೆಟ್ಟಿ, ಕಾರ್ಯಕ್ರಮನಿರ್ವಹಿಸಿದರು. ಜಿಲ್ಲಾ ಸಹಾಯಕ ಆಯುಕ್ತರಾದ ಶ್ರೀ ನವೀನ್‌ಚಂದ್ರ ಅಂಬೂರಿ ಧನ್ಯವಾದವಿತ್ತರು.

* ಕುಕ್ಕೆ ಶ್ರೀ ಸುಬ್ರಹ್ಮಣ್ಯೇಶ್ವರ ಕಾಲೇಜು ಸುಬ್ರಹ್ಮಣ್ಯ ಇಲ್ಲಿನ ರೋವರ್ಸ್ ಮತ್ತು ರೇಂಜರ್ಸ್ ಘಟಕದ ವತಿಯಿಂದ ವಲಯ ಅರಣ್ಯ ಇಲಾಖೆಯಾದ ಕುಲ್ಕುಂದ, ನಡುಗಲ್ಲು, ಕೈಕಂಬದ ಇದರ ಸಹಯೋಗದಲ್ಲಿ ವನ ಮಹೋತ್ಸವದ ಅಂಗವಾಗಿ ಜೂನ್ 4 ರಂದು ಬೀಜ ಬಿತ್ತೋತ್ಸವ ಕಾರ್ಯಕ್ರಮವನ್ನು ಏರ್ಪಡಿಸಲಾಯಿತು. ಈ ಕಾರ್ಯಕ್ರಮದಲ್ಲಿ ಘಟಕದ 32 ರೇಂಜರ್ಸ್ ಮತ್ತು 26 ರೋವರ್ಸ್ ವಿದ್ಯಾರ್ಥಿಗಲು ಭಾಗವಹಿಸಿದರು. ಅರಣ್ಯ ಇಲಾಖೆಯ ವಲಯ ಅರಣ್ಯ ಅಧಿಕಾರಿಗಳಾಗಿರುವ ಶ್ರೀ ರಾಘವೇಂದ್ರ ಎಚ್.ಪಿ. ಉಪವಲಯ ಅರಣ್ಯ ಅಧಿಕಾರಿಯಾಗಿರುವ ಶ್ರೀ ಮನೋಜ್, ಶ್ರೀಮತಿ ವೃಂದ, ಶ್ರೀಮತಿ ಅಪೂರ್ವ, ಶ್ರೀ ಸದಾಶಿವ, ಅರಣ್ಯ ಸಿಬ್ಬಂದಿಗಳಾಗಿರುವ ಶ್ರೀ ಬಸಪ್ಪ ರಾಮಚಂದ್ರ, ಶ್ರೀ ಮಾಲ್ತೆಶ್, ಶ್ರೀ ಅಶೋಕ್, ಶ್ರೀ ಧನಂಜಯ ಮಾರ್ಗದರ್ಶನವನ್ನು ನೀಡಿ ಸಹಕರಿಸಿದರು. ಈ ಸಂದರ್ಭದಲ್ಲಿ ಕಾಲೇಜಿನ ಘಟಕದ ರೋವರ್ ಸ್ಕೌಟ್ ಲೀಡರ್ ಆಗಿರುವಂತಹ ಶ್ರೀ ರಾಮ್‌ಪ್ರಸಾದ್ ಹಾಗೂ ರೇಂಜರ್ಸ್ ಲೀಡರ್ಸ್‌ಗಳಾಗಿರುವಂತಹ ಶ್ರೀಮತಿ ಪ್ರಮೀಳಾ, ಶ್ರೀಮತಿ ಅಶ್ವಿನಿ ಉಪಸ್ಥಿತರಿದ್ದರು. ರೋವರ್ಸ್ – ರೇಂಜರ್ಸ್ ಘಟಕದ ನಾಯಕರುಗಳಾದ ಶ್ರೀ ಸುಹಾಸ್, ಶ್ರೀ ಕಿಶನ್, ಶ್ರೀ ಮೌಲ್ಯ, ಶ್ರೀ ಶರಧಿ ಭಾಗವಹಿಸಿದ್ದರು.



* ದಕ್ಷಿಣ ಕನ್ನಡ ಜಿಲ್ಲಾ ಸಂಸ್ಥೆ ವತಿಯಿಂದ ಜೂನ್ 05 ರಂದು ಜಿಲ್ಲಾ ಸ್ಕೌಟ್ಸ್ ಮತ್ತು ಗೈಡ್ಸ್ ಭವನ ಲಾಲ್‌ಭಾಗ್ ಮಂಗಳೂರಿನಲ್ಲಿ "ವಿಶ್ವ ಪರಿಸರ ದಿನಾಚರಣೆ"ಯನ್ನು ಗಿಡ ನೆಡುವ ಮೂಲಕ ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಜಿಲ್ಲಾ ಸ್ಕೌಟ್ ಆಯುಕ್ತರಾದ ಶ್ರೀ ರಾಮಶೇಷ ಶೆಟ್ಟಿ, ಜಿಲ್ಲಾ ಕಾರ್ಯದರ್ಶಿ ಶ್ರೀ ಎಂ.ಜಿ. ಕಜೆ, ರಾಜ್ಯ ಸಹಾಯಕ ಸಂಘಟನಾ ಆಯುಕ್ತರು ಶ್ರೀ ಭರತ್‌ರಾಜ್ ಕೆ., ಮಂಗಳೂರು ಉತ್ತರನಗರ ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ ಶ್ರೀಮತಿ ಮೋಹಿನಿ ರಾಮಚಂದ್ರ ಉಪಸ್ಥಿತರಿದ್ದರು.

* ಲಿಟ್ಲ್ ಫ್ಲವರ್ ಹಿರಿಯ ಪ್ರಾಥಮಿಕ ಶಾಲೆ ದರ್ಬೆ ಪುತ್ತೂರು ಇಲ್ಲಿ "ವಿಶ್ವ ಪರಿಸರ ದಿನಾಚರಣೆ"ಯನ್ನು ಶಾಲಾ ಮುಖ್ಯ ಶಿಕ್ಷಕಿ ವಂದನೀಯ ಭಗಿನಿ ವೆನಿಶಾ ಬಿ.ಎಸ್.ರವರ ಅಧ್ಯಕ್ಷತೆಯಲ್ಲಿ ಆಚರಿಸಲಾಯಿತು. ಮುಖ್ಯ ಅತಿಥಿಯಾಗಿ ಹಿರಿಯ ವಿದ್ಯಾರ್ಥಿ ಶ್ರೀ ಸಂದೇಶ್, ಮಾಲಿಕರು ಕೋಸ್ಟಲ್ ಹೋಮ್ ದರ್ಬೆ ಉಪಸ್ಥಿತರಿದ್ದರು. ಶಾಲಾ ಸ್ಕೌಟ್ ಶಿಕ್ಷಕರಾದ ಶ್ರೀ ಬಾಲಕೃಷ್ಣ ಪೊರ್ದಾಲ್ "ವಿಶ್ವ ಪರಿಸರ ದಿನಾಚರಣೆ"



ಸಂದೇಶ ನೀಡಿದರು. ಶಾಲಾ ಸ್ಕೌಟ್-ಗೈಡ್, ಕಬ್-ಬುಲ್‌ಬುಲ್ ವಿದ್ಯಾರ್ಥಿಗಳಿಂದ ಪರಿಸರ ಗೀತೆ, ರೂಪಕ, ಕಿರು ಭಾಷಣ ಪ್ರಸ್ತುತಗೊಂಡಿತು. ಶಿಕ್ಷಕಿ ಶ್ರೀಮತಿ ರಶ್ಮಿತ ಸ್ವಾಗತಿಸಿ ನಿರೂಪಿಸಿದರು. ಶಿಕ್ಷಕಿಯರಾದ ಶ್ರೀಮತಿ ಹರಿಣಾಕ್ಷಿ ಹಾಗೂ ಕುಮಾರಿ ದಿಕ್ಷಗೌಡ ಹೂ ನೀಡಿ ಸ್ವಾಗತಿಸಿದರು. ಶಿಕ್ಷಕಿ ಶ್ರೀಮತಿ ಭವ್ಯ ಯೋಗೀಶ್ ವಂದಿಸಿದರು.

* ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಆಂಗ್ಲ ಮಾಧ್ಯಮ ಶಾಲೆ ಬೆಳ್ತಂಗಡಿಯ "ಶ್ರೀ ಮಂಜುನಾಥೇಶ್ವರ ದಳದ" ಕಬ್ ಬುಲ್‌ಬುಲ್, ಸ್ಕೌಟ್ಸ್ ಮತ್ತು ಗೈಡ್ಸ್ ವಿದ್ಯಾರ್ಥಿಗಳು "ವಿಶ್ವ ಪರಿಸರ ದಿನ"ದ ಅಂಗವಾಗಿ ಸುಮಾರು 50 ಬೀಜದ ಉಂಡೆಯನ್ನು ತಯಾರಿಸಿದರು. ಕಾಡು ಉಳಿಸಿನಾಡು ಬೆಳೆಸಿ ಎಂಬು ಘೋಷಣೆಗಳೊಂದಿಗೆ ಜಾಥದೊಂದಿಗೆ ವಿಶ್ವ ಪರಿಸರ ದಿನಾಚರಣೆಯನ್ನು ಆಚರಿಸಿದರು. ಟೀಮ್ ಲೀಡರ್ ಗೈಡ್ ವಿದ್ಯಾರ್ಥಿ ಕುಮಾರಿ ಸಿಂಚನ ಹಾಗೂ ಸ್ಕೌಟ್ ಟೀಮ್ ಲೀಡರ್ ಮಾಸ್ಟರ್ ಜೈದೀಪ್ ಪರಿಸರ ದಿನಾಚರಣೆಯ ಮಹತ್ವದ ಬಗ್ಗೆ ಮಕ್ಕಳಿಗೆ ತಿಳಿಯಪಡಿಸಿದರು. ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ ಕಾರ್ಯದರ್ಶಿ, ಸ್ಕೌಟ್-ಗೈಡ್‌ನ ಸಂಯೋಜಕ ಶಿಕ್ಷಕಿ ಶ್ರೀಮತಿ ಪ್ರಮೀಳಾ ಕಾರ್ಯಕ್ರಮವನ್ನು ಸಂಘಟಿಸಿದರು. ಮುಖ್ಯ ಶಿಕ್ಷಕಿ ಶ್ರೀಮತಿ ಹೇಮಲತಾ ಎಂ.ಆರ್. ಉಪಸ್ಥಿತರಿದ್ದರು. ಶಾಲಾ ಶಿಕ್ಷಕ ವೃಂದದವರು ಉಪಸ್ಥಿತರಿದ್ದು ಕಾರ್ಯಕ್ರಮ ಯಶಸ್ವಿಗೊಳಿಸಿದರು.

ಶ್ರೀ ನಾರಾಯಣ ಗುರು ಅನುದಾನಿತ ಪ್ರೌಢ ಶಾಲೆ ಕಾಟಿಪಳ್ಳ ಸ್ಕೌಟ್ ಮತ್ತು ಗೈಡ್ ವಿದ್ಯಾರ್ಥಿಗಳು ವಿಶ್ವ ಪರಿಸರ ದಿನವನ್ನು ಮುಖ್ಯ ಶಿಕ್ಷಕರು ಹಾಗೂ ಶಿಕ್ಷಕರ ಜೊತೆಗೂಡಿ ಸಸಿ ನೆಟ್ಟು ಆಚರಿಸಲಾಯಿತು.



* ವಿದ್ಯಾಬೋಧಿನಿ ಪ್ರೌಢ ಶಾಲೆ ಬಾಳಿಲದಲ್ಲಿ ಸ್ಕೌಟ್-ಗೈಡ್‌ದಳಗಳ ಮೂಲಕ ವಿಶ್ವ ಪರಿಸರ ದಿನಾಚಣೆಯನ್ನು ವಿಶಿಷ್ಟವಾಗಿ ಆಚರಿಸಲಾಯಿತು. ಶ್ರೀ ಪಿ.ಜಿ.ಎಸ್.ಎನ್. ಪ್ರಸಾದ್, ಸಂಚಾಲಕರು ಸಭಾಧ್ಯಕ್ಷತೆಯನ್ನು ವಹಿಸಿದ್ದು ಪರಿಸರದ ಮಹತ್ವವನ್ನು ಉದಾಹರಣೆಯೊಂದಿಗೆ ವಿವರಿಸಿದರು. ಶ್ರೀ ಯಶೋಧರ ಎನ್., ಮುಖ್ಯೋಪಾಧ್ಯಾಯರು, ಎಲ್ಲರನ್ನೂ ಸ್ವಾಗತಿಸುತ್ತಾ ಪರಿಸರ ಸಂರಕ್ಷಣೆಯ ಕುರಿತು ವಿದ್ಯಾರ್ಥಿಗಳಿಗೆ ತಿಳಿಹೇಳಿದರು. ಶ್ರೀ ಉದಯಕುಮಾರ್ ರೈ ಎಸ್., ಸ್ಕೌಟ್ ಮಾಸ್ಟರ್ ವಿಶ್ವ ಪರಿಸರ ದಿನಾಚರಣೆಯ ಹಿನ್ನೆಲೆ ಮತ್ತು ಪ್ರಸ್ತುತ ದಿನಗಳಲ್ಲಿ ಗಿಡ ಮರಗಳ ಉಳಿವು ಎಷ್ಟು ಅಗತ್ಯ ಎಂಬುದನ್ನು ವಿವರಿಸಿದರು. ಇದೇ ಸಂದರ್ಭದಲ್ಲಿ ಪರಿಸರ ಉಳಿಸುವ ಪ್ರತಿಜ್ಞೆಯನ್ನು ಕೈಗೊಳ್ಳಲಾಯಿತು. ವಿದ್ಯಾರ್ಥಿಗಳು ಪರಿಸರ ಉಳಿವಿನ ಬಗ್ಗೆ ಭಾಷಣ ಮಾಡಿದರು. ಗೈಡ್ ವಿದ್ಯಾರ್ಥಿನಿಯರು ಪರಿಸರ ಗೀತೆಯನ್ನು ಹಾಡುವುದರ ಮೂಲಕ ಆರಂಭಗೊಂಡ ಕಾರ್ಯಕ್ರಮವು ಶ್ರೀ ಚಿಂತನ್ ಬಿ. ಸ್ಕೌಟ್ ಇವರ ಧನ್ಯವಾದಗಳೊಂದಿಗೆ ಮುಕ್ತಾಯಗೊಂಡಿತು. ಕಾರ್ಯಕ್ರಮವನ್ನು ಶಿವಕೃಷ್ಣ ಬಿ. ಸ್ಕೌಟ್ ನಿರೂಪಿಸಿದರು. ಕೊನೆಯಲ್ಲಿ ಎಲ್ಲಾ ವಿದ್ಯಾರ್ಥಿಗಳಿಗೆ ಬೀಜದ ಉಂಡೆಗಳನ್ನು ಕೊಟ್ಟು ಅವುಗಳ ಪೋಷಣೆ ಮಾಡಲು ತಿಳಿಸಲಾಯಿತು.

* ಎಸ್.ಎಸ್.ಪಿ.ಯು ಕಾಲೇಜು ಪ್ರೌಢಶಾಲೆ ಸುಬ್ರಹ್ಮಣ್ಯಾದ ಸ್ಕೌಟ್-ಗೈಡ್ಸ್ ಘಟಕದ ವತಿಯಿಂದ ಶಾಲಾ ವಠಾರ ಸ್ವಚ್ಛತೆ ಮತ್ತು ಗಿಡಗಳನ್ನು ನೆಡಲಾಯಿತು. ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀ ಯಶವಂತ ರೈಯವರು ಚಾಲನೆ ನೀಡಿದರು.



* ಆಳ್ವಾಸ್ ಶಾಲೆ ಮೂಡಬಿದಿರೆ ಇಲ್ಲಿ ಕಬ್ಸ್-ಬುಲ್‌ಬುಲ್ಸ್ ಹಾಗೂ ಸ್ಕೌಟ್ಸ್-ಗೈಡ್ಸ್ ವಿದ್ಯಾರ್ಥಿಗಳು, ಶಿಕ್ಷಕರು ಹಾಗೂ ಆಡಳಿತಾಧಿಕಾರಿಗಳು ಮುಖ್ಯೋಪಾಧ್ಯಾಯರು ಸೇರಿ ವಿಶ್ವ ಪರಿಸರ ದಿನಾಚರಣೆಯನ್ನು ಪರಿಸರದ ಘೋಷಣೆ ಧ್ಯೇಯ ವಾಕ್ಯದೊಂದಿಗೆ ಮೆರವಣಿಗೆ ಮೂಲಕ ವಿಜೃಂಭಣೆಯಿಂದ ಆಚರಿಸಲಾಯಿತು. ಅತಿಥಿಗಳಾಗಿ ಆಡಳಿತಾಧಿಕಾರಿಗಳಾದ ಶ್ರೀ ಪ್ರೀತಮ್ ಕುಂದರ್ ಹಾಗೂ ಸಂಯುಕ್ತ ಶಾಲೆಯ ಮುಖ್ಯೋಪಾಧ್ಯಾಯರು ಉಪಸ್ಥಿತರಿದ್ದು ಪ್ಲಾಸ್ಟಿಕ್ ಮುಕ್ತ ಪರಿಸರದ ಬಗ್ಗೆ ಸಂದೇಶವನ್ನು ಕಾರ್ಯಕ್ರಮದಲ್ಲಿ ಉಪದೇಶಿಸಿದರು.

* ಜೂನ್ 05 ರಂದು ಜೆ.ಸಿ.ಐ. ಶ್ರೀಮತಿ ಮಂಗಳ ಗಂಗೋತ್ರಿ ಕೋಣಾ ಜೆ., ಶ್ರೀಮತಿ ಸೌಜನ್ಯ ಸ್ಕೌಟ್ ದಳ ಮತ್ತು ಗೈಡ್ ಕಂಪೆನಿ, ಶ್ರೀ ರಾಮಕೃಷ್ಣ ಅನುದಾನಿತ ಪ್ರೌಢಶಾಲೆ ಪಾವೂರು ಹರೇಕಳ ಇವರುಗಳ ಆಶ್ರಯದಲ್ಲಿ 'ವಿಶ್ವ ಪರಿಸರ ದಿನಾಚರಣೆ', ಪ್ಲಾಸ್ಟಿಕ್ ನಿರ್ಮೂಲ ಕಾರ್ಯಕ್ರಮ ಹಾಗೂ ಪರಿಸರ ಸೇವಾ ರತ್ನ ಪ್ರಶಸ್ತಿ ಪ್ರದಾನ ಸಮಾರಂಭವು ಹರೇಕಳ ಶ್ರೀ ರಾಮಕೃಷ್ಣ ಪ್ರೌಢ ಶಾಲಾ ಸಭಾಂಗಣದಲ್ಲಿ ನಡೆಯಿತು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಜೆ.ಸಿ.ಐ. ಶ್ರೀಮತಿ ಮಂಗಳ ಗಂಗೋತ್ರಿ ಕೋಣಾ ಜೆ. ಇದರ ಅಧ್ಯಕ್ಷರಾದ ಡಾ. ನರಸಿಂಹಯ್ಯ ಅವರು ಪ್ರಕೃತಿಗಿಂತ ಯಾರು ಕೂಡ ದೊಡ್ಡವರಲ್ಲ,

ಪ್ರಕೃತಿಯೇ ದೇವರು ಪ್ರಕೃತಿಯೇ ಎಲ್ಲದಕ್ಕೂ ಮೂಲಕೂಡ. ಪ್ರಕೃತಿಯೇ ನಮಗೆ ಎಲ್ಲಾ ರೀತಿಯಲ್ಲೂ ರಕ್ಷಣೆಯನ್ನು ಕೊಡುತ್ತದೆ. ಆದರೆ ಇಂದು ಮಾನವ ತನ್ನ ಸ್ವಪ್ರತಿಷ್ಠೆಗೋಸ್ಕರ ಪ್ರಕೃತಿಯನ್ನು ನಾನಾ ರೀತಿಯಲ್ಲಿ ಹಾಳು ಮಾಡುತ್ತಿದ್ದಾನೆ. ಪ್ರಕೃತಿಯಲ್ಲಿ ಉಚಿತವಾಗಿ ದೊರಕುವ ಆಮ್ಲಜನಕ, ನೀರು, ಆಹಾರ ಇವರುಗಳು ಇಲ್ಲದಿದ್ದಲ್ಲಿ ಯಾವುದೇ ಜೀವರಾಶಿ ಬದುಕಲು ಸಾಧ್ಯವಿಲ್ಲ ಮುಖ್ಯವಾಗಿ ಪ್ರಕೃತಿಯನ್ನು ಹಾಳು ಮಾಡುವ ಪ್ಲಾಸ್ಟಿಕ್ ಮತ್ತು ತ್ಯಾಜ್ಯವನ್ನು ಕಡಿಮೆ ಮಾಡುವ ಮುಖೇನ ಮನುಷ್ಯ ತನ್ನ ಜೀವನ ಶೈಲಿಯನ್ನು ಬದಲಾವಣೆ ಮಾಡಿಕೊಳ್ಳುವುದು ಬಹಳ ಮುಖ್ಯ ಎಂದರು. ಶ್ರೀ ರಾಮಕೃಷ್ಣ ಪ್ರೌಢ ಶಾಲೆ ಹರೇಕಳ ಇದರ ಸಂಚಾಲಕರಾದ ಶ್ರೀ ಕಡೆಂಜ ಸೋಮಶೇಖರ ಚೌಟ ಅವರು ಕಾರ್ಯಕ್ರಮವನ್ನು ಉದ್ಘಾಟಿಸಿದರು.

## ದಾವಣಗೆರೆ

ಮೇ 24 ರಂದು ಕೊಂಡಜ್ಜಿಯ ಮೊರಾರ್ಜಿ ದೇಸಾಯಿ ಶಾಲೆಯಲ್ಲಿ ರಾಜ್ಯ ಸರ್ಕಾರದ ಒಂದು ತಿಂಗಳ ಉಚಿತ ಬೇಸಿಗೆ ಶಿಬಿರವನ್ನು ಆಯೋಜಿಸಲಾಗಿತ್ತು. ಈ ಶಿಬಿರದಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್ ಚಳುವಳಿಯ ಪರಿಚಯವನ್ನು ಶ್ರೀಮತಿ ಎಂ. ರತ್ನ, ಜಿಲ್ಲಾ ಕಾರ್ಯದರ್ಶಿಗಳು ಮಾಡಿಕೊಟ್ಟರು. ಶ್ರೀಮತಿ ಅಶ್ವಿನಿ ಜೆ., ಎಸ್.ಜಿ.ವಿ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ್ದರು.

* ಮೇ 31 ರಂದು ಸೆಂಟ್ ಪಾಲ್ಸ್ ಕಾನ್ವೆಂಟ್ ಶಾಲೆಯಲ್ಲಿ "ತಂಬಾಕು ಮುಕ್ತ ದಿನ"ವನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ಶಾಲೆಯ ವ್ಯವಸ್ಥಾಪಕರಾದ ಸಿಸ್ಟರ್ ಮಾರ್ಜರಿ, ಸೆಂಟ್ರಲ್ ಶಾಲೆಯ ಮುಖ್ಯಸ್ಥರಾದ ಸಿಸ್ಟರ್ ಸಮಂತಾ, ಹಿರಿಯ ಶಿಕ್ಷಕರಾದ ಶ್ರೀ ಕಿರಣ್, ಶ್ರೀಮತಿ ಅಮಲಾ, ಶ್ರೀ ಗೋವಿಂದಪ್ಪ, ಸ್ಥಳೀಯ ಸಂಸ್ಥೆ ಕಾರ್ಯದರ್ಶಿಗಳಾದ ಶ್ರೀ ಟಿ.ಎಂ. ರವೀಂದ್ರಸ್ವಾಮಿ, ಗೈಡ್ ಕ್ಯಾಪ್ಟನ್ಸ್ ಶ್ರೀಮತಿ ನಯನ ಏಸುಪ್ರಿಯ, ಶ್ರೀಮತಿ ರಜನಿ ಹೆಚ್.ಎಂ. ಉಪಸ್ಥಿತರಿದ್ದರು.




* ಜೂನ್ 05 ರಂದು ದಾವಣಗೆರೆ ಜಿಲ್ಲಾ ಸಂಸ್ಥೆ ಮತ್ತು ಉತ್ತರವಲಯ ಸ್ಥಳೀಯ ಸಂಸ್ಥೆ ವತಿಯಿಂದ "ವಿಶ್ವ ಪರಿಸರ ದಿನಾಚರಣೆ" ಪ್ರಯುಕ್ತ ಆರ್.ವಿ.ಜಿ.ಕೆ. ಪ್ರೌಢಶಾಲೆಯ ಆವರಣದಲ್ಲಿ 2700 ಬೀಜದುಂಡೆಗಳನ್ನು 120 ಕ್ಕೂ ಹೆಚ್ಚು ಸ್ಕೌಟ್ಸ್ ಮತ್ತು ಗೈಡ್ಸ್ ಮಕ್ಕಳು ತಯಾರಿಸಿದರು. ಈ ಸಂದರ್ಭದಲ್ಲಿ ಶ್ರೀಮತಿ ಎಂ. ರತ್ನ, ಜಿಲ್ಲಾ ಕಾರ್ಯದರ್ಶಿಗಳು, ಶ್ರೀಮತಿ ಜೆ. ಅಶ್ವಿನಿ, ಎಸ್.ಜಿ.ವಿ. ಬೀಜದುಂಡೆ ತಯಾರಿಸುವ ವಿಧಾನ ಮತ್ತು ಮಹತ್ವವನ್ನು ಮಕ್ಕಳಿಗೆ ವಿವರಿಸಿದರು. ಉತ್ತರ ವಲಯ ಸ್ಥಳೀಯ ಸಂಸ್ಥೆ ಕಾರ್ಯದರ್ಶಿಗಳಾದ ಶ್ರೀ ಸುರೇಶ್, ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀ ಕೆ.ಸಿ. ನಿರಂಜನ್ ಉಪಸ್ಥಿತರಿದ್ದರು.

* ಜೂನ್ 05 ರಂದು ಕೊಂಡಜ್ಜಿ ಬಸಪ್ಪ ಸ್ಥಳೀಯ ಸಂಸ್ಥೆಯ ಶ್ರೀ ತರಳಬಾಳು ಜಗದ್ಗುರು ಶಾಲೆಯಲ್ಲಿ "ವಿಶ್ವ ಪರಿಸರ ದಿನಾಚರಣೆ"ಯನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ಸಿಬಿಎಸ್‌ಸಿ ಶಾಲೆಯ ಪ್ರಾಂಶುಪಾಲರಾದ ಶ್ರೀ ಕೆ. ಸೋಮಶೇಖರಪ್ಪ ಹಾಗೂ ಗೈಡ್ ಕ್ಯಾಪ್ಟನ್ ಶ್ರೀಮತಿ ಅನಿತಾ ಉಪಸ್ಥಿತರಿದ್ದರು. ಪರಿಸರ ಸಂರಕ್ಷಣೆ ಮಾಡುವುದು ಎಷ್ಟು ಉತ್ತಮ ಎಂಬುದನ್ನು ಕಿರುನಾಟಕಗಳ ಮೂಲಕ ಸ್ಕೌಟ್ಸ್ ಮತ್ತು ಗೈಡ್ಸ್ ಮಕ್ಕಳು ಪರಿಸರದ ಬಗ್ಗೆ ಜಾಗೃತಿ ಮೂಡಿಸಿದರು.



* ಜೂನ್ 05 ರಂದು ದಾವಣಗೆರೆ ಉತ್ತರ ಸ್ಥಳೀಯ ಸಂಸ್ಥೆಯ ಆರ್.ವಿ.ಜಿ.ಕೆ. ಪ್ರೌಢಶಾಲೆ ಮತ್ತು ಸಿ.ವಿ.ವಿ. ಶಾಲೆಯಲ್ಲಿ ವಿಶ್ವಪರಿಸರ ದಿನಾಚರಣೆಯನ್ನು ಆಚರಿಸಲಾಯಿತು.



* ಜೂನ್ 05 ರಂದು ಪರಿಸರ ದಿನಾಚರಣೆಯನ್ನು ಸೆಂಟ್ ಪಾಲ್ಸ್ ಕಾನ್ವೆಂಟ್ ಶಾಲೆಯಲ್ಲಿ ಆಚರಿಸಲಾಯಿತು. ಈ ಸಂದರ್ಭದಲ್ಲಿ ಶಾಲೆಯ ವ್ಯವಸ್ಥಾಪಕರಾದ ಸಿಸ್ಟರ್ ಮಾರ್ಜರಿಯರವರು ಗೈಡ್ ಮಕ್ಕಳ ಜೊತೆ ಸೇರಿ ಗಿಡವನ್ನು ನೆಡುವುದರ ಮೂಲಕ ಪರಿಸರ ಸಂರಕ್ಷಣೆ ನಮ್ಮೆಲ್ಲರ ಹೊಣೆ ಎಂಬ ಸಂದೇಶವನ್ನು ಮಕ್ಕಳಿಗೆ ನೀಡಿದರು. ಸ್ಥಳೀಯ ಸಂಸ್ಥೆ ಕಾರ್ಯದರ್ಶಿಗಳಾದ ಶ್ರೀ ಟಿ.ಎಂ. ರವೀಂದ್ರಸ್ವಾಮಿ, ಗೈಡ್ ಕ್ಯಾಪ್ಟನ್ ಶ್ರೀಮತಿ ನಯನ ಏಸುಪ್ರಿಯ, ಶ್ರೀಮತಿ ಹೆಚ್.ಎಂ. ರಜನಿ ಉಪಸ್ಥಿತರಿದ್ದರು.

* ಜೂನ್ 05 ರಂದು ಜಗಳೂರು ಸ್ಥಳೀಯ ಸಂಸ್ಥೆಯ ಇಮಾಮ್ ಶಾಲೆ ಮತ್ತು ಬಾಲಭಾರತಿ ಶಾಲೆಯ ಸ್ಕೌಟ್ಸ್ ಮತ್ತು ಗೈಡ್ಸ್ ಮಕ್ಕಳು ಸಸಿ ನೆಡುವ ಮತ್ತು ಸಸಿಗಳನ್ನು ಹಂಚುವ ಮೂಲಕ ಪರಿಸರ ದಿನಾಚರಣೆಯನ್ನು ಆಚರಿಸಿದರು.

* ಜೂನ್ 05 ರಂದು ಹರಿಹರ ಸ್ಥಳೀಯ ಸಂಸ್ಥೆಯ ಚಂದ್ರಗುಪ್ತ ಮೌರ್ಯ ಪಬ್ಲಿಕ್ ಶಾಲೆಯಲ್ಲಿ ಶ್ರೀ ಶ್ರೀ ನಿರಂಜನಾನಂದಪುರಿ ಮಹಾ ಸ್ವಾಮೀಜಿಯವರ ನೇತೃತ್ವದಲ್ಲಿ ಶಾಲೆಯ ಕಾರ್ಯದರ್ಶಿಗಳಾದ ಶ್ರೀ ಎಸ್. ನಿಂಗಪ್ಪ, ಪ್ರಾಂಶುಪಾಲರಾದ ಡಾ॥ ಶೃತಿ ಇನಾಮ್‌ಧಾರ್‌ರವರು ಭಾಗವಹಿಸಿ 100 ವಿವಿಧ ಬಗೆಯ ಸಸಿಗಳನ್ನು ಶಾಲೆಯ ಆವರಣದಲ್ಲಿ ನೆಡುವುದರ ಮೂಲಕ ಮತ್ತು ಚಿತ್ರಕಲಾ ಸ್ಪರ್ಧೆಯನ್ನು ನಡೆಸುವುದರೊಂದಿಗೆ ಪರಿಸರ ದಿನಾಚರಣೆಯನ್ನು ಆಚರಿಸಲಾಯಿತು.



* ಜೂನ್ 05 ರಂದು ದಾವಣಗೆರೆ ದಕ್ಷಿಣ ವಲಯ ಸ್ಥಳೀಯ ಸಂಸ್ಥೆಯ ಜೈನ್ ವಿದ್ಯಾಲಯ ಶಾಲೆಯಲ್ಲಿ ಬನ್ನೀಸ್ ಮಕ್ಕಳು ಸಸಿಗಳಿಗೆ ನೀರೆರೆಯುವ ಮೂಲಕ ಮತ್ತು ಅಮೃತ ವಿದ್ಯಾಲಯ ಶಾಲೆಯಲ್ಲಿ ಸಸಿಗಳನ್ನು ನೆಡುವುದರ ಮೂಲಕ ಪರಿಸರ ದಿನಾಚರಣೆ ಆಚರಿಸಲಾಯಿತು.



* ಜೂನ್ 09 ರಿಂದ 11ರ ವರೆಗೆ ದಾವಣಗೆರೆ ಜಿಲ್ಲಾ ಸಂಸ್ಥೆ ವತಿಯಿಂದ ರಾಜ್ಯಪುರಸ್ಕಾರ ಪೂರ್ವಭಾವಿ ತರಬೇತಿ ಶಿಬಿರವನ್ನು ಕೊಂಡಜ್ಜಿ ಬಸಪ್ಪ ಸ್ಕೌಟ್ ಗೈಡ್ ರಾಜ್ಯ ತರಬೇತಿ ಕೇಂದ್ರ, ಕೊಂಡಜ್ಜಿ ಇಲ್ಲಿ ಆಯೋಜಿಸಲಾಗಿತ್ತು. ಸ್ಕೌಟ್ ವಿಭಾಗದ ನಾಯಕರಾಗಿ ಶ್ರೀ ಕಾಂತಕುಮಾರ್, ಗೈಡ್ ವಿಭಾಗದ ನಾಯಕರಾಗಿ ಶ್ರೀಮತಿ ಎಂ. ರತ್ನ, ಜಿಲ್ಲಾ ಕಾರ್ಯದರ್ಶಿಗಳು ಕಾರ್ಯನಿರ್ವಹಿಸಿದರು. ಶ್ರೀ ಮುರುಘರಾಜೇಂದ್ರ ಜೆ. ಚಿಗಟೇರಿ,



ಜಿಲ್ಲಾ ಮುಖ್ಯ ಆಯುಕ್ತರು ಶಿಬಿರಕ್ಕೆ ಭೇಟಿ ನೀಡಿ ಶಿಬಿರದ ಚಟುವಟಿಕೆಗಳನ್ನು ವೀಕ್ಷಿಸಿ ಮಕ್ಕಳಿಗೆ ಪರೀಕ್ಷೆಯನ್ನು ಧೈರ್ಯದಿಂದ ಎದುರಿಸಿ ಭಯಬೇಡ ಎಂದು ಹೇಳಿದರು. ಶಿಬಿರದಲ್ಲಿ 108 ಸ್ಕೌಟ್ಸ್ ಮತ್ತು 93 ವಿದ್ಯಾರ್ಥಿಗಳು ಭಾಗವಹಿಸಿದ್ದರು. ಶ್ರೀಮತಿ ಜೆ. ಅಶ್ವಿನಿ, ಎಸ್.ಜಿ.ವಿ. ಶಿಬಿರವನ್ನು ಯಶಸ್ವಿಯಾಗಿ ಸಂಘಟಿಸಿದರು.

* ಜೂನ್ 11 ರಂದು "ವಿಶ್ವ ಪರಿಸರ ದಿನಾಚರಣೆ" ಅಂಗವಾಗಿ ಭೂಮಿ ಎಂಬ ವಿಷಯದ ಬಗ್ಗೆ ವರ್ಚ್ಯೂಯಲ್ ಶಿಬಿರಾಗ್ನಿ ಕಾರ್ಯಕ್ರಮವು ಅತ್ಯಂತ ಯಶಸ್ವಿಯಾಗಿ ನೆರವೇರಿತು. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಶ್ರೀ ಕಾಶಪ್ಪನವರ್, ಜಿಲ್ಲಾ ಕಾರ್ಯದರ್ಶಿಗಳು ಹಾವೇರಿ ಜಿಲ್ಲಾ ಸಂಸ್ಥೆ, ಶ್ರೀ ಫರ್ನಾಂಡಿಸ್, ಎಲ್.ಟಿ.(ಸ್ಕೌ), ಶ್ರೀ ಮುರುಘರಾಜೇಂದ್ರ ಜೆ. ಚಿಗಟೇರಿ, ಜಿಲ್ಲಾ ಮುಖ್ಯ ಆಯುಕ್ತರು ಭಾಗವಹಿಸಿದ್ದರು. ಡಾ॥ ಶಕುಂತಲಾ, ಶಿಬಿರಾಗ್ನಿಯನ್ನು ಉದ್ಘಾಟಿಸಿದರು. ಶ್ರೀ ಎ.ಪಿ. ಷಡಾಕ್ಷರಪ್ಪ, ಜಿಲ್ಲಾ ಸ್ಕೌಟ್ ಆಯುಕ್ತರು, ಶ್ರೀಮತಿ ಸುಖವಾಣಿ, ಜಿಲ್ಲಾ ಜಂಟಿ ಕಾರ್ಯದರ್ಶಿಗಳು ಭಾಗವಹಿಸಿದ್ದರು. ರೋವರ್ ಸ್ಕೌಟ್ ಲೀಡರ್ಸ್, ರೇಂಜರ್ ಲೀಡರ್ಸ್ – ರೋವರ್ಸ್ ಮತ್ತು ರೇಂಜರ್ಸ್‌ಗಳು ನೃತ್ಯ, ಹಾಡು ಮತ್ತು ಕಿರು ನಾಟಕಗಳ ಮೂಲಕ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

* ಜೂನ್ 11 ರಿಂದ 12ರ ವರೆಗೆ ದಾವಣಗೆರೆ ಜಿಲ್ಲಾ ಸಂಸ್ಥೆ ವತಿಯಿಂದ ರೋವರ್ಸ್ ರೇಂಜರ್ಸ್‌ಗಳ ನಿಪುಣ್ ಪರೀಕ್ಷಾ ಶಿಬಿರ ಮತ್ತು ರಾಜ್ಯಪುರಸ್ಕಾರ ಪೂರ್ವಭಾವಿ ತರಬೇತಿ ಶಿಬಿರವನ್ನು ಕೊಂಡಜ್ಜಿ ಬಸಪ್ಪ ಸ್ಕೌಟ್–ಗೈಡ್ ರಾಜ್ಯ ತರಬೇತಿ ಕೇಂದ್ರ, ಕೊಂಡಜ್ಜಿ ಇಲ್ಲಿ ಆಯೋಜಿಸಲಾಗಿತ್ತು. 66 ರೋವರ್ಸ್ 70 ರೇಂಜರ್ಸ್‌ಗಳು ಈ ಶಿಬಿರದಲ್ಲಿ ಭಾಗವಹಿಸಿದ್ದರು. ರೋವರ್ ವಿಭಾಗದ ನಾಯಕರಾಗಿ ಶ್ರೀ ಸುರೇಶ್ ಜಿ.ಎಸ್. ಮತ್ತು ರೇಂಜರ್ ವಿಭಾಗದ ನಾಯಕರಾಗಿ ಡಾ॥ ಶಕುಂತಲಾ, ಕಾರ್ಯನಿರ್ವಹಿಸಿದರು. ಶಿಬಿರಕ್ಕೆ ಶ್ರೀ ಎ.ಪಿ. ಷಡಾಕ್ಷರಪ್ಪ, ಜಿಲ್ಲಾ ಸ್ಕೌಟ್ ಆಯುಕ್ತರು, ಶ್ರೀಮತಿ ಮಂಗಳ ವಿಶ್ವನಾಥ್, ಜಿಲ್ಲಾ ಉಪಾಧ್ಯಕ್ಷರು, ಶ್ರೀ ಹಾಲಪ್ಪ, ಜಿಲ್ಲಾ ಸಹಾಯಕ ಆಯುಕ್ತರು, ಶ್ರೀ ಬೂಸ್ನೂರು ವಿಶ್ವನಾಥ್, ಜಿಲ್ಲಾ ಖಜಾಂಚಿಗಳು ಭೇಟಿ ನೀಡಿದರು. ಶ್ರೀಮತಿ ರತ್ನ ಎಂ., ಜಿಲ್ಲಾ ಕಾರ್ಯದರ್ಶಿಗಳು, ಶ್ರೀಮತಿ ಸುಖವಾಣಿ, ಜಿಲ್ಲಾ ಜಂಟಿ ಕಾರ್ಯದರ್ಶಿಗಳು, ಶ್ರೀಮತಿ ಅಶ್ವಿನಿ ಜೆ., ಎಸ್.ಜಿ.ವಿ, ಶ್ರೀ ಮುಸ್ತಫ ಮತ್ತು ಶ್ರೀ ನವೀನ್, ಯುವ ಸಮಿತಿ ಸದಸ್ಯರು ಉಪಸ್ಥಿತರಿದ್ದರು.



## ಧಾರವಾಡ

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಸಹಯೋಗದಲ್ಲಿ "ವಿಶ್ವ ಪರಿಸರ ದಿನಾಚರಣೆ"ಯನ್ನು ಆಚರಿಸಲಾಯಿತು. ಸ್ಕೌಟ್ಸ್-ಗೈಡ್ಸ್‌ಗಳಿಗೆ ಪ್ರಬಂಧ ಮತ್ತು ಚಿತ್ರಕಲೆ ಹಾಗೂ ರೋವರ್ಸ್-ರೇಂಜರ್ಸ್‌ಗಳಿಗೆ ವಾಕಾಥಾನ ಮತ್ತು ಸೈಕ್ಲೋಥಾನ ಸ್ಪರ್ಧೆ ಏರ್ಪಡಿಸಲಾಯಿತು. ಸದರಿ ಕಾರ್ಯಕ್ರಮದಲ್ಲಿ ಪರಿಸರ ಅಧಿಕಾರಿಗಳಾದ ಶ್ರೀ ಐ.ಎಚ್. ಜಗದೀಶ್ ಭಾಗವಹಿಸಿದ್ದರು. ಜಿಲ್ಲೆಯ ವಿವಿಧ ಕಾಲೇಜುಗಳಿಂದ ರೋವರ್ಸ್-ರೇಂಜರ್ಸ್‌ಗಳು ಭಾಗವಹಿಸಿದ್ದರು.




## ಹಾಸನ

ಹಾಸನ ಜಿಲ್ಲಾ ಸಂಸ್ಥೆಯ ವತಿಯಿಂದ "ವಿಶ್ವ ಪರಿಸರ ದಿನಾಚರಣೆ"ಯ ಪ್ರಯುಕ್ತ ಸಸಿ ನೆಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದಲ್ಲಿ ಹಿರಿಯರು ಹಾಗೂ ಪರಿಸರ ಪ್ರೇಮಿಗಳಾದ ಶ್ರೀ ಹರಿಹಳ್ಳಿ ವಿ.ಪು. ಹೆಗ್ಗಡೆ, ಜಿಲ್ಲಾ, ಮುಖ್ಯ ಆಯುಕ್ತರಾದ ಡಾ. ವೈ.ಎಸ್. ವೀರಭದ್ರಪ್ಪ, ಜಿಲ್ಲಾ ಗೈಡ್ ಆಯುಕ್ತರಾದ ಶ್ರೀಮತಿ ಎಂ.ಬಿ. ಗಿರಿಜಾಂಬಿಕ, ಜಿಲ್ಲಾ ಕಾರ್ಯದರ್ಶಿ ಶ್ರೀ ಸುರೇಶ್ ಗುರೂಜಿ, ಜಿಲ್ಲಾ ಜಂಟಿ ಕಾರ್ಯದರ್ಶಿ ಶ್ರೀಮತಿ ಕಾಂಚನಮಾಲ, ಎ.ಎಸ್.ಓ.ಸಿ ಶ್ರೀಮತಿ ಪ್ರಿಯಾಂಕ, ಶ್ರೀ ಗೋಪಾಲ್ ಪ್ರಭು, ಶ್ರೀ ಮಂಜುನಾಥ್ ನಿವೃತ್ತಿ ಪ್ರಾಂಶುಪಾಲರದ ಶ್ರೀ ಅಪ್ಪಾಜಿಗೌಡ, ಶ್ರೀ ದಿನೇಶ್ ಹಾಗೂ ಶ್ರೀ ಬಸವರಾಜೇಂದ್ರ ಶಾಲೆಯ ಸ್ಕೌಟ್ ಮಾಸ್ಟರ್ ಶ್ರೀ ಸದಾಶಿವ ಮತ್ತು ಸ್ಕೌಟ್-ಗೈಡ್ ವಿದ್ಯಾರ್ಥಿಗಳು ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.




* "ಪರಿಸರದ ನಾಶ ಮಾನವಕುಲದ ಸರ್ವನಾಶ. ಭೂಮಿಯ ಮೇಲಿರುವ ಸಕಲ ಜೀವಿಗಳೂ ಜೈವಿಕತೆಯಿಂದ ಕೂಡಿರಬೇಕಾದರೆ ಪ್ರಕೃತಿ ಸಿರಿ, ಹಸಿರು ವಾತಾವರಣ ಬಹಳ ಮುಖ್ಯ" ಎಂದು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಜಿಲ್ಲಾ ಸಹಾಯಕ ಆಯುಕ್ತ ಶ್ರೀ ಎಂ. ಬಾಲಕೃಷ್ಣ ಅಭಿಪ್ರಾಯಪಟ್ಟರು. ಅವರು ಆಲೂರು ತಾಲ್ಲೂಕು ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಕಣತೂರು ಇಲ್ಲಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆ ಹಮ್ಮಿಕೊಂಡಿದ್ದ ವಿಶ್ವ ಪರಿಸರ ದಿನಾಚರಣೆ ನಿಮಿತ್ತಗಿಡ ನೆಟ್ಟು ಮಾತನಾಡಿದರು. ರಾಜ್ಯ ಸಹಾಯಕ ಸಂಘಟನಾ ಆಯುಕ್ತೆ ಕು॥ ಎಚ್.ಎಂ. ಪ್ರಿಯಾಂಕ ಮಾತನಾಡಿ "ಗಿಡ ನೆಟ್ಟ ಮಾತ್ರಕ್ಕೆ ಪರಿಸರ ಜಾಗೃತಿಯಾಗುವುದಿಲ್ಲ ಅವುಗಳನ್ನು ನೀರುಣಿಸಿ ಪೋಷಿಸಿ ಬೆಳಸಬೇಕು, ನಮ್ಮ ಸುತ್ತಮುತ್ತಲಿನ ಜನಸಮುದಾಯಕ್ಕೆ ಪರಿಸರ ಉಳಿವಿನ ಬಗ್ಗೆ ಅರಿವು ಮೂಡಿಸಬೇಕು" ಎಂದರು. ಕಾರ್ಯಕ್ರಮದಲ್ಲಿ ತಾಲ್ಲೂಕು ಕಾರ್ಯದರ್ಶಿ ಶ್ರೀ ಕೊಟ್ರೇಶ್ ಎಸ್. ಉಪ್ಪಾರ್, ತಾಲ್ಲೂಕು ಖಜಾಂಚಿ ಶ್ರೀ ಬಿ.ಎಸ್. ಹಿಮ, ಹಿರಿಯ ಶಿಕ್ಷಕಿ ಶ್ರೀಮತಿ ಪ್ರಮೀಳಾ ಸೇರಿದಂತೆ ಹಲವರು ಮಾತನಾಡಿದರು.



* ಹಾಸನ ಜಿಲ್ಲಾ ಸಂಸ್ಥೆ ಹಾಗೂ ಹಾಸನ ತಾಲ್ಲೂಕು ಸ್ಥಳೀಯ ಸಂಸ್ಥೆ ಸಂಯುಕ್ತ ಆಶ್ರಯದಲ್ಲಿ, ಹಾಸನ ಜಿಲ್ಲಾ ಸೆಂಟ್ರಲ್ ಲೈಬ್ರರಿಯಲ್ಲಿ ಪರಿಸರ ದಿನವನ್ನು ಹಣ್ಣುಗಳ ಗಿಡಗಳನ್ನು ನೆಡುವುದರ ಮೂಲಕ ಆಚರಣೆ ಮಾಡಲಾಯಿತು. ಈ ಸಂದರ್ಭದಲ್ಲಿ ಜಿಲ್ಲಾ ಮುಖ್ಯ ಆಯುಕ್ತರಾದ ಡಾ. ವೈ.ಏಸ್. ವೀರಭದ್ರಪ್ಪ, ಜಿಲ್ಲಾ ಆಯುಕ್ತರು (ಗೈಡ್) ಶ್ರೀಮತಿ ಎಂ.ಬಿ. ಗಿರಿಜಾಂಬಿಕ, ಜಿಲ್ಲಾ ತರಬೇತಿ ಆಯುಕ್ತರಾದ ಶ್ರೀ ಎಂ.ಏಸ್ ಪ್ರಕಾಶ್, ಶ್ರೀಮತಿ ವನಜಾಕ್ಷಿ ಬಿ.ಎಸ್., ಸಹ ಕಾರ್ಯದರ್ಶಿಗಳಾದ ಶುಭಮಂಗಳ ಹಾಗೂ ಸ್ಕೌಟ್ಸ್ ವಿದ್ಯಾರ್ಥಿಗಳು ಭಾಗವಹಿಸಿ ಗಿಡ ನೆಡುವುದರ ಮೂಲಕ ಸಸಿಗಳನ್ನು ಪೋಷಣೆ ಮಾಡುವುದಾಗಿ ಲೈಬ್ರರಿ ವ್ಯವಸ್ಥಾಪಕರಾದ ಮೀರರವರಿಗೆ ತಿಳಿಸಲಾಯಿತು.



* ಹಾಸನ ಜಿಲ್ಲಾ ಸಂಸ್ಥೆ ಹಾಗೂ ಹಾಸನ ತಾಲ್ಲೂಕು ಸ್ಥಳೀಯ ಸಂಸ್ಥೆ ಸಂಯುಕ್ತ ಆಶ್ರಯದಲ್ಲಿ, ಹಾಸನ ಜಿಲ್ಲಾ ಸೆಂಟ್ರಲ್ ಲೈಬ್ರರಿಯಲ್ಲಿ ಪರಿಸರ ದಿನವನ್ನು ಹಣ್ಣುಗಳ ಗಿಡಗಳನ್ನು ನೆಡುವುದರ ಮೂಲಕ ಆಚರಣೆ ಮಾಡಲಾಯಿತು. ಈ ಸಂದರ್ಭದಲ್ಲಿ ಜಿಲ್ಲಾ ಮುಖ್ಯ ಆಯುಕ್ತರಾದ ಡಾ. ವೈ.ಏಸ್. ವೀರಭದ್ರಪ್ಪ, ಜಿಲ್ಲಾ ಆಯುಕ್ತರು (ಗೈಡ್) ಶ್ರೀಮತಿ ಎಂ.ಬಿ. ಗಿರಿಜಾಂಬಿಕ, ಜಿಲ್ಲಾ ತರಬೇತಿ ಆಯುಕ್ತರಾದ ಶ್ರೀ ಎಂ.ಎಸ್. ಪ್ರಕಾಶ್,

ಶ್ರೀಮತಿ ವನಜಾಕ್ಷಿ ಬಿ.ಎಸ್., ಸಹ ಕಾರ್ಯದರ್ಶಿಗಳಾದ ಶುಭಮಂಗಳ ಹಾಗೂ ಸ್ಕೌಟ್ಸ್ ವಿದ್ಯಾರ್ಥಿಗಳು ಭಾಗವಹಿಸಿ ಗಿಡ ನೆಡುವುದರ ಮೂಲಕ ಸಸಿಗಳನ್ನು ಪೋಷಣೆ ಮಾಡುವುದಾಗಿ ಲೈಬ್ರರಿ ವ್ಯವಸ್ಥಾಪಕರಾದ ಮೀರರವರಿಗೆ ತಿಳಿಸಲಾಯಿತು.

* ಮೇ 24 ರಂದು ನೂತನ ಹಾಸನ ವಿದ್ಯಾಲಯದ ಕುಲಪತಿಗಳಾದ ಡಾ. ತಾರಾನಾಥ್ ಹಾಗೂ ಕುಲ ಸಚಿವರಾದ ಡಾ. ಪುಟ್ಟಸ್ವಾಮಿರವರನ್ನು ಭೇಟಿ ಮಾಡಿ ರೋವರ್ಸ್-ರೇಂಜರ್ಸ್ ವಿಭಾಗದ ಮಾಹಿತಿಯನ್ನು ನೀಡಿ ಓರ್ವ ಸಂಯೋಜಕರನ್ನು ನಿಯೋಜನೆ ಮಾಡಬೇಕೆಂದು ವಿನಂತಿ ಮಾಡಿಕೊಳ್ಳಲಾಯಿತು. ಈ ಸಂದರ್ಭದಲ್ಲಿ ಜಿಲ್ಲಾ ಕಾರ್ಯದರ್ಶಿ ಶ್ರೀ ಸುರೇಶ್ ಗುರೂಜಿ, ಜಿಲ್ಲಾ ತರಬೇತಿ ಆಯುಕ್ತರು ಶ್ರೀ ಎಂ.ಎಸ್. ಪ್ರಕಾಶ್, ಸಹಾಯಕ ರಾಜ್ಯ ಸಂಘಟನಾ ಆಯುಕ್ತರು ಶ್ರೀಮತಿ ಪ್ರಿಯಾಂಕ ಹೆಚ್.ಎಂ. ಹಾಜರಿದ್ದರು.

*ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಚನ್ನರಾಯಪಟ್ಟಣ ತಾಲ್ಲೂಕು ಸಂಸ್ಥೆಯ ವತಿಯಿಂದ ರೋವರ್ಸ್-ರೇಂಜರ್ಸ್ ವಿದ್ಯಾರ್ಥಿಗಳಿಗೆ ಬೇಸಿಗೆ ಶಿಬಿರವನ್ನು ಮೇ 24 ರಂದು ಮಾಡಲಾಯಿತ್ತು. ವಿದ್ಯಾರ್ಥಿಗಳಿಗೆ ರಾಜ್ಯ ಪುರಸ್ಕಾರ್ ವಿಷಯಗಳನ್ನು ಹೇಳಿ ಕೊಡಲಾಯಿತು. ಶಿಬಿರದಲ್ಲಿ ಜಿಲ್ಲಾ ಕಾರ್ಯದರ್ಶಿ ಶ್ರೀ ಸುರೇಶ್ ಗುರೂಜಿ, ಜಿಲ್ಲಾ ತರಬೇತಿ ಆಯುಕ್ತರು ಶ್ರೀ ಎಂ.ಎಸ್. ಪ್ರಕಾಶ್ ಭಾಗವಹಿಸಿ ತರಬೇತಿಯನ್ನು ನೀಡಿದರು.

* ಮೇ 19 ರಂದು "ರೈತನಿಗೆ ಗೊತ್ತು ಮಣ್ಣಿನ ಬೆಲೆ, ಬಡವರಿಗೆ ಗೊತ್ತು ದುಡ್ಡಿನ ಬೆಲೆ, ಅಜ್ಞಾನಿಗೆ ಗೊತ್ತು ಜ್ಞಾನದ ಬೆಲೆ" ಎಂದು ಶ್ರೀ ಸುರೇಶ್ ಗುರೂಜಿ ನುಡಿದರು. ಭಾರತ್ ಸ್ಕೌಟ್ಸ್-ಗೈಡ್ಸ್ ಹಾಸನ ಜಿಲ್ಲಾ ಸಂಸ್ಥೆ ಹಾಗೂ ಶ್ರೀ ರಾಜೀವ, ಶಿಕ್ಷಣ ಮಹಾವಿದ್ಯಾಲಯದ ಬಿ.ಎಡ್ ವಿದ್ಯಾರ್ಥಿಗಳಿಗೆ ಯಗಚಿ ಪ್ರೌಢ ಶಾಲೆ ಕಂದಲಿ ಹಾಸನ ತಾಲ್ಲೂಕಿನಲ್ಲಿ ಸ್ಕೌಟ್ಸ್-ಗೈಡ್ಸ್ ಪ್ರಾರಂಭಿಕ ತರಬೇತಿ ಶಿಬಿರ ಹಾಗೂ ಸಮೂಹ ವಾಸ್ತವ್ಯ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದರು. ಗೌರವ ಉಪಸ್ಥಿತಿ ವಹಿಸಿದ ಡಾ. ವೈ.ಎಸ್. ವೀರಭದ್ರಪ್ಪ ಮಾತನಾಡುತ್ತಾ "ಹೆಣ್ಣು-ಗಂಡು ಎಂಬ ಭೇದ ಭಾವವಿಲ್ಲದೆ ಸ್ಕೌಟ್ಸ್-ಗೈಡ್ಸ್ ತರಬೇತಿಯನ್ನು ಎಲ್ಲರೂ ಪಡೆಯಬಹುದಾಗಿದೆ. ಈಗಾಗಲೇ ಸಾಕಷ್ಟು ಶಿಕ್ಷಕಿಯರು ತರಬೇತಿ ಪಡೆದು ಉತ್ತಮ ಸೇವೆ ಸಲ್ಲಿಸುತ್ತಿರುತ್ತಾರೆ" ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಪ್ರಾಂಶುಪಾಲರಾದ ಡಾ. ಮಿನಿ ವಾರ್ಗಿಸ್, ಡಾ. ಮಂಜುನಾಥ್, ಶ್ರೀಮತಿ ನವೀನ. ಕೆ., ಶಾಲಾ ಆಡಳಿತ ಮಂಡಳಿಯ ಅಧ್ಯಕ್ಷರಾದ ಕಂದಲಿ ಶ್ರೀ ತಿಮ್ಮಪ್ಪರವರು ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀ ಜಯಕೃಷ್ಣ ಹಾಗೂ ಕಾಲೇಜು ಸಿಬ್ಬಂದಿ ವರ್ಗದವರು 150ಕ್ಕೂ ಹೆಚ್ಚು ಶಿಬಿರಾರ್ಥಿಗಳು ಉಪಸಿತರಿದ್ದು ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.



* ಹೊಳೆನರಸೀಪುರ ತಾಲ್ಲೂಕು ಸಂಸ್ಥೆಯ ವತಿಯಿಂದ ಜೂನ್ 07 ರಿಂದ 09ರ ವರಗೆ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜಿನಲ್ಲಿ ಬೇಸಿಗೆ ಶಿಬಿರ ಹಾಗೂ ವಿಪತ್ತು ನಿರ್ವಹಣಾ ತರಬೇತಿ ಶಿಬಿರವನ್ನು ಆಯೋಜನೆ ಮಾಡಲಾಗಿತ್ತು. ತರಬೇತಿ ಶಿಬಿರದಲ್ಲಿ ರಾಜ್ಯ ಕಾರ್ಯದರ್ಶಿ ಶ್ರೀ ಗಂಗಪ್ಪಗೌಡರವರು ಭಾಗವಹಿಸಿ ವಿದ್ಯಾರ್ಥಿಗಳಿಗೆ ಶಿಕ್ಷಣದ ಮಹತ್ವ, ಸ್ಕೌಟಿಂಗ್ ಮತ್ತು ಗೈಡಿಂಗ್‌ನ ಮಹತ್ವವನ್ನು ತಿಳಿಸಿ ಸ್ಕೌಟಿಂಗ್ ಫಾರ್ ಬಾಯ್ಸ್ ಪುಸ್ತಕದ ಐದು ಹಂತಗಳನ್ನು ಪುರೈಸಿದರೆ ಉತ್ತಮ ಜೀವನವನ್ನು ನಡೆಸಲು ಸೂಕ್ತ ಮಾರ್ಗದರ್ಶನ ಸುಲಭವಾಗಿ ಕೈಗೆಸಿಗುತ್ತದೆ ಎಂದು ಕಿವಿ ಮಾತುಗಳನ್ನು ತಿಳಿಸಿದರು. ಕಾರ್ಯಕ್ರಮದಲ್ಲಿ ಜಿಲ್ಲಾ ಕಾರ್ಯದರ್ಶಿ ಶ್ರೀ ಸುರೇಶ್ ಗುರೂಜಿ ಭಾಗವಹಿಸಿ ವಿದ್ಯಾರ್ಥಿಗಳಿಗೆ ಶಿಕ್ಷಣಕ್ಕೆ ಏಕಾಗ್ರತೆ ವೈಕ್ತಿತ್ವ ಅಭಿವೃದ್ಧಿಯ ಬಗ್ಗೆ ಮಾಹಿತಿಯನ್ನು ನೀಡಿದರು, ಕೇಂದ್ರ ಸ್ಥಾನಿಕ ಆಯುಕ್ತರು ಪ್ರೊ. ಜಿ.ಡಿ. ನಾರಾಯಣ್ ಕಾರ್ಯಕ್ರಮದಲ್ಲಿ ಭಾಗವಹಿಸಿ ವಿದ್ಯಾರ್ಥಿಗಳಿಗೆ ಕಾಲೇಜು ಜೀವನದಲ್ಲಿ ಸಿಕ್ಕ ಅವಕಾಶಗಳನ್ನು ಸದುಪಯೋಗ ಮಾಡಿಕೊಳ್ಳಬೇಕೆಂದು ತಿಳಿಸಿದರು. ವಿಶೇಷ ತರಬೇತಿಯಾಗಿ ಅಗ್ನಿ ಶಾಮಕದಳದ ಸಿಬ್ಬಂದಿ ಶ್ರೀ ವೀರಭದ್ರಪ್ಪರವರು ಪ್ರಾತ್ಯಕ್ಷಿಕೆಯ ಮೂಲಕ ಬೆಂಕಿಯ ಅವಘಡಗಳ ಸಂರಕ್ಷಣೆಯ ಬಗ್ಗೆ ಮಾಹಿತಿಯನ್ನು ತಿಳಿಸಿದರು. ನಂತರ ಆಂಬ್ಯುಲೆನ್ಸ್‌ನ ಬಗ್ಗೆ ವಿದ್ಯಾರ್ಥಿಗಳಿಗೆ ಮಾಹಿತಿಯನ್ನು ತಿಳಿಸಲಾಯಿತು ನಂತರ ಸ್ಕೌಟಿಂಗ್-ಗೈಡಿಂಗ್‌ನ ಚಟುವಟಿಕೆಯ ಬಗ್ಗೆ ಮಾಹಿತಿಯನ್ನು ತಿಳಿಸಲಾಯಿತು. ಸರ್ವಧರ್ಮ ಪ್ರರ್ಥನೆ ಕಾರ್ಯಕ್ರಮವನ್ನು ಮಾಡುವುದರೊಂದಿಗೆ ಶಿಬಿರವನ್ನು ಮುಕ್ತಾಯಗೊಳಿಸಲಾಯಿತು. ಸಮಾರೋಪ ಸಮಾರಂಭ ಕಾರ್ಯಕ್ರಮದಲ್ಲಿ ಜಿಲ್ಲಾ ಮುಖ್ಯ ಆಯುಕ್ತರು ಡಾ. ವೈ.ಎಸ್. ವೀರಭದ್ರಪ್ಪರವರು ಭಾಗವಹಿಸಿ ಶುಭಕೋರಿದರು.



* ಚನ್ನರಾಯಪಟ್ಟಣ ತಾಲ್ಲೂಕಿನ ಜ್ಞಾನ ಸಾಗರ ಶಾಲೆಯ ವಿದ್ಯಾರ್ಥಿಗಳಿಂದ ಪರಿಸರ ದಿನಚಾರಣೆಯ ಪ್ರಯುಕ್ತ ಶಾಲಾ ಆವರಣದಲ್ಲಿ ಚಿತ್ರಕಲೆ ಸ್ಪರ್ಧೆಯನ್ನು ಆಯೋಜನೆ ಮಾಡಲಾಯಿತು. ನಂತರ ಬೀಜ ದುಂಡೆಗಳನ್ನು ತಯಾರಿಸಿ ಅರಣ್ಯಾಧಿಕಾರಿಗಳಿಗೆ ನೀಡಿರುತ್ತಾರೆ. ಶಾಲಾ ಮುಖ್ಯೋಪಾಧ್ಯಾಯರು ಡಾ. ಸುಜಾ ಫಿಲಿಪ್ಸ್, ಗೈಡ್ ಶಿಕ್ಷಕಿ ಶ್ರೀಮತಿ ಶೋಭಾ, ಶ್ರೀಮತಿ ಸರಸ್ವತಿ, ಸ್ಕೌಟ್ ಮಾಸ್ಟರ್ ಶ್ರೀ ಚಂದ್ರಪ್ಪ ಉಪಸ್ಥಿತರಿದ್ದರು.

* ಜೂನ್ 12 ರಂದು ಹಾಸನ ಜಿಲ್ಲಾ ಸಂಸ್ಥೆಯಲ್ಲಿ ಜಿಲ್ಲಾ ಮಟ್ಟದ ರೋವರ್ಸ್ ಸ್ಕೌಟ್ ಲೀಡರ್ & ರೇಂಜರ್ ಲೀಡರ್ಸ್ ಸಮಾವೇಶವನ್ನು ಆಯೋಜನೆ ಮಾಡಲಾಯಿತು. ಸಮಾವೇಶದ ಉದ್ಘಾಟನೆಯನ್ನು ಶ್ರೀ ಬಿ.ಕೆ. ರವಿಕಾಂತ್, ಹಿರಿಯ ಸಿವಿಲ್ ನ್ಯಾಯಾಧಿಶರು ಜಿಲ್ಲಾ ಕಾನೂನು

ಪ್ರಾಧಿಕಾರ ಇವರು ಉದ್ಘಾಟನೆ ಮಾಡಿ ಕಾರ್ಯಕ್ರಮಕ್ಕೆ ಶುಭ ಕೋರಿದರು. ಜಿಲ್ಲಾ ಕಾರ್ಯದರ್ಶಿ ಶ್ರೀ ಸುರೇಶ್ ಗುರೂಜಿ, ಜಿಲ್ಲಾ ಆಯುಕ್ತರು ಶ್ರೀಮತಿ ಗಿರಿಜಾಂಭಿಕ, ಜಿಲ್ಲಾ ಖಜಾಂಚಿ ಶ್ರೀಮತಿ ಜಯರಮೇಶ್, ಡಾ. ಜಿ.ಡಿ ನಾರಾಯಣ್, ಕೇಂದ್ರ ಸ್ಥಾನಿಕ ಆಯುಕ್ತರು ಭಾಗವಹಿಸಿದರು. ಎ.ಎಸ್.ಓ.ಸಿ. ಶ್ರೀಮತಿ ಪ್ರಿಯಾಂಕ ಕಾರ್ಯಕ್ರಮವನ್ನು ಸಂಘಟಿಸಿದರು.



* ಜೂನ್ 12 ರಂದು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಯೋಗದಲ್ಲಿ ಬಾಲಕಾರ್ಮಿಕರ ವಿರೋಧಿ ದಿನ ಪ್ರಯುಕ್ತ ನಗರ ಪ್ರಮುಖ ಬೀದಿಗಳಲ್ಲಿ ಜಾಥಾ ಕಾರ್ಯಕ್ರಮವನ್ನು ಮಾಡಲಾಯಿತು. ಕಾರ್ಯಕ್ರಮದಲ್ಲಿ ಜಿಲ್ಲಾ ಆಯುಕ್ತರು (ಗೈಡ್) ಶ್ರೀಮತಿ ಗಿರಿಜಾಂಭಿಕ, ಜಿಲ್ಲಾ ಕಾರ್ಯದರ್ಶಿ ಶ್ರೀ ಸುರೇಶ್ ಗೂರೂಜಿ, ಎ.ಎಸ್.ಓ.ಸಿ. ಶ್ರೀಮತಿ ಪ್ರಿಯಾಂಕರವರು ಭಾಗವಹಿಸಿದರು. ಬವಸರಾಜೇಂದ್ರ ಶಾಲಾ ಸ್ಕೌಟ್ಸ್ ವಿದ್ಯಾರ್ಥಿಗಳು ಕಾಲೇಜಿನ ರೋವರ್ಸ್ ಮತ್ತು ರೇಂಜರ್ಸ್ ವಿದ್ಯಾರ್ಥಿಗಳು ಸ್ಕೌಟ್ ಮಾಸ್ಟರ್ ಶ್ರೀ ಶಿವನಂದರವರು ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿರುತ್ತಾರೆ.

## ಬಿಬಿಎಂಪಿ

2023ನೇ ಸಾಲಿನ ವಿಶ್ವ ಪರಿಸರ ದಿನಾಚರಣೆಯನ್ನು ರಾಜ್ಯದ ಮಾನ್ಯ ಉಪ ಮುಖ್ಯಮಂತ್ರಿ ಶ್ರೀ ಡಿ.ಕೆ. ಶಿವಕುಮಾರ್ ರವರ ನೇತೃತ್ವದಲ್ಲಿ ರಾಚೇನಹಳ್ಳಿ ಕೆರೆ ಮುಂಬಾಗದಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್‌ಗಳ ನೆರವಿನೊಂದಿಗೆ ಆಚರಿಸಲಾಯಿತು.

ಕಾರ್ಯಕ್ರಮದಲ್ಲಿ ಮಾನ್ಯ ಕಂದಾಯ ಮಂತ್ರಿಗಳಾದ ಶ್ರೀ ಕೃಷ್ಣ ಭೈರೆಗೌಡ, ಬಿಬಿಎಂಪಿಯ ಮುಖ್ಯ ಆಯುಕ್ತರಾದ ಶ್ರೀ ತುಷಾರ್ ಗಿರಿನಾಥ್, ವಿಶೇಷ ಆಯುಕ್ತರಾದ ಶ್ರೀಮತಿ ಪ್ರೀತಿ ಗೆಹ್ಲೋಟ್, ಬಿಬಿಎಂಪಿಯ ಜಿಲ್ಲಾ ಕಾರ್ಯದರ್ಶಿ ಶ್ರೀ ಮುನಿಶ್ವಾಮಪ್ಪ ಭಾಗವಹಿಸಿದ್ದರು.




## ಕಾರವಾರ (ಉ.ಕ.)

29 ರಿಂದ 30 ಮೇ 2023ರ ವರಗೆ ಸರಕಾರಿ ಪ್ರಥಮ ದರ್ಜೆ ಕಾಲೇಜು ಕುಮಟಾದಲ್ಲಿ ಬೇಸಿಗೆ ಶಿಬಿರ ನಡೆಯಿತು. ಉದ್ಘಾಟನಾ ಕಾರ್ಯಕ್ರಮಕ್ಕೆ ಶ್ರೀಮತಿ ವಿಜಯ ನಾಯಕ್ ಪ್ರಾಂಶುಪಾಲರು, ಶ್ರೀ ಪರಮೇಶ್ವರ ಭಂಡಾರಿ, ಜಿಲ್ಲಾ ನೋಡಲ್ ಅಧಿಕಾರಿ, ಕುಮಟಾ ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ ಶ್ರೀ ಕೆ.ಪಿ. ಭಂಡಾರಿ, ರೋವರ್ ಮತ್ತು ರೇಂಜರ್ ಲೀಡರ್, ಸಂಪನ್ಮೂಲ ವ್ಯಕ್ತಿಯಾಗಿ ಎ.ಎಸ್.ಓ.ಸಿ. ಶ್ರೀ ಕರಿಸಿದ್ದಪ್ಪ ಟಿ., ಶ್ರೀಮತಿ ಬೇಬಿ ಎಸ್. ಪಡಿಯಾರ್ ಉಪಸ್ಥಿತರಿದ್ದರು.




* ಜೂನ್ 1. 2023 ರಂದು ಹೊನ್ನಾವರ ಎಂ.ಪಿ.ಇ. ಸೊಸೈಟಿ ಸೆಂಟ್ರಲ್ ಶಾಲೆಯಲ್ಲಿ ಬೇಸಿಗೆ ಶಿಬಿರ ಕಾರ್ಯಕ್ರಮವು ಆರಂಭಗೊಂಡಿತು. ಉದ್ಘಾಟನಾ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಡಾ. ಜಿ.ಜಿ. ಸಭಾಹಿತ್, ಜಿಲ್ಲಾ ಮುಖ್ಯ ಆಯುಕ್ತರು ಭಾರತ್ ಸ್ಕೌಟ್ಸ್–ಗೈಡ್ಸ್ ಜಿಲ್ಲಾ ಸಂಸ್ಥೆ ಕರವಾರ, ಅಧ್ಯಕ್ಷರಾಗಿ ಶ್ರೀ ಎಸ್.ಎಂ. ಭಟ್, ಕಾರ್ಯದರ್ಶಿ ಎಂ.ಪಿ.ಸಿ. ಸೊಸೈಟಿ, ಪ್ರಾಂಶುಪಾಲರಾದ ಶ್ರೀಮತಿ ಕಾಂತಿಭಟ್, ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಕರಿಸಿದ್ದಪ್ಪ ಟಿ., ಸಹಕಾರ ರಾಜ್ಯ ಸಂಘಟನಾ ಆಯುಕ್ತರು, ಸ್ಕೌಟ್ ಮಾಸ್ಟರ್ ಶ್ರೀ ಸುಜಯ್ ಭಟ್ ಉಪಸ್ಥಿತರಿದ್ದರು. ಸುಮಾರು 90 ವಿದ್ಯಾರ್ಥಿನಿಲಯರು, 75 ವಿದ್ಯಾರ್ಥಿಗಳು ಮತ್ತು ಶಿಕ್ಷಕ–ಶಿಕ್ಷರೇತರ ಸಿಬ್ಬಂದಿಗಳು ಭಾಗವಹಿಸಿದ್ದರು. ವೇದಿರೆಯಲ್ಲಿದ್ದ ಗಣ್ಯರು ದೀಪ ಬೆಳಗಿಸುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿದರು. ಮುಖ್ಯ ಅತಿಥಿ ಭಾಷಣದಲ್ಲಿ ಜಿಲ್ಲಾ ಮುಖ್ಯ ಆಯುಕ್ತರು ಡಾ॥ ಜಿ.ಜಿ. ಸಭಾಹಿತ್ ಶಿಬಿರಾರ್ಥಿಗಳಿಗೆ ಶುಭ ಕೋರಿದರು. ಅಧ್ಯಕ್ಷತೆ ವಹಿಸಿದ ಶ್ರೀ ಎಸ್.ಎಂ. ಭಟ್, ಸ್ಕೌಟ್–ಗೈಡ್ ಧ್ಯೇಯ ಉದ್ದೇಶಗಳನ್ನು ಅರಿತುಕೊಂಡು ರಾಜ್ಯ ಪುರಸ್ಕಾರ ರಾಷ್ಟ್ರಪತಿ ಪುರಸ್ಕಾರ ಪ್ರಶಸ್ತಿಗಳನ್ನು ಪಡೆದುಕೊಳ್ಳುವುದು ನಮ್ಮ ಹೆತ್ತವರಿಗೆ, ಸಮಾಜಕ್ಕೆ, ದೇಶಕ್ಕೆ ಸಲ್ಲಿಸುವ ಗೌರವವಾಗಿದೆ" ಎಂದು. ನುಡಿದರು. ಪ್ರಾಂಶುಪಾಲರು ಶ್ರೀಮತಿ ಕಾಂತಿಭಟ್ ವಿದ್ಯಾಲಯದ ರಾಜ್ಯ ಪುರಸ್ಕಾರ



ಪಡೆದ ವಿದ್ಯಾರ್ಥಿಗಳ ಸಾಧನೆಯ ಬಗ್ಗೆ ಪರಿಚಯ ಮಾಡಿಕೊಟ್ಟರು. ನಂತರ ಕಾರ್ಯಾಗಾರ ಪ್ರಾರಂಭವಾಯಿತು.

* ಜೂನ್ 5 ರಂದು ಬೆಳಿಗ್ಗೆ 9.30 ರಿಂದ ಹೊನ್ನಾವರ ವಲಯ ಅರಣ್ಯ ಇಲಾಖೆಯ ಸಹಯೋಗದಲ್ಲಿ ಹೊನ್ನಾವರ ಕಾಸರಗೋಡಿನ ಇಕೋಬೀಚ್ ಆವರಣದಲ್ಲಿ ನಡೆದ "ಕಾಂಡ್ಲಾ ಉತ್ಸವ 2023" ಹಾಗೂ "ವಿಶ್ವ ಪರಿಸರ ದಿನಾಚರಣೆ" ಉದ್ಘಾಟನಾ ಸಮಾರಂಭದಲ್ಲಿ ಕಾರ್ಯಕ್ರಮ ಉದ್ಘಾಟಿಸಿದರು ಮಾನ್ಯ ಶ್ರೀ ಮಂಕಾಳ, ವೈದ್ಯ ಮೀನುಗಾರಿಕಾ ಮತ್ತು ಬಂದರು, ಒಳನಾಡು ಜಲಸಾರಿಗೆ ಇಲಾಖೆ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರು ಮಾತನಾಡಿ ಅರಣ್ಯವನ್ನು ರಕ್ಷಿಸಿ ಉಳಿಸಿ ಬೆಳೆಸಿಕೊಂಡು ಹೋಗಬೇಕು. ಕೃಷಿಗೆ ಹೆಚ್ಚಿನ ಮಹತ್ವ ನೀಡುವುದು ನಮ್ಮೆಲ್ಲರ ಆದ್ಯ ಕರ್ತವ್ಯ ಎಂದು ಜನತೆಗೆ ಸೂಚಿಸಿದರು. ಮ್ಯಾನ್ರೋವ್ ಕುರಿತು ಮಾಹಿತಿ ಒಳಗೊಂಡ ಕೈಗಾ ಪರಿಸರ ವಿಜ್ಞಾನಿ ಪುಟ್ಟರಾಜು ಅವರು "ಮ್ಯಾನ್ರೋವ್ಸ್ ಆಫ್ ಕರ್ನಾಟಕ ಮತ್ತು ದ ಮರೈನ್ ಲೈಫ್ ಆಫ್ ಹೊನ್ನಾವರ ಡಿವಿಷನ್" ಪುಸ್ತಕಗಳನ್ನು ಅನಾವರಣ ಗೊಳಿಸಲಾಯಿತು. ಹೊನ್ನಾವರದ ಎಂ.ಪಿ.ಇ. ಸೊಸೈಟಿಯ ಸೆಂಟ್ರಲ್ ಶಾಲೆಯ 40 ಸ್ಕೌಟ್ ಮತ್ತು ಗೈಡ್ಸ್ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಎಸ್.ಡಿ.ಎಂ. ಕಾಲೇಜಿನ ಹಾಗೂ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ರೋವರ್–ರೇಂಜರ್ಸ್ ವಿದ್ಯಾರ್ಥಿಗಳು ಸ್ಕೌಟ್ ಮಾಸ್ಟರ್ ಶ್ರೀ ಸುಜಯ್ ಭಟ್ ಹಾಗೂ ಶ್ರೀಮತಿ ವನಿತಾ ನಾಯಕ್ ಗೈಡ್ ಕ್ಯಾಪ್ಟನ್ ಭಾಗವಹಿಸಿದ್ದರು, ಸಹಾಯಕ ಸಂಘಟನಾ ಆಯುಕ್ತರು ಶ್ರೀ ಕರಿಸಿದ್ದಪ್ಪ ಟಿ., ಈ ಸಂದರ್ಭದಲ್ಲಿ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿದರು.



* ಜೂನ್ 5, 2023 ರಂದು ಕಾರವಾರದಲ್ಲಿ ಜಿಲ್ಲಾ ಆಡಳಿತ ಮತ್ತು ಸ್ಥಳೀಯ ಸಂಸ್ಥೆ ಸಹಯೋಗದಲ್ಲಿ ಕಡಲತೀರ ಸ್ವಚ್ಛತಾ ಅಭಿಯಾನ ಕಾರ್ಯಕ್ರಮ ನಡೆಸಿದರು. ಶ್ರೀ ಮಹಾದೇವ ರಾಣೆ, ಉಪಸ್ಥಿತರಿದ್ದರು. ಸೇಂಟ್ ಜೋಸೆಫ್ ಶಾಲೆಯಲ್ಲಿ ಪರಿಸರ ದಿನಾಚರಣೆ ಅಂಗವಾಗಿ ಸಸಿ ನೆಡುವ ಕಾರ್ಯಕ್ರಮವನ್ನು ಮಾಡಿದರು. ಹೊನ್ನಾವರದ ಇಂಗ್ಲಿಷ್ ಶಾಲೆಯಲ್ಲಿ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಪರಿಸರ ಬಗ್ಗೆ ವಿದ್ಯಾರ್ಥಿಗಳಿಗೆ ಮಾಹಿತಿ ನೀಡಲಾಯಿತು. ಜನತಾ ವಿದ್ಯಾಲಯ ಮಿರ್ಜಾನ ಶಾಲೆಯಲ್ಲಿ ವಿಶ್ವ ಪರಿಸರ ದಿನಾಚರಣೆ ನಡೆಯಿತು. ಮಿರ್ಜಾನ್ ಕೋಟೆ ಸುತ್ತಮುತ್ತ ಸ್ವಚ್ಛತಾ ಕಾರ್ಯಕ್ರಮ ನಡೆಸಿದರು. ನ್ಯೂ ಇಂಗ್ಲೀಷ್ ಪಿ.ಯು. ಕಾಲೇಜ್ ಭಟ್ಕಳ ಇಲ್ಲಿ ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮದಲ್ಲಿ ಸ್ಕೌಟ್ ಮತ್ತು ಗೈಡ್ಸ್ ರೋವರ್–ರೇಂಜರ್ ವಿದ್ಯಾರ್ಥಿಗಳು ಪ್ರಾಂಶುಪಾಲರ ಜೊತೆ ಉಪನ್ಯಾಸಕರು ಸೇರಿ ಹೆಣ್ಣಿನ ಸಸಿ ನೆಡುವ ಮೂಲಕ ಆಚರಿಸಿದರು.



ಭಟ್ಕಳ ಸ್ಥಳೀಯ ಸಂಸ್ಥೆ ಮತ್ತು ಶ್ರೀ ದುರ್ಗಾ ಪರಮೇಶ್ವರಿ ಪ್ರೌಢ ಶಾಲೆಯ ಸಹಯೋಗದಲ್ಲಿ ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ ಶ್ರೀ ವೆಂಕಟೇಶ ಗುಬ್ಬಿ ಹಿತ್ತಲ 46 ಸ್ಕೌಟ್ ಮತ್ತು ಗೈಡ್ ವಿದ್ಯಾರ್ಥಿಗಳು ಸೇರಿ ಕಡಲತೀರ ಸ್ವಚ್ಛತಾ ಅಭಿಮಾನ ಕಾರ್ಯಕ್ರಮ ನಡೆಸಿದರು. ಹೊನ್ನಾವರದ ಎಂ.ಪಿ.ಇ. ಸೊಸೈಟಿ ಸೆಂಟ್ರಲ್ ಶಾಲೆಯಲ್ಲಿ ಗೈಡ್ಸ್ ವಿದ್ಯಾರ್ಥಿನಿಯರು ವಿಶ್ವ ಪರಿಸರ ದಿನಾಚರಣೆ ಸಂದರ್ಭದಲ್ಲಿ ಶಾಲಾ ಆವರಣದಲ್ಲಿ ಸ್ವಚ್ಛತಾ ಕಾರ್ಯಕ್ರಮ ನಡೆಸಿದರು. ನಂತರ ಪರಸ್ಪರ ಗಿಡ ವಿನಿಮಯ ಮಾಡಿಕೊಂಡು ಗಿಡ ನೆಟ್ಟು ನೀರು ಹಾಕಿದರು.

* ಜನತಾ ವಿದ್ಯಾಲಯ ಅನಿಲಗೊಡ ಹೊನ್ನಾವರ ಪರಿಸರ ಸಂರಕ್ಷಣೆ ನಮ್ಮೆಲ್ಲರ ಹೊಣೆ ಎಂಬಂತೆ ಪರಿಸರವನ್ನು ರಕ್ಷಣೆ ಮಾಡಬೇಕಾದರೆ ಮೊದಲು ಪ್ಲಾಸ್ಟಿಕ್ ನಿರ್ಮೂಲನೆ ಮಾಡಬೇಕು. ಪ್ಲಾಸ್ಟಿಕ್ ಬಳಕೆಯನ್ನು ಅದಷ್ಟು ಕಡಿಮೆ ಮಾಡಬೇಕೆಂದು ಶಾಲಾ ಸುತ್ತಲಿರುವ ಅಂಗಡಿಗಳಿಗೆ ಸ್ಕೌಟ್–ಗೈಡ್ಸ್ ಮಕ್ಕಳು ವಿನಂತಿಸಿದರು ಹಾಗೂ ಶಾಲಾ ಸುತ್ತಮುತ್ತಲಿನ ಆವರಣವನ್ನು ಸ್ವಚ್ಛಗೊಳಿಸಿದರು.

* ಜೂನ್ 6 ಬೆಳಿಗ್ಗೆ 10.30 ಕುಮಟಾದ ಗಿಬ್ ಗರ್ಲ್ಸ್ ಶಾಲೆಯಲ್ಲಿ ಬೇಸಿಗೆ ಶಿಬಿರ ಉದ್ಘಾಟನೆ ನಡೆಯಿತು. ಅತಿಥಿಗಳಾಗಿ ಕುಮಟಾ ತಾಲ್ಲೂಕಿನ ಕಾರ್ಯದರ್ಶಿ ಶ್ರೀ ಕೆ.ಪಿ. ಭಂಡಾರಿ ಭಾಗವಹಿಸಿದ್ದರು. ಅಧ್ಯಕ್ಷರಾಗಿ ಶ್ರೀಮತಿ ಗೀತಾ ಪೈ ಸಂಪನ್ಮೂಲ ವ್ಯಕ್ತಿಯಾಗಿ ಶ್ರೀಮತಿ ಬೇಬಿ ಎಸ್. ಪಡಿಯಾರ್ ನಾಯಕಿ ಶ್ರೀಮತಿ ವೀಣಾ ಭಟ್ ಉಪಸ್ಥಿತರಿದ್ದರು. ಸ್ಕೌಟ್–ಗೈಡ್ ವಿದ್ಯಾರ್ಥಿಗಳು ಭಾಗವಹಿಸಿದ್ದರು.

* ಜೂನ್ 8 ರಂದು ಹೊನ್ನಾವರದ ಎಂ.ಪಿ.ಇ. ಸೊಸೈಟಿಯ ಸೆಂಟ್ರಲ್ ಶಾಲೆಯ ಸ್ಕೌಟ್–ಗೈಡ್ ವಿದ್ಯಾರ್ಥಿಗಳು ಪರಿಸರ ರಕ್ಷಣೆ ಕುರಿತ ಜಾಗೃತಿ ಜಾಥಾ ಕಾರ್ಯಕ್ರಮ ನಡೆಸಿದರು. ಪ್ರಾಂಶುಪಾಲರಾದ ಶ್ರೀಮತಿ ಕಾಂತಿ ಭಟ್ ಜಾಥಾಕ್ಕೆ ಚಾನೆ ನೀಡಿದರು. ಸ್ಕೌಟ್ ಮಾಸ್ಟರ್ ಶ್ರೀ ಸುಜಯ್ ಭಟ್ ಹಾಗೂ ಗೈಡ್ ಕ್ಯಾಪ್ಟನ್ ಶ್ರೀಮತಿ ವನಿತಾ ನಾಯ್ಕ, ಶಿಕ್ಷಕ ಶಿಕ್ಷಕೇತರ ಸಿಬ್ಬಂದಿಗಳು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

* ಜೂನ್ 8 ರಂದು ಹೊನ್ನಾವರದ ಎಂ.ಪಿ.ಇ. ಸೊಸೈಟಿ ಸೆಂಟ್ರಲ್ ಶಾಲೆಯ ಗೈಡ್ ವಿದ್ಯಾರ್ಥಿನಿಯರು ಗೈಡ್ ಕ್ಯಾಪ್ಟನ್ ಶ್ರೀಮತಿ ವನಿತಾ ನಾಯ್ಕ ಮಾರ್ಗದರ್ಶನದಲ್ಲಿ ಬೀಜದುಂಡೆ ತಯಾರಿಕೆ ಚಟುವಟಿಕೆಯನ್ನು ನಡೆಸಿದರು. ಮೊದಲು ಮಣ್ಣನ್ನು ನೀರು ಹದಗೊಳಿಸಿ ಅದರಲ್ಲಿ ತಾವು ತಂದ ಬೀಜವನ್ನು ಇಟ್ಟು ಉಂಡೆ ಕಟ್ಟಿ ಬೀಜದುಂಡೆ ತಯಾರಿಸಿದರು.

* ಜೂನ್ 6, 2023 ಕರ್ನಾಕಟ ಪಬ್ಲಿಕ್ ಸ್ಕೂಲ್‌ನಲ್ಲಿ ಕೆರೆ ಕುಮಟಾ ಬೇಸಿಗೆ ಶಿಬಿರ ಉದ್ಘಾಟನೆ. ಸ್ಥಳೀಯ ಸಂಸ್ಥೆ ಕಾರ್ಯದರ್ಶಿ

ಶ್ರೀ ಕೆ.ಪಿ. ಭಂಡಾರಿ ಹಾಗೂ ಶ್ರೀಮತಿ ಬೇಬಿ ಪಡಿಯಾರ್ ಭಾಗವಹಿಸಿದ್ದರು.

* ಜೂನ್ 11, 2023 ರಂದು ಕಾರವಾರ ಜಿಲ್ಲಾ ಸಂಸ್ಥೆಯ ವತಿಯಿಂದ ಪರಿಸರ ದಿನಾಚರಣೆ ಅಂಗವಾಗಿ ಮೊದಲನೆ ವಾರದಲ್ಲಿ ಭೂಮಿ ಧ್ಯೇಯದ ಆನ್‌ಲೈನ್ ಕಾರ್ಯಕ್ರಮ ನಡೆಸಿದರು. ಶ್ರೀ ಪ್ರಭಾಕರ ಭಟ್, ರಾಜ್ಯ ಸಂಘಟನಾ ಆಯುಕ್ತರು ಇವರ ಮಾರ್ಗದರ್ಶನದಲ್ಲಿ, ಡಾ॥ ಜಿ.ಜಿ. ಸಭಾಹಿತ್ ಜಿಲ್ಲಾ ಮುಖ್ಯ ಆಯುಕ್ತರು ಇವರ ಅಧ್ಯಕ್ಷತೆಯಲ್ಲಿ ಝೂಮ್ ಕಾರ್ಯಕ್ರಮದಲ್ಲಿ ಜಿಲ್ಲೆಯ ಐದು ತಾಲ್ಲೂಕುಗಳು ಕಬ್, ಬುಲ್‌ಬುಲ್, ಸ್ಕೌಟ್-ಗೈಡ್, ರೋವರ್ಸ್-ರೇಂಜರ್ಸ್ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಶ್ರೀಮತಿ ಶೋಭಾ ಕುಲಕರ್ಣಿ, ಜಿಲ್ಲಾ ಆಯುಕ್ತರು (ಗೈ), ಶ್ರೀ ಆರ್.ಟಿ. ಹೆಬ್ಬಾರ್, ಜಿಲ್ಲಾ ಕಾರ್ಯದರ್ಶಿ, ಶ್ರೀ ಜಿ.ಆರ್. ಮಡಿವಾಳ, ಜಿಲ್ಲಾ ಖಜಾಂಚಿ, ಶ್ರೀ ಕರಿಸಿದ್ದಪ್ಪ ಟಿ. ಹಾಗೂ ಸಹಕಾರ ರಾಜ್ಯ ಸಂಘಟನಾ ಆಯುಕ್ತರು, ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿಗಳು ಶಿಕ್ಷಕರು ಭಾಗವಹಿಸಿದ್ದರು.

* ಜೂನ್ 18 ರಂದು ಕಾರವಾರ ಜಿಲ್ಲಾ ಸಂಸ್ಥೆಯ ವತಿಯಿಂದ ಪರಿಸರ ದಿನಾಚರಣೆ ಅಂಗವಾಗಿ ಎರಡನೇ ವಾರದಲ್ಲಿ ನೀರು. ನೀರು ರಕ್ಷಣೆ ನಮ್ಮೆಲ್ಲರ ಹೊಣೆ ಧ್ಯೇಯದ ಆನ್‌ಲೈನ್ ಶಿಬಿರಾಗ್ನಿ ಕಾರ್ಯಕ್ರಮ ನಡೆಸಿದರು. ಡಾ॥ ಜಿ.ಜಿ. ಸಭಾಹಿತ್, ಜಿಲ್ಲಾ ಮುಖ್ಯ ಆಯುಕ್ತರು ಇವರ ಅಧ್ಯಕ್ಷತೆಯಲ್ಲಿ ಝೂಮ್ ಕಾರ್ಯಕ್ರಮದಲ್ಲಿ ಜಿಲ್ಲೆಯ ಐದು ತಾಲ್ಲೂಕುಗಳ 54 ಕಬ್, ಬುಲ್‌ಬುಲ್, ಸ್ಕೌಟ್-ಗೈಡ್, ರೋವರ್ಸ್-ರೇಂಜರ್ಸ್‌ಗಳು ಭಾಗವಹಿಸಿದ್ದರು. ಶ್ರೀಮತಿ ಶೋಭಾ ಕುಲಕರ್ಣಿ ಜಿಲ್ಲಾ ಆಯುಕ್ತರು, ಗೈಡ್, ಶ್ರೀ ಆರ್.ಟಿ. ಹೆಬ್ಬಾರ್, ಜಿಲ್ಲಾ ಕಾರ್ಯದರ್ಶಿ, ಶ್ರೀ ಜಿ.ಆರ್. ಮಡಿವಾಳ, ಜಿಲ್ಲಾ ಖಜಾಂಚಿ, ಶ್ರೀ ಕರಿಸಿದ್ದಪ್ಪ ಟಿ., ಸಹಾಯಕ ರಾಜ್ಯ ಸಂಘಟನಾ ಆಯುಕ್ತರು, ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿಗಳು ಶಿಕ್ಷಕರು ಭಾಗವಹಿಸಿದ್ದರು.

## ಕೊಡಗು

ಜೂನ್ 04 ರಂದು ಸಂಜೆ 5 ಗಂಟೆಗೆ ವಿಶ್ವ ಪರಿಸರ ದಿನಾಚರಣೆಯ ಪ್ರಯುಕ್ತ ಭೂಮಿ ಎಂಬ ವಿಷಯದ ಬಗ್ಗೆ ಝೂಮ್‌ನಲ್ಲಿ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಜಿಲ್ಲಾ ಪ್ರಧಾನ ಆಯುಕ್ತರಾದ ಶ್ರೀ ಕೆ.ಟಿ. ಬೇಬಿ ಮ್ಯಾಥ್ಯುರವರು ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಕಾರ್ಯಕ್ರಮದಲ್ಲಿ ಕೊಡಗು ಜಿಲ್ಲಾ ಸಂಸ್ಥೆಯ ಉಪಾಧ್ಯಕ್ಷರು ಆಗಿರುವ ಹಾಗೂ ಪದ್ಮಶ್ರೀ ಪ್ರಶಸ್ತಿ ವಿಜೇತರಾದ ಶ್ರೀಮತಿ ರಾಣಿ ಮಾಚಯ್ಯ, ಜಿಲ್ಲಾ ಸಹ ಕಾರ್ಯದರ್ಶಿ ಶ್ರೀ ಬೋಳ್ಳಾಜಿರ ಅಯ್ಯಪ್ಪ, ಗೈಡ್ ವಿಭಾಗದ ಜಿಲ್ಲಾ ತರಬೇತಿ ಆಯುಕ್ತರಾದ ಶ್ರೀಮತಿ ಮೈಥಿಲಿರಾವ್, ಸಂಪಾ ಜೆ. ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ ಶ್ರೀ ಉಷಾರಾಣಿ, ಹಲವಾರು ಸ್ಕೌಟ್ಸ್-ಗೈಡ್ಸ್ ವಿದ್ಯಾರ್ಥಿಗಳು ಶಿಕ್ಷಕರ ವೃಂದದವರು, ಪೋಷಕರು, ಜಿಲ್ಲಾ ಸಂಘಟಕರಾದ ಶ್ರೀಮತಿ ದಮಯಂತಿ ಇವರು ಭಾವಗಹಿಸಿದ್ದರು.

* ಜೂನ್ 05 ರಂದು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ವಕೀಲರ ಸಂಘ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಕೊಡಗು ಪೊಲೀಸ್ ಇಲಾಖೆ, ಅರಣ್ಯ ಇಲಾಖೆ, ಸಾರ್ವಜನಿಕ ಶಿಕ್ಷಣ ಇಲಾಖೆ ಹಾಗು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಜಿಲ್ಲಾ ಸಂಸ್ಥೆ ಕೊಡಗು ಇದರ ವತಿಯಿಂದ ನ್ಯಾಯಾಲಯ ಆವರಣದಲ್ಲಿ ವಿಶ್ವ ಪರಿಸರ ದಿನಾಚರಣೆಯನ್ನು ಗಿಡ ನೆಡುವುದರ ಮೂಲಕ ಮತ್ತು ಪ್ರಬಂಧ ಮತ್ತು ಚಿತ್ರಕಲಾ ಸ್ಪರ್ಧೆಯಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳಿಗೆ ಪ್ರಶಸ್ತಿ ಪ್ರದಾನ ಮಾಡುವುದರ ಮೂಲಕ ಆಚರಿಸಲಾಯಿತು ಗಿಡಕ್ಕೆ ನೀರು ಹಾಕುವುದರ ಮೂಲಕ ಪದ್ಮಶ್ರೀ ಪ್ರಶಸ್ತಿ ಪಡೆದಿರುವ ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಜಿಲ್ಲಾ ಸಂಸ್ಥೆ ಉಪಾಧ್ಯಕ್ಷರು ಆಗಿರುವ ಶ್ರೀಮತಿ ರಾಣಿ ಮಾಚಯ್ಯನವರು ಕಾರ್ಯಕ್ರಮ ಉದ್ಘಾಟಿಸಿದರು.



"ಪರಿಸರ ಅಸಮತೋಲನದಿಂದ ಇತ್ತೀಚಿನ ವರ್ಷಗಳಲ್ಲಿ ಉಷ್ಣಾಂಶ ಹೆಚ್ಚಾಗುತ್ತಿದೆ" ಎಂದು ಕೊಡಗು ಜಿಲ್ಲೆಯ ಮುಖ್ಯ ಅರಣ್ಯ ಸಂರಕ್ಷಣ ಅಧಿಕಾರಿ ಶ್ರೀ ಬಿ.ಎನ್. ಮೂರ್ತಿಯವರು ಆತಂಕ ವ್ಯಕ್ತಪಡಿಸಿದರು. ಜಿಲ್ಲಾಧಿಕಾರಿ ಡಾ. ಬಿ.ಸಿ. ಸತೀಶ್‌ರವರು ಮಾತನಾಡಿ ಪರಿಸರ ಸಂರಕ್ಷಣೆಗೆ ಪ್ರತಿಯೊಬ್ಬರು ಪಣತೊಡಬೇಕು ಈ ನಿಟ್ಟಿನಲ್ಲಿ ಅಂಗಡಿ ಮಾರುಕಟ್ಟೆಗೆ ತೆರಳುವಾಗ ಕಡ್ಡಾಯವಾಗಿ ಬಟ್ಟೆ ಬ್ಯಾಗನ್ನು ಬಳಸಬೇಕು ಎಂದು ಹೇಳಿದರು. ಪರಿಸರ ಅಸಮತೋಲನವನ್ನು ಸರಿ ತೂಗಿಸಲು ಮನೆಯ ಸುತ್ತಮುತ್ತ ಗಿಡಮರ ನಡಬೇಕು ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು, ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಅಧ್ಯಕ್ಷರಾದ ಶ್ರೀ ಟಿ.ಡಿ. ಪುಟ್ಟರಂಗಸ್ವಾಮಿ ಅವರು ಮಾತನಾಡಿ "ಗಿಡ ನೆಡುವ ಮೂಲಕ ಪರಿಸರ ಸಂರಕ್ಷಣೆ ಮಾಡಬೇಕು ಪರಿಸರ ಉಳಿದಲ್ಲಿ ಪ್ರತಿಯೊಬ್ಬರೂ ಆರೋಗ್ಯವಂತರಾಗಿ ಬದುಕಲು ಸಾಧ್ಯ" ಎಂದು ತಿಳಿಸಿದರು, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ. ಆಕಾಶ್, ಪರಿಸರ ಸಂರಕ್ಷಣೆ ಬಗ್ಗೆ ಪ್ರತಿಜ್ಞಾವಿಧಿಬೋಧಿಸಿದರು, ಇದಕ್ಕೂ ಮೊದಲು ಫೀಲ್ಡ್ ಮಾರ್ಷಲ್ ಕೆ.ಎ. ಕಾರ್ಯಪ್ಪ ಕಾಲೇಜು ಆವರಣದಿಂದ ವಿಶ್ವ ಪರಿಸರ ದಿನಾಚರಣೆಯ ಪ್ರಯುಕ್ತ ಏರ್ಪಡಿಸಲಾಗಿದ್ದ ಜಾಥವನ್ನು ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರಾದ ಶ್ರೀ ಟಿ.ಡಿ. ಪುಟ್ಟರಂಗಸ್ವಾಮಿ ಅವರು ಚಾಲನೆ ನೀಡಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶರಾದ ಶ್ರೀ ಕೆ.ಬಿ. ಪ್ರಸಾದ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಶ್ರೀ ಕೆ. ರಾಮರಾಜನ್, ಉಪ ಅರಣ್ಯ ಸಂರಕ್ಷಣಾಧಿಕಾರಿಗಳಾದ ಶ್ರೀ ಪೂವಯ್ಯ, ಶ್ರೀ ಶಿವರಾಮ ಬಾಬು, ಪದವಿ ಪೂರ್ವ ಶಿಕ್ಷಣ

ಇಲಾಖೆಯ ಉಪನಿರ್ದೇಶಕರಾದ ಶ್ರೀ ಪುಟ್ಟರಾಜು, ಸಾರ್ವಜನಿಕ ಶಿಕ್ಷಣ ಇಲಾಖೆಯ ಶಿಕ್ಷಣಾಧಿಕಾರಿ ಶ್ರೀ ದೊಡ್ಡೇಗೌಡ, ಜಿಲ್ಲಾ ಪ್ರಧಾನ ಆಯುಕ್ತರಾದ ಶ್ರೀ ಕೆ.ಟಿ. ಬೇಬಿ ಮ್ಯಾಥ್ಯು ಎಫ್.ಎಂ.ಸಿ. ಕಾಲೇಜಿನ ಪ್ರಾಂಶುಪಾಲರಾದ ಶ್ರೀ ರಾಘವ್, ಡಿ.ವೈ.ಪಿ.ಸಿ. ಶ್ರೀಮತಿ ಸೌಮ್ಯ, ವಿಷಯ ಪರಿವೀಕ್ಷಕರಾದ ಶ್ರೀಮತಿ ಬಿಂದು, ಪರಿಸರ ಅಧಿಕಾರಿ ಶ್ರೀ ಕೆ. ಕೀರ್ತಿಕುಮಾರ್, ಉಪ ಪರಿಸರ ಅಧಿಕಾರಿ ಶ್ರೀ ಎಸ್. ಪ್ರದೀಪ್, ರಾಜ್ಯ ವಿಜ್ಞಾನ ಪರಿಷತ್ತಿನ ಜಿಲ್ಲಾ ಸಮಿತಿ ಅಧ್ಯಕ್ಷರಾದ ಶ್ರೀ ಟಿ.ಜಿ. ಪ್ರೇಮಕುಮಾರ್, ಭಾರತೀಯ ವಿದ್ಯಾ ಭವನ ಕೊಡಗು ವಿದ್ಯಾಲಯದ ಸ್ಕೌಟ್ ಮತ್ತು ಗೈಡ್ಸ್ ವಿದ್ಯಾರ್ಥಿಗಳು ಎಸ್.ಎಂ.ಸಿ. ಕಾಲೇಜಿನ ವಿದ್ಯಾರ್ಥಿಗಳು ಭಾಗವಹಿಸಿದ್ದರು.

* "ಪ್ಲಾಸ್ಟಿಕ್ ಅನ್ನು ಪೂರ್ಣ ಪ್ರಮಾಣದಲ್ಲಿ ತ್ಯಜಿಸುವುದರ ಮೂಲಕ ಪರ್ಯಾಯ ವ್ಯವಸ್ಥೆಯನ್ನು ಮಾಡಿಕೊಂಡು ಪರಿಸರ ಸಂರಕ್ಷಿಸುವುದು ಪ್ರತಿಯೊಬ್ಬರ ಹೊಣೆ ಎಂದು ಜಿಲ್ಲಾ ಪ್ರಧಾನ ಆಯುಕ್ತರಾದ ಶ್ರೀ ಕೆ.ಟಿ. ಬೇಬಿ ಮ್ಯಾಥ್ಯೂ ಅವರು ತಿಳಿಸಿದ್ದಾರೆ. ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಭಾರತ್ ಸ್ಕೌಟ್ಸ್-ಗೈಡ್ಸ್ ಸಂಸ್ಥೆ, ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು ಇವರ ಸಂಯುಕ್ತ ಆಶ್ರಯದಲ್ಲಿ ವಿಶ್ವ ಪರಿಸರ ದಿನಾಚರಣೆ ಪ್ರಯುಕ್ತ "ಪ್ಲಾಸ್ಟಿಕ್ ಮಾಲಿನ್ಯಕ್ಕೆ ಪರಿಹಾರಗಳು" ಎಂಬ ವಿಷಯದ ಕುರಿತು ನಗರದ ಸಂತ ಮೈಕಲರ ಶಾಲಾ ಆವರಣದಲ್ಲಿ ಶುಕ್ರವಾರ ಚಿತ್ರಕಲಾ ಹಾಗೂ ಪ್ರಬಂಧ ಸ್ಪರ್ಧೆನಡೆಯಿತು.



ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಉಪನಿರ್ದೇಶಕರಾದ ಶ್ರೀ ಸಿ. ರಂಗಧಾಮಯ್ಯ ಅವರು ಮಾತನಾಡಿ "ವಿದ್ಯಾರ್ಥಿಗಳಲ್ಲಿ ಹಾಗೂ ಜನರಲ್ಲಿ ಜಾಗೃತಿ ಮೂಡಿಸುವ ಸಲುವಾಗಿ ಹಾಗೂ ಪರಿಸರ ಸಂರಕ್ಷಣೆಯಲ್ಲಿ ಅವರ ಜವಾಬ್ದಾರಿ ಹಾಗೂ ಪಾತ್ರವನ್ನು ಯಾವ ರೀತಿಯಾಗಿ ನಿರ್ವಹಿಸಬೇಕು ಎಂದು ತಿಳಿಯಬೇಕು. ಪ್ರವಾಸಿಗರಲ್ಲಿ ಸಹ ಪ್ಲಾಸ್ಟಿಕ್ ವಸ್ತುಗಳನ್ನು ಬಳಕೆ ಮಾಡದಂತೆ ಜಾಗೃತಿ ಮೂಡಿಸುವಲ್ಲಿ ಶ್ರಮಿಸುವಂತೆ" ಹೇಳಿದರು. ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿ ಶ್ರೀ ಸದಾಶಿವ ಪಲ್ಲೇದ್, ಸಂತ ಮೈಕಲರ ಶಾಲೆಯ ಪ್ರಾಂಶುಪಾಲರಾದ ಜಾನ್ಸನ್ ಹಾಗೂ ಶಿಕ್ಷಕರು ಹಾಗೂ ಆಡಳಿತ ಮಂಡಳಿ ಪಾಲ್ಗೊಂಡಿದ್ದರು. ಚಿತ್ರಕಲಾ ಮತ್ತು ಪ್ರಬಂಧ ಸ್ಪರ್ಧೆಯಲ್ಲಿ 95ಕ್ಕೂ ಹೆಚ್ಚು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

* ಜೂನ್ 11 ರಂದು ಜಿಲ್ಲಾಡಳಿತದ ವತಿಯಿಂದ "ಶಕ್ತಿ ಯೋಜನೆ" ಕಾರ್ಯಕ್ರಮವು ಕೊಡಗು ಜಿಲ್ಲೆಯ ಮಡಿಕೇರಿ ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣದಲ್ಲಿ ನಡೆಯಿತು. ಈ ಯೋಜನಗೆ ಕೊಡಗು ಜಿಲ್ಲಾ ಉಸ್ತುವಾರಿ ಸಚಿವರಾದ ಸನ್ಮಾನ್ಯ ಶ್ರೀ ಬೋಸ್‌ರಾಜ್‌ರವರು ಚಾಲನೆ ನೀಡಿದರು. ಈ ಸಂದರ್ಭ ಮಡಿಕೇರಿ ತಾಲ್ಲೂಕಿನ ಶಾಸಕರಾದ ಶ್ರೀ ಮಂಥರ್ ಗೌಡರವರು ಹಾಗೂ ಕೊಡಗು ಜಿಲ್ಲಾಧಿಕಾರಿಗಳು ಹಾಗೂ ಭಾರತ್ ಸ್ಕೌಟ್ಸ್-ಗೈಡ್ಸ್ ಜಿಲ್ಲಾ ಸಂಸ್ಥೆಯ ಅಧ್ಯಕ್ಷರಾಗಿರುವ ಡಾ. ಬಿ.ಸಿ. ಸತೀಶ್ ಮತ್ತು ಜಿಲ್ಲಾ ಸಂಸ್ಥೆಯ ಉಪಾಧ್ಯಕ್ಷರು ಪೊಲೀಸ್ ವರಿಷ್ಠಾಧಿಕಾರಿಗಳು ಆಗಿರುವ ಶ್ರೀ ರಾಮರಾಜನ್‌ರವರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

## ಕೋಲಾರ

ಮೇ 26 ರಂದು ಬಂಗಾರಪೇಟೆಯ ಸಾದಕ್ ಅಂತರಾಷ್ಟ್ರೀಯ ಶಾಲೆ ಇಲ್ಲಿ ಶಾಲೆಯ ಎಲ್ಲಾ ಶಿಕ್ಷಕರಿಗೆ ಮಾಹಿತಿ ಶಿಬಿರವನ್ನು ಸಂಘಟಿಸಲಾಗಿತ್ತು. ಶ್ರೀ ಕೆ.ಆರ್. ಸುರೇಶ್, ಶ್ರೀಮತಿ ಎನ್. ಉಮಾದೇವಿ, ಮುಂತಾದವರು ಸಂಪನ್ಮೂಲ ವ್ಯಕ್ತಿಗಳಾಗಿ ಕಾರ್ಯನಿರ್ವಹಿಸಿದ್ದರು.

* ಮೇ 27 ರಂದು ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಕೋಲಾರ ಜಿಲ್ಲಾ ಸಂಸ್ಥೆ, ಮಾಲಿನ್ಯ ನಿಯಂತ್ರಣ ಮಂಡಳಿ, ವಿಜ್ಞಾನ ಪರಿಷತ್ತು ಮತ್ತು ವಿವಿಧ ಸಂಘ ಸಂಸ್ಥೆಗಳ ಸಹಯೋಗದಲ್ಲಿ ಚಿತ್ರಕಲೆ ಮತ್ತು ಪ್ರಬಂಧ ಸ್ಪರ್ಧೆಯನ್ನು ಸ್ಕೌಟ್ ಭವನ ಕೋಲಾರ ಇಲ್ಲಿ ಆಯೋಜಿಸಲಾಗಿತ್ತು. ಸುಮಾರು 240ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದರು. ಕಾರ್ಯಕ್ರಮದಲ್ಲಿ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಕೆ.ವಿ. ಶಂಕರಪ್ಪರವರು ಭಾಗವಹಿಸಿ ವಿಜೇತರಿಗೆ ಬಹುಮಾನ ವಿತರಿಸಿದರು. ಈ ಸಂದರ್ಭದಲ್ಲಿ ಶ್ರೀಮತಿ ಮಂಜುಳ ಬೀಮ್‌ರಾವ್, ಶ್ರೀ ಸುರೇಶ್ ಮುಂತಾದವರು ಭಾಗವಹಿಸಿ ಶುಭಹಾರೈಸಿದ್ದರು.



* ಮೇ 29 ರಿಂದ 31ರ ವರಿಗೆ ಸರ್ಕಾರಿ ಕಿರಿಯರ ಪ್ರಾಥಮಿಕ ಶಾಲೆ ವಳಗೇರನಹಳ್ಳಿ ಶ್ರೀನಿವಾಸಪುರ ತಾಲ್ಲೂರಿನಲ್ಲಿ ಬೇಸಿಗೆ ಶಿಬಿರವನ್ನು ಶ್ರೀಮತಿ ಜರೀನಾ ಬೇಗಾಂರವರ ನೇತೃತ್ವದಲ್ಲಿ ಸಂಘಟಿಸಲಾಯಿತ್ತು.

* ಜೂನ್ 02 ರಿಂದ 03ರ ವರಿಗೆ ಜಿಲ್ಲೆ ಆವನಿ ಮತ್ತು ಅಂತರಗಂಗೆ ಬೆಟ್ಟದಲ್ಲಿ ಪರಿಸರ ದಿನಾಚರಣೆ ಅಂಗವಾಗಿ ರೋವರ್ಸ್-ರೇಂಜರ್ಸ್ ವಿದ್ಯಾರ್ಥಿಗಳಿಂದ ಬೀಜ ಬಿತ್ತನೆ ಕಾರ್ಯಕ್ರಮ ಆಯೋಜಿಸಲಾಗಿತ್ತು.

* ಜೂನ್ 03 ರಂದು ಬಂಗಾರಪೇಟೆಯ ಜೈನ್ ಅಂತರಾಷ್ಟ್ರೀಯ ಶಾಲೆಯಲ್ಲಿ ವಿದ್ಯಾರ್ಥಿಗಳು ಮತ್ತು ಶಿಕ್ಷಕರಿಗೆ ಸ್ಕೌಟ್ಸ್ ಮತ್ತು ಗೈಡ್ಸ್ ಮಾಹಿತಿ ಶಿಬಿರ ಸಂಘಟಿಸಲಾಗಿತ್ತು. ಈ ಮಾಹಿತಿ ಶಿಬಿರವನ್ನು ಶ್ರೀಮತಿ ಅನ್ನಪೂಣೇಶ್ವರಿ, ಪ್ರಾಂಶುಪಾಲರು ಅವರ ನೇತೃತ್ವದಲ್ಲಿ ನಡೆಸಲಾಯಿತ್ತು. ಶ್ರೀ ಕೆ.ಆರ್. ಸುರೇಶ್, ಶ್ರೀಮತಿ ಎನ್. ಉಮಾದೇವಿ ಮುಂತಾದವರು ಸಂಪನ್ಮೂಲ ವ್ಯಕ್ತಿಗಳಾಗಿ ಕಾರ್ಯನಿರ್ವಹಿಸಿದ್ದರು.

* ಜೂನ್ 03 ರಂದು ಕೆ.ಜಿ.ಎಫ್ ಸುಮತಿ ಜೈನ್ ಶಾಲೆಯಲ್ಲಿ ಶಿಕ್ಷಕರಿಗೆ ಸ್ಕೌಟ್ಸ್–ಗೈಡ್ಸ್ ಮಾಹಿತಿ ಶಿಬಿರ ಸಂಘಟಿಸಲಾಗಿತ್ತು. 20 ಶಿಕ್ಷಕರು ಭಾಗವಹಿಸಿದ್ದರು.

* ಜೂನ್ 05 ರಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಕೋಲಾರ ಜಿಲ್ಲೆ, ಜಿಲ್ಲಾ ಸರ್ವೇಕ್ಷಣಾಧಿಕಾರಿಗಳ ಕಛೇರಿ, ಕೋಲಾರ ಜಿಲ್ಲೆ ಹಾಗೂ ಜಿಲ್ಲೆಯ ವಿವಿಧ ಸಂಘ ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ ವಿಶ್ವ ಬೈಸಿಕಲ್ ದಿನಾಚರಣೆ ಮತ್ತು ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಸೈಕಲ್ ಜಾಥಾ ಕಾರ್ಯಕ್ರಮಕ್ಕೆ ಮಾನ್ಯ ಶ್ರೀ ಎಸ್. ಜಗದೀಶ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು ಮತ್ತು ಜಿಲ್ಲಾ ಶಸ್ತ್ರ ಚಿಕಿತ್ಸಕರು ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಶ್ರೀಮತಿ ಪ್ರೇಮಾ ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳು ಭಾಗವಹಿಸಿ ಯಶಸ್ವಿಗೊಳಿಸಿದರು. ಈ ಕಾರ್ಯಕ್ರಮದಲ್ಲಿ ಜಿಲ್ಲಾ ಸಂಘಟಕ ಶ್ರೀ ವಿಶ್ವನಾಥ ವಿ. ಕೋಲಾರ ಹಾಗೂ ಸ್ಕೌಟ್ ಮಾಸ್ಟರ್ ಚೇತನ್‌ರವರ ನೇತೃತ್ವದಲ್ಲಿ 30 ಸ್ಕೌಟ್ಸ್, ರೋವರ್ಸ್ ವಿದ್ಯಾರ್ಥಿಗಳು ಸೈಕಲ್ ಜಾಥಾ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

* ಜೂನ್ 02 ರಂದು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಅರಣ್ಯ ಇಲಾಖೆ, ಕಾನೂನು ಸೇವೆಗಳ ಪ್ರಾಧಿಕಾರ ಕೋಲಾರ, ಕೋಲಾರ ಜಿಲ್ಲೆ ಹಾಗೂ ಜಿಲ್ಲೆಯ ವಿವಿಧ ಸಂಘ ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ ಕೋಲಾರ ತಾಲ್ಲೂಕಿನ ವಕ್ಕಲೇರಿ ಮಾರ್ಕಂಡೇಶ್ವರ ಬೆಟ್ಟದ ತಪ್ಪಲಿನಲ್ಲಿ ಜಿಲ್ಲಾ ಮಟ್ಟದ ಪರಿಸರ ದಿನಾಚರಣೆ ಮತ್ತು ಬಿತ್ತೋತ್ಸವ ಕಾರ್ಯಕ್ರಮಕ್ಕೆ ಮಾನ್ಯ ಶ್ರೀ ಎಸ್. ಮುನಿಸ್ವಾಮಿ ರವರು, ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಜಿಲ್ಲಾ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಶ್ರೀ ಯುಕೇಶ್ ಕುಮಾರ್, ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿ ಶ್ರೀ ನಾರಾಯಣ, ಜಿಲ್ಲಾ ಅರಣ್ಯ ಸಂರಕ್ಷಣಾಧಿಕಾರಿ ಶ್ರೀ ಏಡುಕೊಂಡಲು, ಸಹನ್ ಕುಮಾರ್, ವಲಯ ಅರಣ್ಯಾಧಿಕಾರಿ ಶ್ರೀ ವಾಸುದೇವ್ ಮುಂತಾದವರು ಭಾಗವಹಿಸಿದರು. ಈ ಕಾರ್ಯಕ್ರಮದಲ್ಲಿ ಜಿಲ್ಲಾ ಸಂಘಟಕ ಶ್ರೀ ವಿಶ್ವನಾಥ ವಿ. ಕೋಲಾರ ಹಾಗೂ ಸ್ಕೌಟ್ ಮಾಸ್ಟರ್ ಚೇತನ್‌ರವರ ನೇತೃತ್ವದಲ್ಲಿ 50 ಸ್ಕೌಟ್ಸ್, ರೋವರ್ಸ್ ವಿದ್ಯಾರ್ಥಿಗಳು ಭಾಗವಹಿಸಿ ಯಶಸ್ವಿಗೊಳಿಸಿದರು ಮತ್ತು ವಿವಿಧ ಶಾಲೆ ಮತ್ತು ಕಾಲೇಜುಗಳ ವಿದ್ಯಾರ್ಥಿಗಳು ಭಾಗವಹಿಸಿ ಯಶಸ್ವಿಗೊಳಿಸಿದರು.





* ಜೂನ್ 05 ರಂದು ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ ಸ್ಥಳೀಯ ಸಂಸ್ಥೆ ಮಾಲೂರು ಮತ್ತು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ತೊರ್ನಹಳ್ಳಿ, ಮಾಲೂರು ತಾಲ್ಲೂಕು ಸಂಯುಕ್ತ ಆಶ್ರಯದಲ್ಲಿ ವಿದ್ಯಾರ್ಥಿಗಳು ಮತ್ತು ಶಿಕ್ಷಕರು ವನಮಹೋತ್ಸವ ಕಾರ್ಯಕ್ರಮದಲ್ಲಿ ಶಾಲೆಯ ಆವರಣದಲ್ಲಿ ಗಿಡ ನೆಡುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು . ಈ ಸಂದರ್ಭದಲ್ಲಿ ಸ್ಥಳೀಯ ಸಂಸ್ಥೆ ಕಾರ್ಯದರ್ಶಿ ಶ್ರೀ ಟಿ.ಎಂ. ವೆಂಕಟೇಶ್, ಶಾಲೆಯ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಭಾಗವಹಿಸಿದರು. ಜಿಲ್ಲೆಯ ಗೋಲ್ಲಹಳ್ಳಿ ಶಾಲೆ, ಕುಡಿಯನೂರು, ನವಚೇತನ ಶಾಲೆ, ಎಕ್ಸ್‌ಲೆಂಟ್ ಶಾಲೆ, ಪ್ರೀತಿ ವಿದ್ಯಾ ಮಂದಿರ, ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಶಾಲೆ, ಮೊರಾರ್ಜಿ ದೇಸಾಯಿ ವಸತಿ ಶಾಲೆ, ವಡಗೂರು ಮುತಾಂದ ಶಾಲೆಗಳಲ್ಲಿ ಆಚರಿಸಲಾಯಿತ್ತು.

* ಜೂನ್ 05 ರಂದು ಶ್ರೀನಿವಾಸಪುರದ ಶ್ರೀ ಜಿ.ಜಿ ವೇಣು ವಿದ್ಯಾ ಸಂಸ್ಥೆಯ ಕಾಯದರ್ಶಿಗಳಾದ ಶ್ರೀ ಮಣಿಕಂಠರವರ ನೇತೃತ್ವದಲ್ಲಿ ಸುಮಾರು 120ಕ್ಕೂ ಹೆಚ್ಚು ಕಬ್, ಬುಲ್‌ಬುಲ್ಸ್, ಸ್ಕೌಟ್ಸ್–ಗೈಡ್ಸ್, ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಪಟ್ಟಣದ ನ್ಯಾಯಾಲಯಗಳ ಆವರಣ, ಪುರಸಭೆ ಆವರಣ, ಅಗ್ನಿಶಾಮಕ ದಳದ ಆವರಣ, ಸಾರ್ವಜನಿಕ ಆವರಣ, ಅರಣ್ಯ ಇಲಾಖೆ ಆವರಣ ಮುಂತಾದ ಸ್ಥಳಗಳಲ್ಲಿ ಗಿಡ ನಡೆಯುವ ಮೂಲಕ ಮತ್ತು ಪರಿಸರದ ಜಾಗೃತಿ ಮೂಡಿಸಿ ವಿಶ್ವ ಪರಿಸರ ದಿನಾಚರಣೆ ಆಚರಿಸಲಾಯಿತು. ಇದೇ ದಿನ ಶಾಲೆಯ ಸ್ಕೌಟ್ಸ್–ಗೈಡ್ಸ್ ಘಟಕಗಳಿಂದ ವಿವಿಧ ಜಾಗೃತಿ ನಾಟಕಗಳು, ಸೈಕಲ್ ಜಾಥ ಮುತಾಂದ ಕಾರ್ಯಕ್ರಮಗಳು ಆಯೋಜಿಸಲಾಗಿತ್ತು. ಸ್ಥಳೀಯ ಸಂಸ್ಥೆ ಕಾರ್ಯದರ್ಶಿ ಶ್ರೀ ಟಿ.ಎಂ. ರಾಮಕೃಷ್ಣೆಗೌಡ, ಸಹ ಕಾರ್ಯದರ್ಶಿ ಶ್ರೀ ವಿನಯ್ ಹಾಗೂ ಶಾಲೆಯ ವಿವಿದ ಶಿಕ್ಷಕರು ಮತ್ತು ವಿವಿಧ ಇಲಾಖೆಗಳ ಅಧಿಕಾರಿಗಳು ಮತ್ತು ಸಾರ್ವಜನಿಕರು ಸಹಕಾರ ನೀಡಿದರು.



* ಜೂನ್ 05 ರಂದು ಕೋಲಾರ ನಗರದ ಸ್ಕೌಟ್ ಭವನ ಕೋಲಾರ ಇಲ್ಲಿ ಪರಿಸರ ದಿನಾಚರಣೆಯನ್ನು ಭಾರತ್ ಸ್ಕೌಟ್ಸ್–ಗೈಡ್ಸ್ ಕೋಲಾರ, ರೋಟರಿ ನಂದಿನಿ, ಕರ್ನಾಟಕ ಜ್ಞಾನ ವಿಜ್ಞಾನ ಸಮಿತಿ ಸಂಯುಕ್ತಾಶ್ರಯದಲ್ಲಿ



ಶ್ರೀ ಕೆ.ವಿ. ಶಂಕರಪ್ಪ, ಜಿಲ್ಲಾ ಮುಖ್ಯ ಆಯುಕ್ತರು, ಗಿಡ ನೆಡವುದರ ಮೂಲಕ ಆಚರಿಸಲಾಯಿತ್ತು. ವಿವಿಧ ಸಂಘ ಸಂಸ್ಥೆಗಳ ಪಧಾದಿಕಾರಿಗಳು ಭಾಗವಹಿಸಿದರು.

* ಜೂನ್ 06 ರಿಂದ 08ರ ವರಿಗೆ ಶ್ರೀ ಮೊರಾರ್ಜಿ ದೇಸಾಯಿ ವಸತಿ ಶಾಲೆ ರಾಜೇನಹಳ್ಳಿ ಮಾಲೂರು ತಾಲ್ಲೂಕು ಕೋಲಾರ ಜಿಲ್ಲೆ ಇಲ್ಲಿ ಬೇಸಿಗೆ ಶಿಬಿರವನ್ನು ಆಯೋಜಿಸಲಾಗಿತ್ತು. ಶಿಬಿರವನ್ನು ಮಾನ್ಯ ರಾಜ್ಯ ಸ್ಕೌಟ್ ಪ್ರತಿನಿಧಿ ಶ್ರೀ ಕೆ.ಎಂ. ರಾಜಪ್ಪ ಉದ್ಘಾಟಿಸಿ ಶುಭಹಾರೈಸಿದರು. ಜಿಲ್ಲಾ ಸಂಘಟಕರಾದ ಶ್ರೀ ವಿಶ್ವನಾಥ ವಿ. ಕೋಲಾರ ಅವರು ಮಾತನಾಡಿ "ಬೇಸಿಗೆ ಶಿಬಿರದಿಂದ. ಸ್ಕೌಟ್ಸ್–ಗೈಡ್ಸ್ ಸಂಸ್ಥೆಯ ಶೇಕಡಾ 30% ಪಠ್ಯ ಕ್ರಮವನ್ನು ಪೂರ್ಣಗೊಳಿಸಲು ಉತ್ತಮ ಸಹಕಾರಿಯಾಗಿದೆ" ಎಂದು ತಿಳಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪ್ರಾಂಶುಪಾಲರಾದ ಶ್ರೀ ರಘುರವರು ವಹಿಸಿ ಮಾತನಾಡಿ "ಬೇಸಿಗೆ ಶಿಬಿರದಿಂದ ವಿದ್ಯಾರ್ಥಿಗಳಿಗೆ ಉತ್ತಮ ಮಾರ್ಗದರ್ಶನ ಮತ್ತು ಸಮಾಜದಲ್ಲಿ ಸೇವೆಯನ್ನು ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ ಆದರಿಂದ ತಾವು ಸದುಪಯೋಗ ಪಡೆದುಕೊಳ್ಳಬೇಕು" ಎಂದು ತಿಳಿಸಿದರು.



* ಜೂನ್ 09 ರಿಂದ 11ರ ವರಿಗೆ ಕೆ.ಜಿ.ಎಫ್ ಸ್ಥಳೀಯ ಸಂಸ್ಥೆ ವ್ಯಾಪ್ತಿಯ ಬಿ.ವಿ.ಎನ್ ಸೆಂಟ್ರಲ್ ಶಾಲೆಯಲ್ಲಿ ತುಳಸಿ ನೇತೃತ್ವದಲ್ಲಿ ಬೇಸಿಗೆ ಶಿಬಿರ ಸಂಘಟಿಸಲಾಗಿತ್ತು.

* ಜೂನ್ 11 ರಂದು ವಿಶ್ವ ಪರಿಸರ ದಿನಾಚರಣೆ ಅಂಗವಾಗಿ 1ನೇ ವಾರದ "ಭೂಮಿ" ವರ್ಚುವಲ್ ಶಿಬಿರಾಗ್ನಿ ಕಾರ್ಯಕ್ರಮ ಜಿಲ್ಲಾ ಮತ್ತು ಸ್ಥಳೀಯ ಸಂಸ್ಥೆ ವತಿಯಿಂದ ಆಯೋಜಿಸಲಾಗಿತ್ತು. ರಾಜ್ಯ ಸಂಸ್ಥೆ, ಜಿಲ್ಲಾ ಮತ್ತು ಸ್ಥಳೀಯ ಸಂಸ್ಥೆ ಪಧಾದಿಕಾರಿಗಳು, ವಿದ್ಯಾರ್ಥಿಗಳು, ಶಿಕ್ಷಕರು ಭಾಗವಹಿಸಿ ಕಾರ್ಯಕ್ರಮ ಯಶಸ್ವಿಗೊಳಿಸಿದ್ದರು.

* ಜೂನ್ 13 ರಿಂದ 15ರ ವರಗೆ ಮುಳಬಾಗಿಲು ಸ್ಥಳೀಯ ಸಂಸ್ಥೆ ಮತ್ತು ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಮುಳಬಾಗಿಲು ಕೋಲಾರ ಜಿಲ್ಲೆ. ಸಂಯುಕ್ತಾಶ್ರಯದಲ್ಲಿ ಬೇಸಿಗೆ ಶಿಬಿರ ಸಂಘಟಿಸಲಾಗಿತ್ತು. ಶಿಬಿರವನ್ನು ಶ್ರೀ ಗಂಗರಾಮಯ್ಯ ಕ್ಷೇತ್ರ ಶಿಕ್ಷಣಾಧಿಕಾರಿಗಳು,



ಅಧ್ಯಕ್ಷರು ಸ್ಥಳೀಯ ಸಂಸ್ಥೆ ಮುಳಬಾಗಿಲು ಮತ್ತು ಶ್ರೀ ಶ್ರೀನಿವಾಸರೆಡ್ಡಿ ಹಿರಿಯ ವಕೀಲರು ಹಾಗೂ ಮಾಜಿ ತಾಲ್ಲೂಕು ಪಂಚಾಯಿತಿ ಅಧ್ಯಕ್ಷರು, ಉಪಾಧ್ಯಕ್ಷರು ಸ್ಥಳೀಯ ಸಂಸ್ಥೆ ಮುಳಬಾಗಿಲು ಅವರು ಜೊತೆಯಾಗಿ ಉದ್ಘಾಟಿಸಿ ರೋವರ್ಸ್–ರೇಂಜರ್ಸ್‌ಗಳಿಗೆ ಶುಭ ಹಾರೈಸಿದರು. ಉದ್ಘಾಟನಾ ಸಮಾರಂಭದ ಅಧ್ಯಕ್ಷತೆಯುನ್ನು ಕಾಲೇಜಿನ ಪ್ರಾಂಶುಪಾಲರಾದ ಶ್ರೀ ವೆಂಕಟ ಮುನಿಯಪ್ಪರವರು ವಹಿಸಿದ್ದರು. ಈ ಸಂದರ್ಭದಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷರಾದ ಶ್ರೀ ವೆಂಕಟಗಿರಿಯಪ್ಪ, ಉಪಾಧ್ಯಕ್ಷರು ಮತ್ತು ಸ್ಥಳೀಯ ಸಂಸ್ಥೆ ಮಾಜಿ ಕಾರ್ಯದರ್ಶಿ ಶ್ರೀ ಭಾಸ್ಕರ್ ರೆಡ್ಡಿ, ಜಿಲ್ಲಾ ಜಂಟಿ ಕಾರ್ಯದರ್ಶಿ ಶ್ರೀಮತಿ ಎನ್. ಉಮಾದೇವಿ ಮುಂತಾದವರು ಭಾಗವಹಿಸಿದರು. ಶಿಬಿರವನ್ನು ಶ್ರೀ ಜಿ. ಮೋಹನ್ ರೆಡ್ಡಿ ಹೆಚ್.ಡ್ಲೂ.ಬಿ. (ರೋವರ್) ಹಾಗೂ ಸ್ಥಳೀಯ ಸಂಸ್ಥೆ ಕಾರ್ಯದರ್ಶಿಗಳು ಮುಳಬಾಗಿಲುರವರು ನೇತೃತ್ವದಲ್ಲಿ ಸಂಘಟಿಸಲಾಗಿದೆ. ಶಿಬಿರದಲ್ಲಿ 80ಕ್ಕೂ ಹೆಚ್ಚು ರೋವರ್ಸ್–ರೇಂಜರ್ಸ್ ವಿದ್ಯಾರ್ಥಿಗಳು ಭಾಗವಹಿಸಿದ್ದರು.

## ಮೈಸೂರು

ಮೇ 10 ರಂದು ನಡೆದ ಸಾರ್ವತ್ರಿಕ ಚುನಾವಣೆಯಲ್ಲಿ ಮೈಸೂರು ಜಿಲ್ಲೆಯ ಕಬ್ಸ್, ಸ್ಕೌಟ್, ಗೈಡ್, ರೋವರ್ ಮತ್ತು ರೇಂಜರ್ ಮಕ್ಕಳು ಬೂತ್‌ಗಳಲ್ಲಿ ಸೇವೆಯನ್ನು ಸಲ್ಲಿಸಿರುತ್ತಾರೆ.

* ನಂಜನಗೂಡು ಸ್ಥಳೀಯ ಸಂಸ್ಥೆ ವತಿಯಿಂದ ಬೇಸಿಗೆ ಶಿಬಿರವನ್ನು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಕೆರೆಹುಂಡಿಯಲ್ಲಿ ಆಯೋಜಿಸಲಾಗಿತ್ತು. ಈ ಶಿಬಿರದಲ್ಲಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಕೆರೆಹುಂಡಿ, ಚಾಮಲಾಪುರ ಹುಂಡಿ, ಕನಕದಾಸ ಶಾಲೆಯ ಮಕ್ಕಳು ಭಾಗವಹಿಸಿದ್ದಾರೆ.



* ಮೇ 06ರಂದು ಮೈಸೂರಿನ ಜೆ.ಎಸ್.ಎಸ್. ಮಹಿಳಾ ಕಾಲೇಜಿನಲ್ಲಿ ಮತದಾನ ಜಾಗೃತಿ ಜಾಥವನ್ನು ಆಯೋಜಿಸಲಾಗಿತ್ತು. ಕಾಲೇಜಿನ




ಪ್ರಾಂಶುಪಾಲರಾದ ಡಾ. ಪೂರ್ಣಿಮಾ ಜಾಥಗೆ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಕಾಲೇಜಿನ ಡೀನ್ ಡಾ. ರೇವಣ್ಣ, ಲೀಡರ್ ಶ್ರೀಮತಿ ಅನುಷಾ, ಜಿಲ್ಲಾ ಸಂಘಟಕರಾದ ಶ್ರೀ ರಾಮಪ್ರಸಾದ್ ಉಪಸ್ಥಿತರಿದ್ದರು.

## ರಾಯಚೂರು

ಜೂನ್ 05ರಂದು ಸರಕಾರಿ ಪದವಿ ಮಹಾವಿದ್ಯಾಲಯ ಮಾನ್ವಿ ರೋವರ್ ಕ್ರ್ಯೂ ಮತ್ತು ರೇಂಜರ್ ಟೀಮ್ ಘಟಕಗಳ ಸಹಯೋಗದಲ್ಲಿ ವಿಶ್ವ ಪರಿಸರ ದಿನಾಚರಣೆಯನ್ನು ಸಸಿ ನೆಡುವ ಮೂಲಕ ಆಚರಣೆ ಮಾಡಲಾಯಿತು. ಸದರಿ ಕಾರ್ಯಕ್ರಮವು ಪರಿಸರದ ಮಹತ್ವ ಮತ್ತು ಪರಿಸರದ ಉಳಿವಿಗಾಗಿ ನಾವು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಜಾಗೃತಿಯನ್ನು ಮೂಡಿಸಲಾಯಿತು. ಇದರಲ್ಲಿ ರೋವರ್‌ಗಳು ಮತ್ತು ರೇಂಜರ್‌ಗಳು ಹಾಗೂ ಕಾಲೇಜಿನ ಉಪನ್ಯಾಸಕವೃಂದದವರು ಭಾಗಿಯಾಗಿದ್ದರು.

* ಏಪ್ರಿಲ್ 21 ರಂದು ಜಿಲ್ಲಾ ಸಂಸ್ಥೆ ರಾಯಚೂರು ಹಾಗೂ ಸ್ಥಳೀಯ ಸಂಸ್ಥೆ ಮಾನ್ವಿ ವತಿಯಿಂದ ಮತದಾನ ಜಾಗೃತಿ ಅಭಿಯಾನವನ್ನು ಡಾ. ಬಿ.ಆರ್. ಅಂಬೇಡ್ಕರ್ ವೃತ್ತ ಐ.ಬಿ. ಮಾನ್ವಿ ಹತ್ತಿರ ಆಯೋಜನೆ ಮಾಡಲಾಯಿತು. ಈ ಸಂದರ್ಭದಲ್ಲಿ ಸಾರ್ವಜನಿಕರಿಗೆ ಮತದಾನ ಜಾಗೃತಿ ಕುರಿತು ಭಿತ್ತಿಪತ್ರಗಳ ಮೂಲಕ ಅರಿವು ಮೂಡಿಸಲಾಯಿತು. ಈ ಸಂದರ್ಭದಲ್ಲಿ ಜಿಲ್ಲಾ ಪದಕ ಸಮಿತಿ ಸದಸ್ಯ ಶ್ರೀ ಮುದ್ಗಲ್ ಸಾಬ್, ಗೈಡ್ ವಿಭಾಗದ ರಾಜ್ಯ ಪರಿಷತ್ ಸದಸ್ಯರಾದ ಶ್ರೀ ರಜನಿ ಡಿ. ಅಂಬಣ್ಣ ನಾಯಕ ಮ್ಯಾಕಲ್ ಎಸ್.ಜಿ.ವಿ., ಶ್ರೀಮತಿ ಸೌಮ್ಯ ಗೈಡ್ ಕ್ಯಾಪ್ಟನ್ ಹಾಜರಿದ್ದರು.

* ಏಪ್ರಿಲ್ 29 ರಂದು ರಾಯಚೂರು ಜಿಲ್ಲಾ ಸಂಸ್ಥೆ ಹಾಗೂ ಸ್ಥಳೀಯ ಸಂಸ್ಥೆ ಮಾನ್ವಿ ಮತ್ತು ಶಾಂತಿ ನಿಕೇತನ ಪ್ರಾಥಮಿಕ ಮತ್ತು ಪ್ರೌಢ ಶಾಲೆ ಸಿರವಾರ ವತಿಯಿಂದ ಮತದಾನ ಜಾಗೃತಿ ಅಭಿಯಾನವನ್ನು ಆಯೋಜನೆ ಮಾಡಲಾಯಿತು. ಇದೇ ಸಂದರ್ಭದಲ್ಲಿ ಶ್ರೀಮತಿ ಅನುರಾಧ ಯು. ಗೈಡ್ ಕ್ಯಾಪ್ಟನ್, ಶ್ರೀ ಹನುಮೇಶ ಸ್ಕೌಟ್ ಮಾಸ್ಟರ್, ಶ್ರೀಮತಿ ಕುಸುಮ ಪವರ್ ಗೈಡ್ ಕ್ಯಾಪ್ಟನ್ ಹಾಗೂ ಸ್ಕೌಟ್ಸ್,ಗೈಡ್ಸ್ ಮಕ್ಕಳು ಭಾಗವಹಿಸಿದ್ದರು.

* ಮೇ 10 ರಂದು ಜಿಲ್ಲಾ ಸಂಸ್ಥೆ ರಾಯಚೂರು ಹಾಗೂ ಸ್ಥಳೀಯ ಸಂಸ್ಥೆ ಮಾನ್ವಿ ವತಿಯಿಂದ ಕರ್ನಾಟಕ ವಿಧಾನಸಭಾ ಚುನಾವಣೆಯ ಮಾನ್ವಿ ನಗರದ ವಿವಿಧ ಮತಗಟ್ಟೆಗಳಲ್ಲಿ ಶ್ರೀಮತಿ ಅಜೀಜಾ ಸುಲ್ತಾನಾ, ಜಿಲ್ಲಾ ಮುಖ್ಯ ಆಯುಕ್ತರು ರಾಯಚೂರು, ಶ್ರೀ ಬಲರಾಮಕೃಷ್ಣ, ಅಧ್ಯಕ್ಷರು ಸ್ಥಳೀಯ ಸಂಸ್ಥೆ ಮಾನ್ವಿ, ಶ್ರೀ ಎಮ್. ರಾಮಲಿಂಗಪ್ಪ ಕಾರ್ಯದರ್ಶಿಗಳು ಸ್ಥಳೀಯ ಸಂಸ್ಥೆ ಮಾನ್ವಿ ಇವರ ಮಾರ್ಗದರ್ಶನದಲ್ಲಿ ಕಾಕತೀಯ ಶಾಲೆ ಮಾನ್ವಿ, ಮಾನ್ವಿ ಪಬ್ಲಿಕ್ ಶಾಲೆ ಮಾನ್ವಿ, ಗುರುಕುಲ ವಿದ್ಯಾಕೇಂದ್ರ ಶಾಲೆ ಮಾನ್ವಿ ಶಾಲೆಯ ಸ್ಕೌಟ್ಸ್ ಮತ್ತು ಗೈಡ್ಸ್ ಮಕ್ಕಳು, ಶ್ರೀಮತಿ ಸೌಮ್ಯ ಗೈಡ್ ಕ್ಯಾಪ್ಟನ್ ಹಾಗೂ ಶ್ರೀ ಮುದ್ಗಲ್ ಸಾಬ್ ಕ್ವಾರ್ಟರ್ ಮಾಸ್ಟರ್, ಶ್ರೀ ಅಂಬಣ್ಣ ನಾಯಕ ಮ್ಯಾಕಲ್ ಎಸ್.ಜಿ.ವಿ/ಎಸ್.ಎಮ್.ಸಿ.ರವರು ಸ್ವಯಂ ಸೇವಕರಾಗಿ ಸೇವೆಯನ್ನು ಸಲ್ಲಿಸಿದರು.

* ಜೂನ್ 03 ರಂದು ಜಿಲ್ಲಾ ಸಂಸ್ಥೆ ರಾಯಚೂರು ಹಾಗೂ ಸ್ಥಳೀಯ ಸಂಸ್ಥೆ ರಾಯಚೂರು ವತಿಯಿಂದ ಜಿಲ್ಲಾ ಸ್ಕೌಟ್ ಭವನದಲ್ಲಿ ಭೂಮಿಯ ಕುರಿತು ಮೊದಲನೇ ವಾರದ ವರ್ಚುವಲ್ ಶಿಬಿರಾಗ್ನಿ ಕಾರ್ಯಕ್ರಮವನ್ನು ಆಯೋಜನೆ ಮಾಡಲಾಯಿತು. ಶಿಬಿರಾಗ್ನಿಯನ್ನು ಶ್ರೀ ಬಸವರಾಜ ಗದಗಿನ ಜಿಲ್ಲಾ ಕಾರ್ಯದರ್ಶಿಗಳು ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಶ್ರೀ ಆರ್.ಎಚ್. ಸಾಗರ್, ಅಧ್ಯಕ್ಷರು ಸ್ಥಳೀಯ ಸಂಸ್ಥೆ ರಾಯಚೂರು, ಶ್ರೀ ಎನ್. ಶೇಖರ್ ಕಾರ್ಯದರ್ಶಿಗಳು ಸ್ಥಳೀಯ ಸಂಸ್ಥೆ ರಾಯಚೂರು ಹಾಗೂ ಅತಿಥಿಗಳಾಗಿ ಶ್ರೀಮತಿ ರಾಜಶ್ರೀ ಸಜ್ಜನ್ ಜಂಟಿ ಕಾರ್ಯದರ್ಶಿಗಳು (ಗೈ) ಶ್ರೀಮತಿ ಶಕುಂತಲಾ, ಜಿಲ್ಲಾ ತರಬೇತಿ ಆಯುಕ್ತರು (ಗೈ) ಅವರು ಆಗಮಿಸಿದ್ದರು. ಇದೇ ಶ್ರೀಮತಿ ಶೋಭಾ ವಿ.ಕೆ. ಗೈಡ್ ಕ್ಯಾಪ್ಟನ್, ಶ್ರೀಮತಿ ಎಸ್. ಮಂಗಲ ಗೈಡ್ಸ್ ಕ್ಯಾಪ್ಟನ್ ಹಾಗೂ ಶ್ರೀ ಅಂಬಣ್ಣ ನಾಯಕ ಮ್ಯಾಕಲ್ ಎಸ್.ಜಿ.ವಿ/ಎಸ್.ಎಮ್.ಸಿ. ಮತ್ತು ಸ್ಕೌಟ್ಸ್–ಗೈಡ್ಸ್ ಮಕ್ಕಳು ಭಾಗವಹಿಸಿದ್ದರು. ಹಾಗೂ ಸಸಿಗಳಿಗೆ ನೀರು ಹಾಕಿ ಮೈದಾನವನ್ನು ಸ್ವಚ್ಛತೆ ಮಾಡಲಾಯಿತು ಮತ್ತು ಸ್ಕೌಟ್ಸ್–ಗೈಡ್ಸ್ ಮಕ್ಕಳಿಗೆ ವಿವಿಧ ರೀತಿಯ ಚಟುವಟಿಕೆಗಳನ್ನು ಆಯೋಜನೆ ಮಾಡಿ ವಿಜೇತರಾದ ಮಕ್ಕಳಿಗೆ ಬಹುಮಾನ ವಿತರಿಸಲಾಯಿತು.



* ಜೂನ್ 04 ರಂದು ಜಿಲ್ಲಾ ಸಂಸ್ಥೆ ರಾಯಚೂರು ಹಾಗೂ ಸ್ಥಳೀಯ ಸಂಸ್ಥೆ ಸಿಂಧನೂರು ಮತ್ತು ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ದುಗ್ಗಮ್ಮನ ಗುಂಡ ಶಾಲೆಯ ಶ್ರೀ ಚಿಕ್ಕಯ್ಯ ಪಂಡಿತ್, ಕಬ್ ಘಟಕದಿಂದ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಜಯಂತಿ ಆಚರಣೆ ಮಾಡಲಾಯಿತು. ಇದೇ ಸಂದರ್ಭದಲ್ಲಿ ಶ್ರೀ ಶಂಕರದೇವರು ಹೀರೆಮಠ ಕಬ್ ಮಾಸ್ಟರ್ ಹಾಗೂ ಶ್ರೀ ವಿರೂಪಾಕ್ಷ ಫಕೀರಪೂರ ಶಿಕ್ಷಕರು ಮತ್ತು ಕಬ್ಸ್, ಬುಲ್–ಬುಲ್ಸ್ ಮಕ್ಕಳು ಉಪಸ್ಥಿತರಿದ್ದರು.

* ಜೂನ್ 05 ರಂದು ಸಂಸ್ಥೆ ರಾಯಚೂರು ಹಾಗೂ ಸ್ಥಳೀಯ ಸಂಸ್ಥೆಗಳ ಮತ್ತು ವಿವಿಧ ಶಾಲೆಗಳ ವತಿಯಿಂದ ಜಿಲ್ಲೆಯ ವಿವಿಧ ಶಾಲೆಗಳಲ್ಲಿ ವಿಶ್ವ ಪರಿಸರ ದಿನಾಚರಣೆಯನ್ನು ಆಯೋಜನೆ ಮಾಡಲಾಯಿತು. ಇದೇ ಸಂದರ್ಭದಲ್ಲಿ ಕಬ್ ಮಾಸ್ಟರ್, ಫ್ಲಾಕ್



ಲೀಡರ್, ಸ್ಕೌಟ್ ಮಾಸ್ಟರ್, ಗೈಡ್ ಕ್ಯಾಪ್ಟನ್ ಹಾಗೂ ಪದಾಧಿಕಾರಿಗಳು ಮತ್ತು ಕಬ್ಸ್, ಬುಲ್–ಬುಲ್ಸ್, ಸ್ಕೌಟ್ಸ್– ಗೈಡ್ಸ್ ಮಕ್ಕಳು ಭಾಗವಹಿಸಿದ್ದರು.

* ಜೂನ್ 05 ರಂದು ಜಿಲ್ಲಾ ಸಂಸ್ಥೆ ರಾಯಚೂರು ಹಾಗೂ ಸ್ಥಳೀಯ ಸಂಸ್ಥೆ ಮಾನ್ವಿ ಮತ್ತು ಕಾಕತೀಯ ಶಾಲೆ ಮಾನ್ವಿ ಇವರುಗಳ ಸಂಯುಕ್ತಾಶ್ರಯದಲ್ಲಿ ಶಾಲೆಯಲ್ಲಿ ವಿಶ್ವ ಪರಿಸರ ದಿನಾಚರಣೆಯನ್ನು ಆಯೋಜನೆ ಮಾಡಲಾಯಿತು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಟಿ. ರಾಮಕೃಷ್ಣ, ಕಾರ್ಯದರ್ಶಿಗಳು ವಹಿಸಿದ್ದರು. ಹಾಗೂ ಶ್ರೀಮತಿ ಅರಿಣಾ, ಶಿಕ್ಷಣ ಸಂಯೋಜಕರು ಸಸಿಗೆ ನೀರು ಹಾಕುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಶ್ರೀ ಅಂಬಣ್ಣನಾಯಕ ಮ್ಯಾಕಲ್, ಎಸ್.ಜಿ.ವಿ/ಎಸ್.ಎಮ್.ಸಿ.ರವರು ಆಗಮಿಸಿದ್ದರು. ಕಬ್ಸ್, ಬುಲ್‌ಬುಲ್ಸ್, ಸ್ಕೌಟ್ಸ್ – ಗೈಡ್ಸ್ ಮಕ್ಕಳು ಶಾಲೆಯ ವಾತಾವರಣವನ್ನು ಸ್ವಚ್ಛತೆ ಮಾಡಲಾಯಿತು ಮತ್ತು ಗಿಡ ಮರಗಳಿಗೆ ನೀರು ಹಾಕಲಾಯಿತು. ನಂತರ ಅರಣ್ಯ ಇಲಾಖೆಯ ಸಹಕಾರದೊಂದಿಗೆ 2000 ಬೀಜದುಂಡೆಯನ್ನು ಮಕ್ಕಳು ಮಾಡಿದರು. ನಂತರ ವರ್ಚುವಲ್ ಶಿಬಿರಾಗ್ನಿ ಕಾರ್ಯಕ್ರಮವನ್ನು ಸಹ ಆಯೋಜನೆ ಮಾಡಲಾಯಿತು. ಇದೇ ಸಂದರ್ಭದಲ್ಲಿ ಶ್ರೀಮತಿ ರಂಜನಿ ಡಿ., ರಾಜ್ಯ ಪರಿಷತ್ ಸದಸ್ಯರು (ಗೈ), ಶ್ರೀ ಚಂದ್ರಶೇಖರ ಕಡಿಜ–ಂಐಖ ಬಿ, ಶ್ರೀಮತಿ ವಸುಂಧರಾ ಫ್ಲಾಕ್ ಲೀಡರ್, ಶ್ರೀ ವಸಂತ್ ರಾವ್ ಕುಲಕರ್ಣಿ, ಸ್ಕೌಟ್ ಮಾಸ್ಟರ್, ಶ್ರೀ ಶಿವರಾಜಪ್ಪ ಸ್ಕೌಟ್ ಮಾಸ್ಟರ್, ಶ್ರೀ ಪರಿಮಳಾ ಕಡಿಜ–ಂಐಖ (ಉ) ಹಾಗೂ ಕಬ್ಸ್, ಬುಲ್‌ಬುಲ್ಸ್, ಸ್ಕೌಟ್ಸ್–ಗೈಡ್ಸ್ 180 ಮಕ್ಕಳು ಭಾಗವಹಿಸಿದ್ದರು.



* ಜೂನ್ 10 ರಂದು ಜಿಲ್ಲಾ ಸಂಸ್ಥೆ ರಾಯಚೂರು ಹಾಗೂ ಸ್ಥಳೀಯ ಸಂಸ್ಥೆ ರಾಯಚೂರು ವತಿಯಿಂದ ಜಿಲ್ಲಾ ಸ್ಕೌಟ್ ಭವನದಲ್ಲಿ ನೀರಿನ ಕುರಿತು ಎರಡನೇ ವಾರದ ವರ್ಚುವಲ್ ಶಿಬಿರಾಗ್ನಿ ಕಾರ್ಯಕ್ರಮವನ್ನು ಆಯೋಜನೆ ಮಾಡಲಾಯಿತು. ಶಿಬಿರಾಗ್ನಿಯನ್ನು ಶ್ರೀ ಗಣೇಶ ನೀರಿನ



ತಜ್ಞರು ರಾಯಚೂರುರವರು ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಶ್ರೀಮತಿ ಪ್ರಭಾವತಿ ಪಾಟೀಲ್. ಜಿಲ್ಲಾ ಆಯುಕ್ತರು (ಗೈ) ಬೆಳಗಾವಿ ಜಿಲ್ಲೆ, ಶ್ರೀ ಬಸವರಾಜ ಗದಗಿನ ಜಿಲ್ಲಾ ಕಾರ್ಯದರ್ಶಿಗಳು, ಶ್ರೀ ಆರ್.ಎಚ್. ಸಾಗರ್, ಅಧ್ಯಕ್ಷರು ಸ್ಥಳೀಯ ಸಂಸ್ಥೆ ರಾಯಚೂರು, ಶ್ರೀ ಎನ್. ಶೇಖರ್, ಕಾರ್ಯದರ್ಶಿಗಳು ಸ್ಥಳೀಯ ಸಂಸ್ಥೆ ರಾಯಚೂರುರವರು ಆಗಮಿಸಿದ್ದರು. ಸಸಿಗಳಿಗೆ ನೀರು ಹಾಕಿ ಮೈದಾನವನ್ನು ಸ್ವಚ್ಛತೆ ಮಾಡಲಾಯಿತು ಮತ್ತು ಸ್ಕೌಟ್ಸ್ ಮತ್ತು ಗೈಡ್ಸ್ ಮಕ್ಕಳಿಗೆ ವಿವಿಧ ರೀತಿಯ ಚಟುವಟಿಕೆಗಳನ್ನು ಆಯೋಜನೆ ಮಾಡಿ ವಿಜೇತರಾದ ಮಕ್ಕಳಿಗೆ ಬಹುಮಾನ ವಿತರಿಸಲಾಯಿತು.

* ಜೂನ್ 10 ರಂದು ಜಿಲ್ಲಾ ಸಂಸ್ಥೆ ರಾಯಚೂರು ಹಾಗೂ ಸ್ಥಳೀಯ ಸಂಸ್ಥೆ ದೇವದುರ್ಗ ಮತ್ತು G.M.H.P.S, ದೇವದುರ್ಗ ಇವರುಗಳ ಸಂಯುಕ್ತಾಶ್ರಯದಲ್ಲಿ ಶಾಲೆಯಲ್ಲಿ ಎರಡನೇ ವಾರದ ನೀರಿನ ವರ್ಚುವಲ್ ಶಿಬಿರಾಗ್ನಿ ಕಾರ್ಯಕ್ರಮವನ್ನು ಆಯೋಜನೆ ಮಾಡಲಾಯಿತು. ಹಾಗೂ ಮಳೆ ನೀರಿನ ಕೊಯ್ಲು ಕಿರುನಾಟಕ ಗೈಡ್ಸ್ ಮಕ್ಕಳು ಮಾಡಿದರು. ಇದೇ ಸಂದರ್ಭದಲ್ಲಿ ಶ್ರೀಮತಿ ವನಜಾ ತಿಳವಳ್ಳಿ ಗೈಡ್ ಕ್ಯಾಪ್ಟನ್ ಹಾಗೂ ಗೈಡ್ಸ್ ಮಕ್ಕಳು ಭಾಗವಹಿಸಿದ್ದರು.

* ಜೂನ್ 11 ರಂದು ಜಿಲ್ಲಾ ಸಂಸ್ಥೆ ರಾಯಚೂರು ಹಾಗೂ ಸ್ಥಳೀಯ ಸಂಸ್ಥೆ ಮಾನ್ವಿ ಮತ್ತು ಸಿಂಧನೂರು ವತಿಯಿಂದ ಭೂಮಿಯ ಕುರಿತು ಮೊದಲನೇ ವಾರದ ವರ್ಚುವಲ್ ಶಿಬಿರಾಗ್ನಿ ಕಾರ್ಯಕ್ರಮವನ್ನು ಆಯೋಜನೆ ಮಾಡಲಾಯಿತು. ಮುಖ್ಯ ಅತಿಥಿಗಳಾಗಿ ಶ್ರೀ ಪಿ.ಜಿ.ಆರ್. ಸಿಂಧ್ಯ ರಾಜ್ಯ ಮುಖ್ಯ ಆಯುಕ್ತರು ಆಗಮಿಸಿದ್ದರು ಹಾಗೂ ಶ್ರೀ ಎಲ್.ಟಿ. ಲೋಕೇಶ್, ಸಹಾಯಕ ಕಾರ್ಯದರ್ಶಿಗಳು(ಸ್ಕೌ), ಶಿಬಿರಾಗ್ನಿಯನ್ನು ಉದ್ಘಾಟಿಸಿದರು. ಅತಿಥಿಗಳಾಗಿ ಶ್ರೀ ಎಮ್. ರಾಮಲಿಂಗಪ್ಪ, ಕಾರ್ಯದರ್ಶಿಗಳು ಮಾನ್ವಿ, ಶ್ರೀ ಬೀರಪ್ಪ ಶಂಭೋಜಿ, ಕಾರ್ಯದರ್ಶಿಗಳು ಸಿಂಧನೂರು, ಶ್ರೀ ನರಸಿಂಹಮೂರ್ತಿ ದೇಸಾಯಿ, ಜಂಟಿ ಕಾರ್ಯದರ್ಶಿಗಳು ಮಾನ್ವಿ, ಶ್ರೀ ಅಂಬಣ್ಣ ನಾಯಕ ಮ್ಯಾಕಲ್ ಎಸ್.ಜಿ.ವಿ/ಎಸ್.ಎಮ್.ಸಿ., ಶ್ರೀ ಉದಯಕುಮಾರ್ ಪತ್ತಾರ್, ಸ್ಕೌಟ್ ಮಾಸ್ಟರ್‌ರವರು ಉಪಸ್ಥಿತರಿದ್ದರು ಹಾಗೂ ನಂತರ ಕಬ್ಸ್, ಬುಲ್‌ಬುಲ್ಸ್, ಸ್ಕೌಟ್ಸ್–ಗೈಡ್ಸ್ ಮಕ್ಕಳು ಭೂಮಿಯ ಕುರಿತು ಹಾಡು, ಕವನ, ಭಾಷಣ ಹೇಳಿದರು ಮತ್ತು ಚಿತ್ರಕಲೆಯನ್ನು ಪ್ರದರ್ಶನ ಮಾಡಿದರು. ಇದೇ ಸಂದರ್ಭದಲ್ಲಿ ಸ್ಕೌಟರ್–ಗೈಡ್ ಹಾಗೂ ಮಕ್ಕಳು ಭಾಗವಹಿಸಿದ್ದರು.

* ಜೂನ್ 11 ರಂದು ಜಿಲ್ಲಾ ಸಂಸ್ಥೆ ರಾಯಚೂರು ಹಾಗೂ ಸ್ಥಳೀಯ ಸಂಸ್ಥೆ ಲಿಂಗಸುಗೂರು ಮತ್ತು ಮಸ್ಕಿ ವತಿಯಿಂದ ಭೂಮಿಯ ಕುರಿತು

ಮೊದಲನೇ ವಾರದ ವರ್ಚುವಲ್ ಶಿಬಿರಾಗ್ನಿ ಕಾರ್ಯಕ್ರಮವನ್ನು ಆಯೋಜನೆ ಮಾಡಲಾಯಿತು. ಶ್ರೀ ಶಿವಪ್ಪ ಹಸಮಕಲ್, ಕಾರ್ಯದರ್ಶಿಗಳು ಸ್ಥಳೀಯ ಸಂಸ್ಥೆ ಮಸ್ಕಿ ಅವರು ಶಿಬಿರಾಗ್ನಿಯನ್ನು ಉದ್ಘಾಟಿಸಿದರ. ಮುಖ್ಯ ಅತಿಥಿಗಳಾಗಿ ಶ್ರೀ ಟಿ. ಶರಣಪ್ಪ ಕಾರ್ಯದರ್ಶಿಗಳು ಸ್ಥಳೀಯ ಸಂಸ್ಥೆ ಲಿಂಗಸುಗೂರು, ಶ್ರೀ ಶಶಿಕಾಂತ್ ದೇಸಾಯಿ, ರಾಜ್ಯ ಪರಿಷತ್ ಸದಸ್ಯರು (ಸ್ಕೌ), ಶ್ರೀ ಅಂಬಣ್ಣ ನಾಯಕ ಮ್ಯಾಕಲ್ ಎಸ್.ಜಿ.ವಿ./ಎಸ್.ಎಮ್.ಸಿ., ಶ್ರೀ ಶ್ರೀನಿವಾಸ ಸುಗಂಧಿ ಜಂಟಿ ಕಾರ್ಯದರ್ಶಿಗಳು ಮಸ್ಕಿ ಅವರು ಉಪಸ್ಥಿತರಿದ್ದರು ಹಾಗೂ ನಂತರ ಕಬ್ಸ್, ಬುಲ್‌ಬುಲ್ಸ್, ಸ್ಕೌಟ್ಸ್–ಗೈಡ್ಸ್ ಮಕ್ಕಳು ಭೂಮಿಯ ಕುರಿತು ಹಾಡು, ಕವನ, ಭಾಷಣ ಹೇಳಿದರು ಮತ್ತು ಚಿತ್ರಕಲೆಯನ್ನು ಪ್ರದರ್ಶನ ಮಾಡಿದರು. ಇದೇ ಸಂದರ್ಭದಲ್ಲಿ ಸ್ಕೌಟರ್–ಗೈಡರ್ ಹಾಗೂ ಮಕ್ಕಳು ಭಾಗವಹಿಸಿದ್ದರು.

## ರಾಮನಗರ

ಜೂನ್ 05 ರಂದು ಜಿ.ಕೆ.ಎಂ.ಪಿ. ರಾಮನಗರ, ಜಿ.ಜಿ.ಜೆ.ಸಿ. ರಾಮನಗರ, ಸ್ಕೌಟ್ಸ್–ಗೈಡ್ಸ್ ಹಾಗೂ ಶಾಲೆಯ ಇತರೆ ವಿದ್ಯಾರ್ಥಿಗಳು ಸ್ಥಳೀಯ ಸಂಸ್ಥೆಯ ಮಟ್ಟದಲ್ಲಿ ಹಮ್ಮಿಕೊಂಡಿದ್ದ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಸಾರ್ವಜನಿಕರಿಗೆ ಪರಿಸರ ಬಗ್ಗೆ ಅರಿವು ಮೂಡಿಸುವ ಜಾಥಾ ಏರ್ಪಡಿಸಲಾಗಿತ್ತು. ಈ ವೇಳೆಯಲ್ಲಿ ಸ್ಥಳೀಯ ಕಾರ್ಯದರ್ಶಿಗಳು ಶ್ರೀ ಕೃಷ್ಣಪ್ಪ ಎಸ್., ಶ್ರೀಮತಿ ರತ್ನಮ್ಮ, ಶ್ರೀ ಪದಮ್ ಚಂದ್‌ಜೈನ್, ಸ್ಥಳೀಯ ಅಧ್ಯಕ್ಷರು ಮತ್ತು ಸಂಜಯ್, ಆಜಿತ್‌ರವರು ಭಾಗವಹಿಸಿದ್ದರು. ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ರಾಮನಗರದ ಸಭಾಂಗಣದಲ್ಲಿ ಪ್ರಾಂಶುಪಾಲರಾದ ಶ್ರೀಮತಿ ಮಂಜುಳರವರ ಅಧ್ಯಕ್ಷತೆಯಲ್ಲಿ "ಪರಿಸರ ದಿನಾಚರಣೆ" ಮಹತ್ವ, ಉದ್ದೇಶಗಳನ್ನು ಕುರಿತು ಮಾಹಿತಿ ಕಾರ್ಯಾಗಾರ ಆಯೋಜಿಸಲಾಗಿತ್ತು. ಈ ಸಂದರ್ಭದಲ್ಲಿ ಮಾತನಾಡಿದ ಶ್ರೀ ಬಾಬು ಕೆ.,ರವರು "ಪರಿಸರ ದಿನಾಚರಣೆ ಮೊಟ್ಟಮೊದಲ ಬಾರಿಗೆ 1974ರಲ್ಲಿ ಪ್ರಾರಂಭ ಮಾಡಿದ್ದು ಪ್ರತಿ ವರ್ಷ ಒಂದು ಧ್ಯೇಯ ವಾಕ್ಯ (ಥೀಮ್) ಅಡಿಯಲ್ಲಿ ಪರಿಸರ ಆಚರಿಸುತ್ತಿದ್ದು, ಇಲ್ಲಿ ಭಾಗವಹಿಸಿರುವ ಪ್ರತಿ ಒಂದೊಂದು ವಿದ್ಯಾರ್ಥಿಗಳು ತಮ್ಮ ಮತ್ತು ತಮ್ಮ ಸಹೋದರ–ಸಹೋದರಿ, ಪೋಷಕರು ಜನ್ಮ ದಿನಾಚರಣೆಯನ್ನು ಗಿಡ ನೆಡುವ ಮೂಲಕ ಆಚರಣೆ ಮಾಡಿ" ಎಂದು ಸಲಹೆ ನೀಡಿದರು, ನಂತರ ಡಯಟ್ ಪ್ರಾಂಶುಪಾಲರು ಅಧ್ಯಕ್ಷೀಯ ನುಡಿಯಲ್ಲಿ "ಜೂನ್ ತಿಂಗಳಿಗೆ ಮಾತ್ರ ಪರಿಸರ ಜಾಗೃತಿ ನಿಲ್ಲ ಬರದು ತಮ್ಮ ನಿತ್ಯ ಜೀವನದಲ್ಲಿ ಅಳವಡಿಸಿಕೊಳ್ಳಬೇಕು" ಎಂದು ತಿಳಿಸಿದರು. ನಂತರ ಎಲ್ಲಾ ವಿದ್ಯಾರ್ಥಿಗಳು ಸೇರಿ. ಸುಮಾರು ಒಂದು ಸಾವಿರಕ್ಕೂ ಹೆಚ್ಚು ಬೀಜದುಂಡೆಗಳನ್ನು ತಯಾರಿಸಿದರು. ನಂತರ ಜಿ.ಕೆ.ಎಂ.ಪಿ. ರಾಮನಗರ ಟೌನ್ ಶಾಲೆಯ ಮುಂಭಾಗದಲ್ಲಿ ಮಾನ್ಯ ಕ್ಷೇತ್ರ ಶಿಕ್ಷಣಾಧಿಕಾರಿಗಳು ಶ್ರೀಮತಿ ಪಾರ್ವತಮ್ಮರವರು ನೇತೃತ್ವದಲ್ಲಿ ಗಿಡ ನೆಡುವ ಕಾರ್ಯಕ್ರಮ ನಡೆಯಿತು.

* ರಾಮನಗರ ಸ್ಥಳೀಯ ಸಂಸ್ಥೆಯ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೇತುಗನಹಳ್ಳಿ ಬಿಡದಿ ಕಾಲೇಜಿನ ವತಿಯಿಂದ ಜೂನ್ 05 ರಿಂದ 07ರ ವರೆಗೆ 2022–23ನೇ ಸಾಲಿನ ಬೇಸಿಗೆ ಶಿಬಿರ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಜೂನ್ 06 ರಂದು ಗಿಡ ನೆಡುವ



ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಜೂನ್ 07 ರಂದು ಜಿಲ್ಲಾ ಆಯುಕ್ತರು (ಗೈಡ್ಸ್) ಶ್ರೀ ಭಾರತಿ ಜೆ., ನಿವೃತ್ತ ಹಿರಿಯ ಉಪನ್ಯಾಸಕಿ ಡಯಟ್ ರಾಮನಗರರವರು ಭೇಟಿ ನೀಡಿ ಶಿಬಿರಾರ್ಥಿಗಳಿಗೆ ಶುಭಾಶಯುಗಳು ತಿಳಿಸಿದ್ದಾರೆ. ರೋವರ್ ಮತ್ತು ರೇಂಜರ್ ವಿದ್ಯಾರ್ಥಿಗಳು ಕಾಲೇಜಿನ ಆವರಣದಲ್ಲಿ ಸ್ವಚ್ಛತೆ ಕೈಗೊಂಡರು.

* ರಾಮನಗರ ಜಿಲ್ಲೆಯ ಚನ್ನಪಟ್ಟಣ ಸ್ಥಳೀಯ ಸಂಸ್ಥೆ ವ್ಯಾಪ್ತಿಗೆ ಬರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಚನ್ನಪಟ್ಟಣದಲ್ಲಿ ಜೂನ್ 05 ರಂದು ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಗಿಡ ನೆಡುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಈ ಸಂದರ್ಭದಲ್ಲಿ ಪರಿಸರ ಸಂರಕ್ಷಣೆ ಕುರಿತು ಜಾಗೃತಿ ಮೂಡಿಸುವ ಜಾಥಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

* ರಾಮನಗರ ಜಿಲ್ಲೆಯ ಕನಕಪುರ ತಾಲ್ಲೂಕಿನ ಕೋಡಿಹಳ್ಳಿ ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ ಶ್ರೀ ಸಂಗಯ್ಯ ಮಠಪತಿರವರು ಜೂನ್ 05 ರಂದು "ವಿಶ್ವ ಪರಿಸರ ದಿನಾಚರಣೆ"ಯ ಅಂಗವಾಗಿ ಸಸಿ ನೆಡುವ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದರು. ಈ ಸಂದರ್ಭದಲ್ಲಿ ರಾಮನಗರ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀ ದಿಗ್ವಿಜಯ್ ಬೋಡ್ಕೆ, ಕೋಡಿಹಳ್ಳಿ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಮತ್ತು ಅಧ್ಯಕ್ಷರು, ಗ್ರಾಮ ಪಂಚಾಯಿತಿ ಸದಸ್ಯರು ಮತ್ತು ಶಾಲಾ ಮುಖ್ಯೋಪಾಧ್ಯಾಯರು ಶಿಕ್ಷಕ ವೃಂದ ಮತ್ತು ಸ್ಕೌಟ್ಸ್–ಗೈಡ್ಸ್‌ಗಳು, ಶಾಲಾ ವಿದ್ಯಾರ್ಥಿಗಳು ಎಲ್ಲರೂ ಸೇರಿ ಸಸಿ ನೆಡುವ ಕಾರ್ಯಕ್ರಮ ನಡೆಸಿದರು.




* "ಹೊಸ ಕಲಿಕೆಗೆ ಮತ್ತು ರಾಜ್ಯ, ರಾಷ್ಟ್ರ ಮಟ್ಟದಲ್ಲಿ ಗುರುತಿಸಿಕೊಳ್ಳಲು ಭಾರತ್ ಸ್ಕೌಟ್ ಮತ್ತು ಗೈಡ್ ವಿದ್ಯಾರ್ಥಿಗಳಿಗೆ ಉತ್ತಮ ವೇದಿಕೆಯಾಗಿದೆ" ಎಂದು ಜಿಲ್ಲಾ ಆಯುಕ್ತೆ ಶ್ರೀಮತಿ ಭಾರತಿ ಅಭಿಪ್ರಾಯ ಪಟ್ಟರು. ಹಾರೋಹಳ್ಳಿ ತಾಲ್ಲೂಕು ಕೇಂದ್ರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಭಾರತ್ ಸ್ಕೌಟ್ ಮತ್ತು ಗೈಡ್ಸ್ ಘಟಕದ ವತಿಯಿಂದ ನಡೆದ



3 ದಿನಗಳ ಬೇಸಿಗೆ ಶಿಬಿರದಲ್ಲಿ ಭಾಗವಹಿಸಿ ಮಾತನಾಡಿದರು. ಪ್ರಗತಿ ಶಾಲೆಯ ಸಂಸ್ಥಾಪಕ ಹಾಗೂ ಜಿಲ್ಲಾ ಕಾರ್ಯದರ್ಶಿ ಶ್ರೀ ಶಿವನಂಜಪ್ಪ ಅವರು ಶಿಬಿರ ಉದ್ಘಾಟಿಸಿ, "ಸಮಾಜ ಸೇವೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳಲು ಇದು ಒಂದು ಅಮೂಲ್ಯವಾದ ಮತ್ತು ಅದೃಷ್ಟದ ಅವಕಾಶ ಎಂದು ಬಳಸಿಕೊಳ್ಳಬೇಕೆಂದು" ಕಿವಿಮಾತು ಹೇಳಿದರು. ಭಾರತ್ ಸ್ಕೌಟ್–ಗೈಡ್‌ನ ಸಂಚಾಲಕಿ ಹಾಗೂ ದೈಹಿಕ ಶಿಕ್ಷಣ ನಿರ್ದೇಶಕಿ ಪ್ರೊ. ಶೋಭಾ ಎಸ್., "ವಿದ್ಯಾರ್ಥಿಗಳಾದ ನೀವು ತಮ್ಮ ಪದವಿ ಅಧ್ಯಯನದ ಜತೆ ಸಮಾಜಕ್ಕೆ ಈ ಮೂಲಕ ಸೇವೆ ಮಾಡುವ ಅವಕಾಶಗಳು ತಮ್ಮದಾಗಿದೆ. ಅದನ್ನು ಮಾಡುತ್ತಾ ಸಮಾಜದಲ್ಲಿ ಒಳ್ಳೆ ವ್ಯಕ್ತಿಗಳಾಗಿ ರೂಪುಗೊಳ್ಳಿ" ಎಂದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಪ್ರಾಂಶುಪಾಲ ಡಾ. ನಾಗರಾಜ್ ಜಿ.ಎಚ್." ವಿದ್ಯಾರ್ಥಿಗಳ ಜೀವನದಲ್ಲಿ ಎಲ್ಲರಿಗೂ ಆ ಅವಕಾಶಗಳು ಸಿಗುವುದಿಲ್ಲ, ಆಸಕ್ತಿಯೂ ಇರುವುದಿಲ್ಲ. ಆದರೆ ನೀವುಗಳು ವಿಶೇಷ ಮತ್ತು ಅದೃಷ್ಟವಂತರು ಹಾಗಾಗಿ ನೀವುಗಳು ಈ ಅವಕಾಶಗಳನ್ನು ಉತ್ತಮವಾಗಿ ಬಳಸಿಕೊಂಡು ಮಾದರಿ ವಿದ್ಯಾರ್ಥಿಗಳಾಗಿ ರೂಪುಗೊಳ್ಳಿ" ಎಂದರು.

* ರಾಮನಗರ ಜಿಲ್ಲೆಯ ಕನಕಪುರ ಹಾಗೂ ರಾಮನಗರ ಸ್ಥಳೀಯ ಸಂಸ್ಥೆಯ ವತಿಯಿಂದ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಜೂನ್ ತಿಂಗಳ ಮೊದಲ ವಾರದಲ್ಲಿ ಭೂಮಿ – ಸಂರಕ್ಷಣೆ ಮತ್ತು ಭೂ ಉಪಯೋಗ ಮತ್ತು ಬಳಕ್ಕೆ ಮತ್ತು ಮಹತ್ವದ ಕುರಿತು ಮಾಹಿತಿ ನೀಡಲು ವರ್ಚುಯಲ್ ಶಿಬಿರಾಗ್ನಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಜೂನ್ 10 ರಂದು ಕನಕಪುರ ಸ್ಥಳೀಯ ಸಂಸ್ಥೆಯ ವತಿಯಿಂದ ಹಾಗೂ ರಾಮನಗರ ಸ್ಥಳೀಯ ಸಂಸ್ಥೆಯ ವತಿಯಿಂದ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಭೂಮಿ – ಕುರಿತು ಶಿಬಿರಾಗ್ನಿ ಕಾರ್ಯಕ್ರಮವನ್ನು ಸಂಘಟನೆ ಮಾಡಲಾಗಿತ್ತು. ಈ ಸಂದರ್ಭದಲ್ಲಿ ಮುಖ್ಯ ಅತಿಥಿಗಳಾಗಿ ಕೊಡಗು ಜಿಲ್ಲಾ ಆಯುಕ್ತರು (ಸ್ಕೌಟ್ಸ್) ವಿಭಾಗ ಶ್ರೀ ಜಿಮ್ಮಿ ಸೀಕ್ವೇರ, ಶ್ರೀ ನಾಗರಾಜ್ ಡಿ.ಸಿ.ಸಿ. ಬೆಂಗಳೂರು ಗ್ರಾಮಾಂತರ ಉಪಸ್ಥಿತರಿದ್ದರು. ಜಿಲ್ಲಾ ಕಾರ್ಯದರ್ಶಿ ಶ್ರೀ ಶಿವನಂಜಪ್ಪ, ಜಿಲ್ಲಾ ಆಯುಕ್ತರು (ಗೈಡ್ಸ್) ವಿಭಾಗ ಶ್ರೀಮತಿ ಭಾರತಿ ಜೆ., ಹಿರಿಯ ಉಪನ್ಯಾಸಕಿ ಡಯಟ್ ರಾಮನಗರ, ಶ್ರೀಮತಿ ಕುಮಾರಿಹೊನ್ನಮ್ಮ, ಎ.ಎಸ್.ಒ.ಸಿ., ಕಬ್ ಮಾಸ್ಟರ್ ಫ್ಲಕ್ ಲೀಡರ್ ಸ್ಕೌಟ್ ಮಾಸ್ಟರ್ ಮತ್ತು ಗೈಡ್ ಕ್ಯಾಪ್ಟನ್ ಹಾಗೂ ರೋವರ್ ಸ್ಕೌಟ್ ಲೀಡರ್ ಹಾಗೂ ಕಬ್ಸ್ ಮತ್ತು ಬುಲ್‌ಬುಲ್ ಸ್ಕೌಟ್ಸ್ ಮತ್ತು ಗೈಡ್ಸ್ ರೋವರ್ ಮತ್ತು ರೇಂಜರ್ ವಿದ್ಯಾರ್ಥಿಗಳು ಮತ್ತು ಪೋಷಕರು ಹಾಗೂ ಎಸ್.ಜಿ.ವಿ.ರವರು ಭಾಗವಹಿಸಿದ್ದರು. ಸ್ಥಳೀಯ ಕಾರ್ಯದರ್ಶಿಗಳು ಶ್ರೀ ಗೋಪಾಲ್ ವೈ. ಕಾಂಬಳೆ ಕನಕಪುರರವರು ಭೂಮಿ ಕುರಿತು ಮಾಹಿತಿ ನೀಡಿದರು. ನಂತರ ಜಿಮ್ಮಿ ಸೀಕ್ವೇರ ಸರ್ ರವರ ಭೂ ದಿನಾಚರಣೆ ಮೊದಲ ಬಾರಿಗೆ ಜಾರಿಗೆ ಬಂದ ವಿಷಯ ಕುರಿತು ಮಾತನಾಡಿದರು ನಂತರ ಡಿ.ಸಿ.ಜಿ. ಶ್ರೀಮತಿ ಭಾರತಿ ಜೆ.ವಿ.ರವರು ಶಿಬಿರಾರ್ಥಿಗಳಿಗೆ ಶುಭಾಶಯ ತಿಳಿಸಿದರು.

* ಚನ್ನಪಟ್ಟಣ ಮತ್ತು ಮಾಗಡಿ ಸ್ಥಳೀಯ ಸಂಸ್ಥೆಯ ವತಿಯಿಂದ ಜೂನ್ 11 ರಂದು ಆನ್‌ಲೈನ್ ವರ್ಚುಯಲ್ ಶಿಬಿರಾಗ್ನಿ ಕಾರ್ಯಕ್ರಮವನ್ನು ಭೂಮಿ ವಿಷಯ ಕುರಿತು ಹಮ್ಮಿಕೊಳ್ಳಲಾಗಿತ್ತು. ಈ ಸಂದರ್ಭದಲ್ಲಿ ಭೂಮಿ ಸಂರಕ್ಷಣೆ – ಭೂಮಿ ಉಪಯೋಗ ಮತ್ತು ಮಾನವ ಅತಿ ದುರಾಸೆಯಿಂದ ಭೂಮಿ ಮೇಲೆ ಉಂಟಾಗುವ ದುಷ್ಪರಿಣಾಮ ಕುರಿತು ರೋವರ್ ಮತ್ತು ರೇಂಜರ್ ವಿದ್ಯಾರ್ಥಿಗಳು ಮಾತನಾಡಿದರು. ನಂತರ ಸಂಸ್ಥೆಯ ಕಾರ್ಯದರ್ಶಿ ಶ್ರೀ ಈರಾನಾಯಕ್ ಪಿ.ಆರ್.ರವರು ಪಂಚ ಭೂತಗಳಲ್ಲಿ ನಮ್ಮ ಭೂಮಿ ಒಂದು ಎಂದು ತಿಳಿಸಿದರು. ನಂತರ ಎಲ್ಲಾ ಶಿಬಿರಾರ್ಥಿಗಳಿಗೆ ಶ್ರೀಮತಿ ಕೆ.ವಿ. ಶಾಮಲಾ, ಎಸ್.ಟಿ.ಸಿ. ಗೈಡ್ಸ್‌ರವರು ಶುಭಾಶಯಗಳು ತಿಳಿಸಿದರು. ನಂತರ ಶ್ರೀಮತಿ ಚನ್ನಮ್ಮ ಆರ್., ಎಲ್.ಜಿ.ಎಫ್.ಜಿ.ಸಿ. ಚನ್ನಪಟ್ಟಣರವರು ಭೂಮಿ ಮಾಲಿನ್ಯ ನಿಯಂತ್ರಣ ಮಾಡಲು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಮಾಹಿತಿ ನೀಡಿದರು. ಶ್ರೀ ನರಸಿಂಹಮೂರ್ತಿ ಮತ್ತು ಶ್ರೀ ಉಮೇಶ್‌ರವರು ಸಾವಯವ ಕೃಷಿ ಉತ್ತಮ ಆರೋಗ್ಯ ಕಾಪಾಡಲು ಸಹಕಾರಿ ಆದರೆ ಮಾನವನು ರಾಸಾಯನಿಕ ಗೊಬ್ಬರ ಬಳಸಿ ಕೃಷಿ ಬೆಳೆ ಬೆಳೆಯಲು ಅವಲಂಬಿಸಿದ್ದಾರೆ. ಇದರಿಂದ ಮಾನವ ದೇಹದಲ್ಲಿ ಆಹಾರ ಧಾನ್ಯ ಮತ್ತು ಆಹಾರ ಸೇವನೆ ಯಿಂದ ವಿಷ ಪದಾರ್ಥ ದೇಹವನ್ನು ಸೇರುತ್ತದೆ. ಆದರ ಪರಿಣಾಮವಾಗಿ ಮಾನವ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತದೆ ಎಂದು ತಿಳಿಸಿದರು.

* ಕನಕಪುರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ 2023–24ನೇ ಸಾಲಿನ ರೋವರ್ ಮತ್ತು ರೇಂಜರ್ ಘಟಕದ ಉದ್ಘಾಟನಾ ಸಮಾರಂಭವನ್ನು ಜೂನ್ 12 ರಂದು ಆಯೋಜಿಸಲಾಗಿತ್ತು. ಈ ಸಂದರ್ಭದಲ್ಲಿ 2021–22ನೇ ಮತ್ತು 2022–2023ನೇ ಸಾಲಿನ ಸ್ಥಳೀಯ ಮತ್ತು ಜಿಲ್ಲಾ, ರಾಜ್ಯ, ಅಂತರ ರಾಜ್ಯ, ಹಾಗೂ ರಾಷ್ಟ್ರ ಮಟ್ಟದಲ್ಲಿ ವಿವಿಧ ಶಿಬಿರಗಳಲ್ಲಿ ಭಾಗವಹಿಸಿದ ರೋವರ್ ಮತ್ತು ರೇಂಜರ್ ವಿದ್ಯಾರ್ಥಿಗಳಿಗೆ. ಹಾಗೂ ನಿಪುಣ್ ಪರೀಕ್ಷಾ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ ವಿತರಣೆ ಮಾಡಯಿತು. ಕಾಲೇಜಿನ ಪ್ರಾಂಶುಪಾಲ ಡಾ. ಬಿ. ಶಾಮುಲಾರವರ ಅಧ್ಯಕ್ಷತೆಯುಲ್ಲಿ, ಕಾರ್ಯಕ್ರಮವನ್ನು ಡಾ. ವೆಂಕಟಚಲಪತಿ ಜಿ., ರೋವರ್ ಸ್ಕೌಟ್ ಲೀಡರ್ ಮತ್ತು ಐ.ಕ್ಯೂ., ಎ.ಸಿ. ವಿಭಾಗದ ಮುಖ್ಯಸ್ಥ ಪ್ರೊ. ಅಕ್ಷತಾ ಪರಜೋತಿ ಹಾಗೂ ಜಿಲ್ಲಾ ಕಾರ್ಯದರ್ಶಿ ಶ್ರೀ ಶಿವನಂಜಪ್ಪ ನಡೆಸಿದರು. ಸದರಿ ಕಾರ್ಯಕ್ರಮಕ್ಕೆ ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ ಶ್ರೀ ಗೋಪಾಲ್ ವೈ. ಕಾಂಬಳೆ, ಕನಕಪುರರವರು ಭಾಗವಹಿಸಿ ಸೂಕ್ತ ಮಾರ್ಗದರ್ಶನ ನೀಡಿದರು. ನಂತರ ವಿದ್ಯಾರ್ಥಿಗಳ ಸಾಧನೆ ಕುರಿತು ರೋವರ್ ಸ್ಕೌಟ್ ಲೀಡರ್‌ರವರು ಮಾತನಾಡಿದರು.

# ಅಭಿನಂದನೆಗಳು

ಇಂಡಿಯಾ ಬುಕ್ ಆಫ್ ರೆಕಾರ್ಡ್ಸ್‌ನಲ್ಲಿ ಹೆಸರು ಸೇರ್ಪಡೆ

**ಕಬ್ ಮಾಸ್ಟರ್ ಶ್ರೀ ಶಂಕರ್ ದೇವರು ಹಿರೇಮಠ**

ಸರ್ಕಾರಿ ಹಿರಿಯರ ಪ್ರಾಥಮಿಕ ಶಾಲೆ, ದುಗ್ಗಮ್ಮನಗುಂಡ ತಾಲ್ಲೂಕು, ಸಿಂಧನೂರು ಜಿಲ್ಲೆ, ರಾಯಚೂರುರವರಿಗೆ ರಾಜ್ಯ ಸಂಸ್ಥೆ ಹಾಗೂ ರಾಯಚೂರು ಜಿಲ್ಲಾ ಸಂಸ್ಥೆ ಮತ್ತು ಸ್ಥಳೀಯ ಸಂಸ್ಥೆ ಸಿಂಧನೂರು ವತಿಯಿಂದ ತುಂಬು ಹೃದಯದ ಅಭಿನಂದನೆಗಳು.

– ರಾಜ್ಯ ಕಾರ್ಯದರ್ಶಿ




# ಅಭಿನಂದನೆಗಳು



**ಶ್ರೀನಿಧಿ ಫೌಂಡೇಶನ್ (ರಿ.) ಹಾಗೂ**
**ಸಮಾಜಮುಖಿ ಸೇವಾ ಸಂಸ್ಥೆ (ರಿ.)**

ಇವರ ಸಹಯೋಗದಲ್ಲಿ ಸಾಧಕರಿಗೆ ನೀಡುವ 2023–24ನೇ ಸಾಲಿನ ಪ್ರಶಸ್ತಿ ಪುರಸ್ಕಾರ

**"ನ್ಯಾಷನಲ್ ಐಕಾನ್ ಅವಾರ್ಡ"** ಪುರಸ್ಕೃತರಾದ

**ಶ್ರೀಮತಿ ಗಂಗಮ್ಮ ಎಮ್. ಕಟ್ಟಿಮನಿ**

ಸಹಾಯಕ ಜಿಲ್ಲಾ ಆಯುಕ್ತರು (ಗೈಡ್) ರಾಯಚೂರು ಅವರಿಗೆ ರಾಜ್ಯ ಸಂಸ್ಥೆಯಿಂದ ಅಭಿನಂದನೆಗಳು.

–ರಾಜ್ಯ ಕಾರ್ಯದರ್ಶಿ

## ಶಿವಮೊಗ್ಗ

"ಉತ್ತಮ ಆರೋಗ್ಯಕ್ಕಾಗಿ ಯೋಗ ಅಭ್ಯಾಸ ಅತ್ಯಂತ ಅವಶ್ಯಕ. ಪ್ರತಿಯೊಬ್ಬರು ಸಾಧ್ಯವಾದಷ್ಟು ಹೆಚ್ಚಿನ ಸಂಖ್ಯೆಯಲ್ಲಿ ಯೋಗ ಮಾಡುವುದನ್ನು ರೂಡಿಸಿಕೊಳ್ಳಬೇಕು. 'ಯೋಗ' ಎಂಬ ಶಬ್ದವು ಸಂಸ್ಕೃತದ 'ಯುಜ್' ಪದದಿಂದ ಬಂದಿದೆ ಹಾಗೆಂದರೆ ಕೂಡಿಸು ಸೇರಿಸು ಎಂದು ಅರ್ಥ ಹಾಗೆಂದರೆ ನಮ್ಮ ಜೀವಾತ್ಮ ಪರಮಾತ್ಮನಲ್ಲಿ ಸೇರಿಸು ಎಂದರ್ಥ ದೇಹ ಮತ್ತು ಮನಸ್ಸು ಯಾವಾಗಲೂ ವರ್ತಮಾನದಲ್ಲಿ ಇರಬೇಕು. ಅದರಿಂದ ನಾವು ದಿನಾಲು ಯೋಗ ಮಾಡಬೇಕಾಗಿದೆ." ಎಂದು ಶಿಕ್ಷಕಿಯಾದ ಶ್ರೀಮತಿ ವೀಣಾ ಶಿವಕುಮಾರ ರವರು ಶಿವಮೊಗ್ಗ ಜಿಲ್ಲಾ ಸಂಸ್ಥೆಯಲ್ಲಿ ಯೋಗ ದಿನಾಚರಣೆಯನ್ನು ಉದ್ಘಾಟನೆ ಮಾಡಿ ಮಾತನಾಡಿದರು. ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಸ್ಕೌಟ್ ಆಯುಕ್ತರಾದ ಶ್ರೀ ಕೆ.ಪಿ. ಬಿಂದುಕುಮಾರ್‌ರವರು ಅಧ್ಯಕ್ಷೀಯ ನುಡಿಯನ್ನು ನುಡಿಯುತ್ತಾ "ಯೋಗ ದಿನಾಚರಣೆಗಳು ಕೇವಲ ಒಂದು ದಿನಕ್ಕೆ ಸೀಮಿತವಾಗಿರದೆ ಜೀವನದುದ್ದಕ್ಕೂ ಅನುಸರಿಸುವಂತಿರಬೇಕು. ಎಲ್ಲರೂ ಯೋಗವನ್ನು ಮಾಡಿ ತಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳುವಂತೆ" ಕರೆ ನೀಡಿದರು. ಈ ಕಾರ್ಯಕ್ರಮದ ನಿರೂಪಣೆಯನ್ನು ಶ್ರೀಮತಿ ಭಾರತಿ ಡಾಯಸ್, ರಾಜ್ಯ ಸಹಾಯಕ ಸಂಘಟನಾ ಆಯುಕ್ತರು ನಿರ್ವಹಿಸಿದರು. ಸಭಾ ಕಾರ್ಯಕ್ರಮದ ಬಳಿಕ ಪ್ರಾತ್ಯಕ್ಷಿಕೆಯನ್ನು ಮಾಡಿ ಮಕ್ಕಳಿಗೆ ತೋರಿಸಿ ಅವರಿಂದಲೂ ಮಾಡಿಸಿದರು. ಈ ಕಾರ್ಯಕ್ರಮದಲ್ಲಿ ಜಿಲ್ಲಾ ಆಯುಕ್ತರು (ಗೈಡ್ಸ್) ಶ್ರೀಮತಿ ಶಕುಂತಲಾ ಚಂದ್ರಶೇಖರ್, ಜಿಲ್ಲಾ ಕಾರ್ಯದರ್ಶಿ ಶ್ರೀ ಹೆಚ್. ಪರಮೇಶ್ವರ್ ಹಾಗೂ ಸ್ಕೌಟ್ಸ್–ಗೈಡ್ಸ್‌ಗಳು ಹಾಜರಿದ್ದರು.



* ಜೂನ್ 16 ರಂದು ಜಿಲ್ಲಾ ಮಟ್ಟದ ರಾಜ್ಯ ಪುರಸ್ಕಾರ ಪೂರ್ವಸಿದ್ಧತಾ ಪರೀಕ್ಷಾ ಶಿಬಿರವು ಜಿಲ್ಲಾ ಸ್ಕೌಟ್ ಭವನದಲ್ಲಿ ಪ್ರಾರಂಭಿಸಲಾಯಿತು. ಈ ಶಿಬಿರದ ಉಸ್ತುವಾರಿ ಹಾಗೂ ರೇಂಜರ್ ವಿಭಾಗದ ನಾಯಕಿಯಾಗಿ ಎ.ಎಸ್.ಒ.ಸಿ ಶ್ರೀಮತಿ ಭಾರತಿ ಡಾಯಸ್ ರವರು ರೋವರ್ ವಿಭಾಗದ ನಾಯಕರಾಗಿ ಶ್ರೀ ಎ.ವಿ. ರಾಜೇಶ್, ಸ್ಕೌಟ್ ವಿಭಾಗಕ್ಕೆ ಶ್ರೀ ಶಿವಶಂಕರ್, ಗೈಡ್ ವಿಭಾಗಕ್ಕೆ ಶ್ರೀಮತಿ ಜ್ಯೋತಿ ಸಹಾಯಕರಾಗಿ ಕಾರ್ಯನಿರ್ವಹಿಸಿದರು. ಸಲ್ಲಿಸಿದ 62 ರೋವರ್ಸ್ 62 ರೇಂಜರ್ಸ್, 16 ಸ್ಕೌಟ್ಸ್, 42 ಗೈಡ್ಸ್ ಒಟ್ಟು 182 ಪರೀಕ್ಷಕರು ಹಾಜರಿದ್ದರು.

ಮಧ್ಯಾಹ್ನ 4 ಗಂಟೆಗೆ ಜಿಲ್ಲಾ ಸ್ಕೌಟ್ ಆಯುಕ್ತರಾದ ಶ್ರೀ ಕೆ.ಪಿ. ಬಿಂದುಕುಮಾರ್‌ರವರು ಗಿಡಕ್ಕೆ ನೀರು ಹಾಕುವುದರ ಮೂಲಕ ಮಕ್ಕಳನ್ನುದ್ದೇಶಿಸಿ ಮಾತನಾಡುತ್ತಾ ತಾವುಗಳೆಲ್ಲರೂ ಸ್ಕೌಟಿಂಗ್– ಗೈಡಿಂಗ್‌ನಲ್ಲಿ ಹಂತ ಹಂತವಾಗಿ ಮುಂದು ಬಂದು ಇಲ್ಲಿಗೆ ರಾಜ್ಯ



ಪುರಸ್ಕಾರ ಪೂರ್ವಸಿದ್ದತಾ ಪರೀಕ್ಷಾ ಶಿಬಿರಕ್ಕೆ ಹಾಜರಾಗಿದ್ದೀರಿ ಈ ಶಿಬಿರಕ್ಕೆ ಹಿರಿಯರು, ಅನುಭವವುಳ್ಳ ನುರಿತ ಸಂಪನ್ಮೂಲ ವ್ಯಕ್ತಿಗಳು ನಾಯಕರಾಗಿ ಹಾಗೂ ಸಹಾಯಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ ಅವರಿಂದ ಪರೀಕ್ಷೆಗೆ ಬೇಕಾದ ಜ್ಞಾನವನ್ನು ನೀಡುತ್ತಾರೆ ಅದರ ಪ್ರಯೋಜನವನ್ನು ತಾವೆಲ್ಲರೂ ಪಡೆದುಕೊಂಡು ಜಿಲ್ಲೆಗೆ ಕೀರ್ತಿಯನ್ನು ತರಬೇಕೆಂದು" ತಿಳಿಸುತ್ತಾ ಎಲ್ಲರಿಗೂ ಶುಭಕೋರಿದರು.

ಕಾರ್ಯಕ್ರಮದ ನಿರೂಪಣೆಯನ್ನು ರಾಜ್ಯ ಸಹಾಯಕ ಸಂಘಟನಾ ಆಯುಕ್ತರಾದ ಶ್ರೀಮತಿ ಭಾರತಿ ಡಾಯಸ್‌ರವರು ನಿರ್ವಹಿಸಿದರು, ಸ್ವಾಗತವನ್ನು ಜಿಲಾ ಕಾರ್ಯದರ್ಶಿ ಶ್ರೀ ಪರಮೇಶ್ವರ ನಿರ್ವಹಿಸಿದರೆ ವಂದನಾರ್ಪಣೆಯನ್ನು ಜಿಲ್ಲಾ ಜಂಟಿ ಕಾರ್ಯದರ್ಶಿ ಶ್ರೀ ವೈ.ಆರ್. ವೀರೇಶಪ್ಪ ನಿರ್ವಹಿಸಿದರು. 182 ಸ್ಕೌಟ್ಸ್-ಗೈಡ್ಸ್, ರೋವರ್ಸ್-ರೇಂಜರ್ಸ್‌ಗಳು ಭಾಗವಹಿಸಿದ್ದರು.

* ಜೂನ್ 18 ರಂದು ನಡೆದ ಶಿಬಿರದ ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಮಾನ್ಯ ವಿಧಾನಸಭಾ ಸದಸ್ಯರಾದ ಶ್ರೀಯುತ ಎಸ್.ಎನ್. ಚನ್ನಬಸಪ್ಪರವರು ಬಂದು ಮಕ್ಕಳನ್ನುದ್ದೇಶಿಸಿ ಮಾತನಾಡಿದರು. "ಸ್ಕೌಟ್ಸ್-ಗೈಡ್ಸ್ ಸಂಸ್ಥೆಯು ಮಕ್ಕಳಿಗೆ ಶಿಸ್ತನ್ನು ಕಲಿಸುತ್ತದೆ ಅಲ್ಲದೆ ಮಕ್ಕಳಲ್ಲಿ ಹುದುಗಿರುವ ಪ್ರತಿಭೆಯನ್ನು ಹೊರ ತೆಗೆಯುವಲ್ಲಿ ಈ ಸಂಸ್ಥೆಯ ಮುಖ್ಯ ಪಾತ್ರವಾಗಿದೆ" ಎಂದು ತಿಳಿಸಿದರು. ಈ ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಸ್ಕೌಟ್ ಆಯುಕ್ತರಾದ ಶ್ರೀ ಕೆ.ಪಿ. ಬಿಂದುಕುಮಾರ್‌ರವರು ಮಾತನಾಡಿ ಮೂಡಬಿದ್ರೆಯಲ್ಲಿ ನಡೆದ ಅಂತರಾಷ್ಟ್ರೀಯ ಜಾಂಬೂರಿಗೆ ಜಿಲ್ಲೆಯ 1,450 ಮಕ್ಕಳು ಭಾಗವಹಿಸಿದ್ದರು ಇದನ್ನು ತಮಗೆ ತಿಳಿಸಲು ಹೆಮ್ಮೆ ಅನಿಸುತ್ತಿದೆ" ಎಂದರು. ಕಾರ್ಯಕ್ರಮದ ನಿರೂಪಣೆಯನ್ನು ರಾಜ್ಯ ಸಹಾಯಕ ಸಂಘಟನಾ ಆಯುಕ್ತರಾದ ಶ್ರೀಮತಿ ಭಾರತಿ ಡಾಯಸ್‌ರವರು ನಿರ್ವಹಿಸಿದರು, ಸ್ವಾಗತವನ್ನು ಜಿಲ್ಲಾ ಕಾರ್ಯದರ್ಶಿ ಶ್ರೀ ಪರಮೇಶ್ವರ ನಿರ್ವಹಿಸಿದರೆ ವಂದನಾರ್ಪಣೆಯನ್ನು ಜಿಲ್ಲಾ ಜಂಟಿ ಕಾರ್ಯದರ್ಶಿ ಶ್ರೀ ವೈ.ಆರ್. ವೀರೇಶಪ್ಪ ನಿರ್ವಹಿಸಿದರು.



* ಶಿವಮೊಗ್ಗ ನಗರದ ಕೊಳಚೆ ಶುದ್ಧೀಕರಣ ಘಟಕದ ಪ್ಲಾಂಟ್ ಸಮೀಪ ಜಿಲ್ಲಾ ಸಂಸ್ಥೆ ಶಿವಮೊಗ್ಗ, ಪರೋಪಕಾರಂ, ರೋಟರಿ ಕ್ಲಬ್ ಹಾಗೂ ಪರಿಸರ ಆಸಕ್ತರ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ ಪರಿಸರ ದಿನಾಚರಣೆ ಕಾರ್ಯಕ್ರಮಕ್ಕೆ ಸಂಸ್ಥೆಯ ಅಧ್ಯಕ್ಷರು ಹಾಗೂ ಜಿಲ್ಲಾಧಿಕಾರಿಯವರಾದ ಡಾ|| ಆರ್. ಸೆಲ್ವಮಣಿ, ಭಾ.ಆ.ಸೇ ಸಹ ಉಪಸ್ಥಿತರಿದ್ದು ಗಿಡ ನೆಡುವುದರ ಮೂಲಕ ಚಾಲನೆ ಕೊಟ್ಟು "ಇಲ್ಲಿ ನಾವು ಗಿಡ ನೆಡಲು ಕಾರಣ ಏನೆಂದರೆ ನಗರದ ಕೊಳಚೆ ನೀರೆಲ್ಲಾ ಇಲ್ಲಿ ಬಂದು ಸೇರುತ್ತೆ ಅದರ ಶುದ್ಧೀಕರಣ ಮಾಡಿ ನಾವು ಬೆರೆಕಡೆ ಕಳಿಸುತ್ತೇವೆ. ಇಲ್ಲಿರುವ ಖಾಲಿ ಜಾಗದಲ್ಲಿ ಮರ ಗಿಡಗಳನ್ನು ಬೇಳೆಸುವುದರಿಂದ ಶುದ್ಧ ಗಾಳಿ ಉತ್ತಮ ವಾತಾವರಣ ಜೊತೆಗೆ ಆರೋಗ್ಯ ಸದಾ ಸದೃಡವಾಗಿರುತ್ತದೆ" ಎಂದು ತಿಳಿಸಿದರು. "ಭೂಮಿ ಪರಿಸರವನ್ನು ಸ್ವಚ್ಛವಾಗಿ ಇಟ್ಟುಕೊಳ್ಳುವುದರ ಜೊತೆಗೆ ಮರ ಗಿಡಗಳನ್ನು ನೆಡುವುದರ ಮುಖಾಂತರ ಪರಿಸರವನ್ನು ಸಂರಕ್ಷಣೆ ಮಾಡುವುದು ನಮ್ಮ ನಿಮ್ಮೆಲ್ಲರ ಆದ್ಯ ಕರ್ತವ್ಯ" ಎಂದು ನಗರಸಭೆ ಮಾಜಿ ಅಧ್ಯಕ್ಷ ಶ್ರೀ ಎಂ. ಶಂಕರ್ ಮಾತನಾಡಿದರು. ಜಿಲ್ಲಾ ಸ್ಕೌಟ್ ಆಯುಕ್ತೆ ಶ್ರೀಮತಿ ಕೆ.ಪಿ. ಬಿಂದುಕುಮಾರ್‌ರವರು ಪರಿಸರ ಜಾಗೃತಿ ಬಗ್ಗೆ ಮಾತನಾಡಿದರು. ಜಿಲ್ಲಾ ಕಾರ್ಯದರ್ಶಿ ಶ್ರೀ ಹೆಚ್. ಪರಮೇಶ್ವರ್ 200 ಸ್ಕೌಟ್ಸ್-ಗೈಡ್ಸ್, ರೋವರ್ಸ್-ರೇಂಜರ್ಸ್‌ಗಳು ಹಾಗೂ ಉಳಿದ ಪದಾಧಿಕಾರಿಗಳು ಉಪಸ್ಥಿತರಿದ್ದರು. ಒಟ್ಟು 80 ಗಿಡಗಳನ್ನು ನೆಡಲಾಯಿತು.



## ವಿಜಯಪುರ

"ಆರೋಗ್ಯಕರ ವಾತಾವರಣದಿಂದ ನಾವು ಜೀವನದಲ್ಲಿ ಶುದ್ಧ ಗಾಳಿ, ಹಸಿರು ಮತ್ತು ನೀರನ್ನು ಪಡೆಯಲು ಸಾಧ್ಯ. ಸಮಾಜದ ಅಭಿವೃದ್ಧಿಯಲ್ಲಿ ಉತ್ತಮ ಪರಿಸರದ ಪಾತ್ರ ಅನನ್ಯವಾದುದು" ಎಂದು ಬಸವಂತರಾಯಗೌಡ ಪಾಟೀಲ ಹೇಳಿದರು.

ಅವರು ಹೊಸಪಡನೂರ ಗ್ರಾಮದ ಎಚ್.ಪಿ.ಎಸ್. ಶಾಲೆಯಲ್ಲಿ ವಿಶ್ವ ಪರಿಸರ ದಿನ ಸಪ್ತಾಹದ ನಿಮಿತ್ತ ಭಾರತ್ ಸ್ಕೌಟ್ಸ್-ಗೈಡ್ಸ್ ಸಂಸ್ಥೆ, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ ಹಾಗೂ ಶಾಂತೇಶ್ವರ ಪ್ರೌಢ ಶಾಲೆಯ 1989-90ನೇ ಸಾಲಿನ ಗೆಳೆಯರ ಬಳಗದ ಸಹಯೋಗದಲ್ಲಿ ಜರುಗಿದ ಪರಿಸರ ಸ್ನೇಹಿ ಸೈಕಲ್ ಜಾಥಾ ಮತ್ತು ಸಸಿನೆಡುವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.




ಸ್ಕೌಟ್ಸ್–ಗೈಡ್ಸ್ ಸಂಸ್ಥೆಯ ಅಧ್ಯಕ್ಷ ಡಾ. ಮಂಜುನಾಥ ಕೋಟೆಣ್ಣವರ ಮಾತನಾಡಿ, "ಲಭ್ಯ ಸ್ಥಳಗಳಲ್ಲಿ ಸಸಿ ನೆಟ್ಟು ಬೆಳೆಸುವ ಮೂಲಕ ಎಲ್ಲರೂ ಪರಿಸರ ರಕ್ಷಣಾ ಕಾರ್ಯದಲ್ಲಿ ತೊಡಗಬೇಕು. ಮುಂದಿನ ಪೀಳಿಗೆಯವರು ನೆಮ್ಮದಿಯಿಂದ ಬಾಳಬೇಕಿದ್ದರೆ, ಹಸಿರು ವಾತಾವರಣ ಆವರಿಸಬೇಕು" ಎಂದು ಹೇಳಿದರು.

ಸ್ಕೌಟ್ಸ್ ಮಾಸ್ಟರ್ ಶ್ರೀ ಸಂತೋಷ ಬಂಡೆ ಮಾತನಾಡಿ, "ಪ್ರಕೃತಿಯಿಲ್ಲದ ಜೀವನವು ಆಲೋಚನೆಗೆ ಮೀರಿದೆ. ಮನುಷ್ಯನ ಉದಾಸೀನತೆ, ತಿಳಿಗೇಡಿತನದಿಂದ ನಿಸರ್ಗ ಬಸವಳಿಯುತ್ತಾ ಸಾಗುತ್ತಿದೆ. ಎಲ್ಲರೂ 'ಎಸೆಯುವ ಸಂಸ್ಕೃತಿ'ಯ ಬದಲು 'ರಿಪೇರಿ ಸಂಸ್ಕೃತಿ'ಯನ್ನು ಅಳವಡಿಸಿಕೊಳ್ಳಲು ಮುಂದಾಗಬೇಕು" ಎಂದರು.

ಶ್ರೀಮತಿ ಭಾಗ್ಯಜ್ಯೋತಿ ಕೋಳಾರಿ ಪ್ರಾಸ್ತಾವಿಕವಾಗಿ ಸ್ಕೌಟ್ಸ್, ಗೈಡ್ಸ್ ಕಾರ್ಯಪ್ರಗತಿಯ ಕುರಿತಾಗಿ ಮಾತನಾಡಿದರು. ಇಂಡಿ ಪಟ್ಟಣದ ಬಸವೇಶ್ವರ ವೃತ್ತದಿಂದ ಲಚ್ಯಾಣ ಮಾರ್ಗವಾಗಿ ಹೊಸಪಡನೂರ ಗ್ರಾಮದವರೆಗೆ ಸೈಕಲ್ ಜಾಥಾ ನಡೆಸಲಾಯಿತು.

ಶಾಲಾ ಮುಖ್ಯ ಶಿಕ್ಷಕ ಶ್ರೀ ಎಸ್.ಎಸ್. ಬಾಬಳಗಿ ಇತರರು ಉಪಸ್ಥಿತರಿದ್ದರು. ತಾಲ್ಲೂಕು ಕಾರ್ಯದರ್ಶಿ ಶಹಾಜಿ ಪಾಟೀಲ ಸ್ವಾಗತಿಸಿದರು. ಬಸವರಾಜ ಗೋರನಾಳ ನಿರೂಪಿಸಿದರು. ಎನ್.ಕೆ. ಸಕ್ಕರಶೆಟ್ಟಿ ವಂದಿಸಿದರು.

* 2022–23ನೇ ಸಾಲಿನ ಸ್ಕೌಟ್ಸ್–ಗೈಡ್ಸ್ ತೃತೀಯ ಸೋಪಾನ ಪರೀಕ್ಷಾ ಶಿಬಿರ ಹಾಗೂ ರಾಜ್ಯ ಪುರಸ್ಕಾರ ಪೂರ್ವಸಿದ್ಧತಾ ತರಬೇತಿ ಶಿಬಿರವನ್ನು ಜೂನ್ 19 ರಿಂದ 21ರ ವರೆಗೆ ಶ್ರೀಮತಿ ವಾಸಂತಿಬಾಯಿ ಜಿಗಜಿನಿ, ಸ್ಕೌಟ್ಸ್–ಗೈಡ್ಸ್ ಜಿಲ್ಲಾ ತರಬೇತಿ ಹಾಗೂ ಶಿಬಿರ ಕೇಂದ್ರ, ಬುರಣಾಪುರ ತಾಲ್ಲೂಕು ವಿಜಯಪುರ ಇಲ್ಲಿ ಸಂಘಟಿಸಲಾಗಿತ್ತು. ಶಿಬಿರವನ್ನು ಜೂನ್ 19 ರಂದು ಜಿಲ್ಲಾ ಪ್ರಧಾನ ಆಯುಕ್ತರಾದ ಶ್ರೀ ಸಿದ್ದಣ್ಣ ಎಂ. ಸಕ್ರೀರವರು ಮಕ್ಕಳಿಗೆ ಸ್ಕಾರ್ಫ್ ಧಾರಣೆ ಮಾಡುವುದರ ಮೂಲಕ ಉದ್ಘಾಟಿಸಿದರು. ಸ್ಕೌಟ್ ವಿಭಾಗದ ಶಿಬಿರದ ನಾಯಕರಾಗಿ



ಶ್ರೀ ಎಸ್.ಎಸ್. ಬೊಮ್ಮನಹಳ್ಳಿರವರು ಹಾಗೂ ಗೈಡ್ ವಿಭಾಗದ ಶಿಬಿರದ ನಾಯಕಿಯಾಗಿ ಶ್ರೀಮತಿ ಪಾರ್ವತಿ ಎಂ. ಪೂಜಾರಿರವರು ಕಾರ್ಯನಿರ್ವಹಿಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಕಾರ್ಯದರ್ಶಿಗಳಾದ ಶ್ರೀ ಪಿ.ಎಸ್. ಕುಂಬಾರ್. ಚಡಚಣ ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿಗಳಾದ ಶ್ರೀ ಎಸ್.ಸಿ. ಉಮರಾಣಿ, ಶ್ರೀ ಎಸ್.ಜಿ.ವಿ. ರಾಜಶೇಖರ ಖೇಡಗಿ, ಜಿಲ್ಲಾ ಸಂಘಟನಾ ಶಿಕ್ಷಕರಾದ ಶ್ರೀ ಶ್ರೀಶೈಲ ಸೊಲಾಪುರಂ, ಸ್ಕೌಟ್ ಮಾಸ್ಟರ್ಸ್, ಶ್ರೀ ಎ.ಕೆ. ಮುಲ್ಲಾ, ಶ್ರೀ ಪ್ರಕಾಶ ಹದ್ಲಿ, ಶ್ರೀ ವಿ.ಪಿ. ಅವತಾಡೆ ಮುಂತಾದವರು ಉಪಸ್ಥಿತರಿದ್ದರು.

## ಯಾದಗಿರಿ

ಮೇ 05 ರಂದು ಜಿಲ್ಲಾಡಳಿತ, ಜಿಲ್ಲಾ ಸ್ವೀಪ್ ಸಮಿತಿ ಹಾಗೂ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಜಿಲ್ಲಾ ಸಂಸ್ಥೆ ಯಾದಗಿರಿ ವತಿಯಿಂದ ಸೈಕ್ಲೊಥಾನ್ [ಸೈಕಲ್ ಜಾಥ] ಕಾರ್ಯಕ್ರಮದ ಮೂಲಕ ಮತದಾನ ಕುರಿತು ಜಾಗೃತಿ ಮೂಡಿಸುವ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿಗಳಾದ ಶ್ರೀಮತಿ ಸ್ನೇಹಲ್ ಆರ್., ಜಿಲ್ಲಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾದ ಶ್ರೀಮತಿ ಗರಿಮಾ ಪನ್ವಾರ್ ಮತ್ತು ಜಿಲ್ಲಾ ವರಿಷ್ಠಾಧಿಕಾರಿಯಾದ ಶ್ರೀ ಸಿ.ಬಿ. ವೇದಮೂರ್ತಿ, ಶ್ರೀ ರಾಜುಭಾವಿಹಳ್ಳಿ, ಸಹಾಯಕ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಯಾದಗಿರಿ, ಜಿಲ್ಲಾ ಸ್ಕೌಟ್ ಆಯುಕ್ತರಾದ ಶ್ರೀ ಪಟ್ಟೇದಾರ್, ಜಿಲ್ಲಾ ಕಾರ್ಯದರ್ಶಿಗಳಾದ ಶ್ರೀ ರಾಘವೇಂದ್ರ ಅಳ್ಳಳ್ಳಿ, ಸರ್ಕಾರಿ ಮಹಿಳಾ ಪದವಿ ಕಾಲೇಜಿನ ರೇಂಜರ್ ಲೀಡರ್ ಆದ ಶ್ರೀಮತಿ ಡಾ. ಅನುಸೂಯ ಪಾಟೀಲ, ಸ್ಕೌಟ್ ಮಾಸ್ಟರ್ ಶ್ರೀ ಮಲ್ಲಯ್ಯ ಬೆಳಗುಂದಿ, ಶ್ರೀ ಗಾಳೆಪ್ಪ ಹಾಗೂ ಯಾದಗಿರಿ ತಾಲೂಕಿನ ಎಲ್ಲಾ ಸ್ಕೌಟ್ಸ್ ಮತ್ತು ಗೈಡ್ಸ್, ರೋವರ್, ರೆಂಜರ್ಸ್ ವಿದ್ಯಾರ್ಥಿಗಳು ಉಪಸ್ಥಿತರಿದ್ದರು ಹಾಗೂ ಸ್ಕೌಟ್, ಗೈಡ್ ಸಹಾಯಕರಾದ ಶ್ರೀ ಮಹಮ್ಮದ್ ಶರ್ಫುದ್ದಿನ್ ಕಾರ್ಯಕ್ರಮವನ್ನು ಸಂಘಟಿಸಿದ್ದರು.



ಮೇ 04 ರಂದು ಮತದಾನ ಜಾಗೃತಿ ಮೂಡಿಸುವ ಕಾರ್ಯಕ್ರಮವನ್ನು ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು ಯಾದಗಿರಿಯಿಂದ ಚಿತ್ತಾಪುರ ರಸ್ತೆ ಮುಖಾಂತರ ಸುಭಾಷ್ ಚೌಕ್‌ದವರೆಗೆ ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮದಲ್ಲಿ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಡಾ. ಸರ್ವೋದಯ ಶಿವಪುತ್ರ ಕಾಲೇಜಿನ ರೇಂಜರ್ ಆದ ಶ್ರೀಮತಿ ಡಾ. ಅನುಸೂಯ ಪಾಟೀಲ ಮತ್ತು ರೇಂಜರ್ಸ್ ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಸ್ಕೌಟ್–ಗೈಡ್ ಸಹಾಯಕರಾದ ಶ್ರೀ ಮಹಮ್ಮದ್ ಶರ್ಫುದ್ದಿನ್ ಕಾರ್ಯಕ್ರಮವನ್ನು ಸಂಘಟಿಸಿದ್ದರು.

**ವಿವಿಧ ಜಿಲ್ಲೆಗಳಲ್ಲಿ ನಡೆದ 'ಅಂತರರಾಷ್ಟ್ರೀಯ ಯೋಗ ದಿನಾಚರಣೆ' ಪ್ರಯುಕ್ತ ಕಬ್ಸ್-ಬುಲ್‌ಬುಲ್ಸ್ ಸ್ಕೌಟ್ಸ್-ಗೈಡ್ಸ್ ಮತ್ತು ರೋವರ್ಸ್-ರೇಂಜರ್ಸ್‌ಗಳು ಯೋಗಾಭ್ಯಸದಲ್ಲಿ ತೊಡಗಿರುವುದು.**


ಬಳ್ಳಾರಿ


ಚಾಮರಾಜನಗರ


ಧಾರವಾಡ


ಗದಗ


ಹಾಸನ


ಕಲಬುರಗಿ


ರಾಯಚೂರು


ರಾಮನಗರ

Regd. as News Paper (Magazine) RNI No: 13348/1959. Postal Regd. No. KA/BGGPO/2580/2021-23
Licensed to Post Without Prepayment License No. PMG/BG/WPP-340/2021-2023.
Date of Publishing 28th of Every Month
Posted at: Bengaluru PSO, Mysore Road, Bengaluru-26 on 28th & 30th of every month (No. of Pages: 36)




If not delivered, please return to :
**THE EDITOR, Karnataka Scout & Guide**
State Headquarters, Shanthi Gruha
#39, Palace Road, Bengaluru - 560 001
Ph.: 080-22260017, 22267470
e-mail.: info@bsgkarnataka.org
shanthigruha@scout.org.in
www.bsgkarnataka.org

Published by: The Bharat Scouts & Guides, Karnataka, State Headquarters
Shanthi Gruha #39, Palace Road, Bengaluru - 560 001. Publisher & Editor: K. Gangappa Gowda
Printed by: L. Lingappa, M.D. Sathyasri Printers Pvt. Ltd., 16/1, 3rd Cross, 2nd Main, Kasturiba Nagar, Mysore Rd, Bengaluru 26

# ಮೊಟ್ಟೆ ಆರೋಗ್ಯಕರವೇ?

**ಡಾ. ವಿಜಯಲಕ್ಷ್ಮಿ ಬಾಳೇಕುಂದ್ರಿ**
ಮಕ್ಕಳ ಹೃದಯ ತಜ್ಞರು, ಬೆಂಗಳೂರು

"ಸಂಡೇಯಾ ಮಂಡೇ ಹರರೋಜ ಖಾವೋ ಅಂಡೆ" ಅನ್ನುವ ಜಾಹಿರಾತನ್ನು ಎಲ್ಲರೂ ನೋಡಿದ್ದಾರೆ. ಆದರೆ ಪ್ರತೀ ನಿತ್ಯ ಮೊಟ್ಟೆ ತಿನ್ನುವುದು ಆರೋಗ್ಯಕರವೇ? ಯೋಚಿಸಲೇ ಬೇಕಾದ ವಿಚಾರ. ಪ್ರತೀ ನಿತ್ಯ ಮೊಟ್ಟೆ ತಿನ್ನುತ್ತಿದ್ದರೆ ರಕ್ತದಲ್ಲಿ ಒಳ್ಳೆಯ ಮತ್ತು ಕೆಟ್ಟ ಜಿಡ್ಡು (Bad Cholesterol Level) ಹೆಚ್ಚುತ್ತದೆ ಎಂದು ವೈದ್ಯಕೀಯ ವಿಶ್ಲೇಷಣೆ ತಿಳಿಸುತ್ತಿವೆ! ಇದರಿಂದ ಆ ವ್ಯಕ್ತಿಯ ತೂಕ ಹೆಚ್ಚುವುದರ ಜೊತೆಗೆ Saturated Fats ಕೂಡ ಹೆಚ್ಚುವುದರಿಂದ ಹೃದಯಾಘಾತದ ಸಾದ್ಯತೆ ಹೆಚ್ಚುತ್ತದೆ ಎಂದು ತಿಳಿದು ಬಂದಿದೆ. ಮಕ್ಕಳಿಗೆ, ಯುವಕರಿಗೆ ಉತ್ತಮ PROTEIN ಸಿಗುವುದೆಂಬ ಭ್ರಮೆಯಲ್ಲಿ ಜೊತೆಗೆ ಕೆಟ್ಟ ಜಿಡ್ಡು ರಕ್ತನಾಳದಲ್ಲಿ ಸೇರುತ್ತಿದೆ ಎಂಬ ಸತ್ಯ ಜನರಿಗೆ ತಿಳಿದಿಲ್ಲ. ತಿಳಿದವರು ಮೊಟ್ಟೆಯಲ್ಲಿಯ ಹಳದಿ ಭಾಗ ತೆಗೆದು ಕೇವಲ ಬಿಳಿ ಭಾಗ ಸೇವಿಸುತ್ತಾರೆ. ಆದರೆ ಇದು ಗೊತ್ತಿಲ್ಲದ ಶಾಲೆ ಮಕ್ಕಳು ಪ್ರತಿನಿತ್ಯ ಮೊಟ್ಟೆ ಸೇವಿಸಿ ಹೃದಯಾಘಾತಕ್ಕೆ ಆಹ್ವಾನ ನೀಡುತ್ತಿರುವುದು ಆತಂಕಕಾರಿ ವಿಚಾರ. ಪ್ರತಿದಿನ ನಮ್ಮ ಶರೀರಕ್ಕೆ ಕೇವಲ 100 mg Cholesterolನ ಅಗತ್ಯವಿರುತ್ತದೆ. ಅದನ್ನು ನಮ್ಮ ಯಕೃತ (liver) ಉತ್ಪತ್ತಿ ಮಾಡುತ್ತದೆ. ಒಂದು ಮೊಟ್ಟೆಯಲ್ಲಿ 250 mg Cholesterol ಇರುತ್ತದೆ. ಹಾಗಾಗಿ ಒಬ್ಬ ವ್ಯಕ್ತಿ ದಿನಕ್ಕೆ 2–3 ಮೊಟ್ಟೆ ತಿಂದರೆ ಅವರ ರಕ್ತನಾಳದಲ್ಲಿ ಜಿಡ್ಡು ಶೇಖರಣೆಗೊಂಡು ಯುವಕರಾಗುವಷ್ಟರಲ್ಲಿ ಹೃದಯಾಘಾತಕ್ಕೆ ತುತ್ತಾಗುತ್ತಾರೆ. ಪ್ರತೀ ನಿತ್ಯ 2–3 ಮೊಟ್ಟೆ ತಿನ್ನುವುದರಿಂದ ಸ್ಥೂಲಕಾಯದ ಜೊತೆಗೆ ಮಧುಮೇಹ (Diabetes) High Cholesterol ಜೊತೆಗೆ ಹೃದಯಾಘಾತ ಸಂಭವ ಹೆಚ್ಚುವುದೆಂದು ವೈಜ್ಞಾನಿಕವಾಗಿ ತಿಳಿದು ಬಂದಿದೆ. ಕೆಲವು ಸಲ ಕೆಟ್ಟ ಮೊಟ್ಟೆಯಲ್ಲಿ Salmonalla ರೋಗಾಣುವಿದ್ದು, ಶಾಲೆಯಲ್ಲಿ ಇಂಥ ಮೊಟ್ಟೆ ತಿಂದ ಮಕ್ಕಳಿಗೆ ಟೈಫಾಯ್ಡ್ ಜ್ವರ ಬರುವ ಸಂಭವ ಕೂಡ ಹೆಚ್ಚುತ್ತದೆ. ಆದ್ದರಿಂದ ಮಕ್ಕಳಿಗೆ ಮೊಟ್ಟೆ ಬದಲು ಬೇಸನ್ ಲಡ್ಡು, ಕಡಲೆಕಾಯಿ ಚಿಕ್ಕಿ, ಬೆಲ್ಲದಲ್ಲಿ ಮಾಡಿದ್ದು ಕೊಟ್ಟರೆ ಅವರ ಆರೋಗ್ಯಕ್ಕೆ ಉತ್ತಮ ನೆನಪಿಡಿ ನಮ್ಮ ಮಕ್ಕಳ ಆರೋಗ್ಯ ನಮ್ಮ ಕೈಯಲ್ಲಿ.

# ಮುಕ್ತ ದಳಗಳು

ಲೇಖಕ: ರಾ. ಚಂದ್ರಶೇಖರನ್

ಬೇಡೆನ್ ಪೊವೆಲ್ಲರು ಸ್ಕೌಟಿಂಗ್‌ನ ರೂಪುರೇಷೆಗಳನ್ನು ಸಿದ್ಧಪಡಿಸಿದ ಬಳಿಕ, ಇದರ ವಿಕಾಸಕ್ಕೆ ಅನುಕೂಲವಾಗುವಂತೆ, ಒಂದು ಮಾರ್ಗದರ್ಶಕ ಪುಸ್ತಕವನ್ನು ಬರೆದರು. ಅದೇ "ಸ್ಕೌಟಿಂಗ್ ಫಾರ್ ಬಾಯ್ಸ್", ಪುಸ್ತಕವು ಅಚ್ಚಾಗಿ ಹೊರಬರುತ್ತಿದ್ದಂತೆ, ತೀವ್ರಗತಿಯಲ್ಲಿ ಹಂಚಿಕೆ / ಮಾರಾಟವಾಗಿ ಪುನರ್ಮುದ್ರಣಗಳು ಆದವು. ಅಷ್ಟೇ ತೀವ್ರಗತಿಯಲ್ಲಿ ಮೂಲೆಮೂಲೆಯಲ್ಲಿ ಸ್ಕೌಟಿಂಗ್ ಹರಡಿತು.

ದ್ರಷ್ಟಾರ, ಸಂಸ್ಥಾಪಕ ಬೇಡನ್ ಪೊವೆಲ್ಲರ ದೂರದೃಷ್ಟಿ ಹೇಗಿತ್ತೆಂದರೆ ಸ್ಕೌಟ್ ಘಟಕಗಳು ಯಾವುದೇ ಸಂಘ–ಸಂಸ್ಥೆಗಳ ಅಧೀನದಲ್ಲಿಲ್ಲದೆ, ತಾವೇ ಮುಕ್ತವಾಗಿ ಪ್ರಾರಂಭವಾಗಿ ಮುನ್ನಡೆಯಬೇಕು. ಅಧೀನವಾದಾಗ ಅವುಗಳದೇ ಆದ ಇತಿ–ಮಿತಿಗಳಿರುವುದಾಗಿ ಅಭಿಪ್ರಾಯಪಟ್ಟರು. ಆದರೇನು, ವಿಶ್ವವ್ಯಾಪ್ತವಾದಾಗ ಅನೇಕ ದೇಶ, ರಾಜ್ಯಗಳು, ರಾಷ್ಟ್ರಗಳು ತಮ್ಮ ತಮ್ಮ ಶೈಕ್ಷಣಿಕ ಕ್ರಮದಲ್ಲಿ ಅಳವಡಿಸಿ ಕಾರ್ಯೋನ್ಮುಖವಾದುವು. ಹಾಗಾಗಿ ಸರ್ಕಾರಗಳ ನೀತಿಸಂಹಿತೆಗಳು, ಶಾಲಾ–ಕಾಲೇಜುಗಳ ಕಾಲಮಿತಿಯೊಳಗೆ ಮುನ್ನಡೆಯಿತು.

ಸ್ಥಾಪಕರ ಮುಕ್ತದಳಗಳ ದೃಷ್ಟಿಕೋನವಾದರೂ ಏನು? ಒಬ್ಬ ಬಾಲಕನು ಕಿರಿಯ ವಯಸ್ಸಿನಲ್ಲಿ ಸೇರಿ, ವಿವಿಧ ವಿಭಾಗಗಳಲ್ಲಿ ಕಲಿಯುತ್ತಾ, ಕಲಿಸುತ್ತಾ, ಮುಂದೆ ಪ್ರೌಢನಾದಾಗ ಸಹ ಬೆಂಬಲ ನೀಡುತ್ತಾ, ತಾನೂಕಲಿಯುತ್ತಾ, ಕಲಿಸುತ್ತಾ, ಇಳಿವಯಸ್ಸಾದರೂ ಮುಂದುವರೆಯುವ ಒಂದು ಅವಕಾಶ ಇರಬೇಕು, ಇದು ಮುಕ್ತದಳಗಳಲ್ಲಿ ಮಾತ್ರ ಸಾಧ್ಯ. ಉದಾ:– ನಾನೇ 1938ರಲ್ಲಿ ಸಂಸ್ಥೆಯಲ್ಲಿ ಮರಿ (ಕಬ್) ಆಗಿ ಸೇರಿ, 90ರ ಇಳಿವಯಸ್ಸಿನಲ್ಲೂ ಮುಂದುವರೆಯುತ್ತಿದ್ದೇನೆ.

ಸಂಸ್ಥಾಪಕರ ಕನಸನ್ನು ಸಾಕಾರಗೊಳಿಸಲೋ ಎಂಬಂತೆ ಭಾರತವು ದೀವಿಗೆ ಹಿಡಿಯಿತು. 1909ರಲ್ಲಿ ಕ್ಯಾಪ್ಟನ್ ಬೇಕರ್ ಅವರು ಇಡೀ ಭಾರತದ ಮೊದಲ ಸ್ಕೌಟ್ ದಳವನ್ನು ಸ್ಥಾಪಿಸಿದರು. ಅದೂ ಕರ್ನಾಟಕದ ಬೆಂಗಳೂರಿನಲ್ಲಿ. ಅದೊಂದು ಮುಕ್ತದಳ. ಮುಂದೆ ಭಾರತದ ಮೂಲವಾಸಿಗಳ ಮಕ್ಕಳಿಗಾಗಿ 1917ರಲ್ಲಿ ಅಧಿಕೃತವಾಗಿ ಪ್ರಾರಂಭವಾದಾಗ ಸಹ, ಅಂದಿನ ಮೈಸೂರು ರಾಜ್ಯದ ಬೆಂಗಳೂರಿನಲ್ಲಿ, ಆಸುಪಾಸಿನಲ್ಲಿ ಮುಕ್ತದಳಗಳು ತಲೆಯೆತ್ತಿದುವು. ಅಂತಹ ಮುಕ್ತದಳಗಳಲ್ಲಿ ಮುಂಚೂಣಿಯಲ್ಲಿ ಹೆಸರು ಪಡೆದ ದಳಗಳು ಕೆಲವು. ದೊಡ್ಡಬಳ್ಳಾಪುರದ ಕೊಂಗಾಡಿಯಪ್ಪ ಅವರು ಸ್ಥಾಪಿಸಿ ನಡೆಸುತ್ತಿದ್ದ ಶ್ರೀ ರಾಮ ಸ್ಕೌಟ್‌ದಳ. ಈ ದಳವು 31 ವರ್ಷಗಳ ಕಾಲ ಅನೂಚಾನವಾಗಿ ನಡೆದುಬಂದಿತು. ಶ್ರೀ ಎಂ.ಹೆಚ್. ರಾಮಚಂದ್ರ ರಾಯರು 1918ರಲ್ಲಿ ಸ್ಥಾಪಿಸಿದ, ಇಂದಿಗೂ ನಡೆದು ಬಂದಿರುವ ಬೆಂಗಳೂರು ಮಲ್ಲೇಶ್ವರಂನ ಶ್ರೀ ಚಾಮುಂಡಿ ಮುಕ್ತದಳ. (ಶ್ರೀ ಎಂ.ಹೆಚ್.ಆರ್ – ನನ್ನ ಪೂಜ್ಯ ತಂದೆಯವರು) ತುಮಕೂರಿನಲ್ಲಿ ಶ್ರೀ ಹನುಮಾನ್ ಗ್ರೂಪ್ (1930ರಲ್ಲಿ) ಮೈಸೂರಿನಲ್ಲಿ ಶ್ರೀ ಜಯಗ್ರೂಪ್ (1938–40ರಲ್ಲಿ) ಗಳನ್ನು ಸಹ ಸ್ಥಾಪಿಸಿದರು. ಈ ಎರಡೂ ದಳಗಳು ಕ್ರಮವಾಗಿ 50–40 ವರ್ಷಗಳ ಕಾಲ ವೈಭವೋಪೇತವಾಗಿ ಅಸ್ತಿತ್ವದಲ್ಲಿದ್ದುವು. ಶ್ರೀ ಚಾಮುಂಡಿ ಮುಕ್ತದಳವು ಈ ಡಿಸೆಂಬರ್‌ನಲ್ಲಿ ತನ್ನ 105ನೇ ವಾರ್ಷಿಕೋತ್ಸವವನ್ನು ಆಚರಿಸಲಿದೆ.

ಶ್ರೀ ಎಂ.ಹೆಚ್.ಆರ್. ಅವರು ಮುಕ್ತದಳಗಳ ರೂವಾರಿ. (ಊಚಿಡಿಛಿಟಿಂಜಡಿ ಶಜಿ ಔಡಿಜಟಿ ಗಟಿಣ) ಕರ್ನಾಟಕದ ಬೇಡನ್ ಪೊವೆಲ್ ಎಂದು ಪ್ರಖ್ಯಾತರಾಗಿದ್ದರು. ಶ್ರೀ ಚಾಮುಂಡಿ ಮುಕ್ತದಳಕ್ಕೆ ಮಹಾನಗರ ಮಧ್ಯಭಾಗದಲ್ಲಿ ವಿಶಾಲವಾದ ಆಟ–ಕಲಿಕೆ–ಮೈದಾನ, ತನ್ನದೇ ಆದಕಟ್ಟಡ, ಬಯಲುರಂಗ ಮಂಟಪ, ಬೆಂಗಳೂರು ಉತ್ತರ ಜಿಲ್ಲಾಕಾರ್ಯಾಲಯ ಹಾಗೂ ಒಂದು ಮಿನಿ ಉದ್ಯಾನ ಇದೆ. ಗುಂಪಿನ ಎದುರಿನ ಸುಮಾರು 4 ಕಿ.ಮೀ., ರಸ್ತೆಯನ್ನು ಶ್ರೀ ಚಾಮುಂಡಿ ಸ್ಕೌಟ್ ರಸ್ತೆ ಎಂದೇ ಮಹಾನಗರ ಪಾಲಿಕೆಯು ಹೆಸರಿಸಿದೆ. ಮುಕ್ತದಳಗಳ ಶಿಬಿರ ಕೇಂದ್ರವನ್ನು ಸ್ಥಾಪಿಸಲು ಪ್ರಯತ್ನಸಾಗಿದೆ.

ಇನ್ನು ಇಡೀ ಕರ್ನಾಟಕದಲ್ಲಿ ಬೆರಳೆಣಿಕೆಯಷ್ಟಿದ್ದ ಮುಕ್ತದಳಗಳು ಇಂದು ಇನ್ನೂರನ್ನು ಮೀರಿ ಬೆಳೆದಿವೆ, ಬೆಳೆಯುತ್ತಿವೆ. ಚಾರಿತ್ರಿಕವಾಗಿ ಇನ್ನೂ ನಡೆದು ಬಂದಿರುವ 50 ವರ್ಷಕ್ಕೂ ಮೀರಿದ ಶ್ರೀ ಕಂಠೀರವ ದಳ, ಬೆಂಗಳೂರು, ಝೂನ್ಸಿ ಸ್ಕೌಟ್ ಗ್ರೂಪ್, ಬೆಂಗಳೂರು ಉಲ್ಲೇಖನೀಯ. ಉಚ್ಛ್ರಾಯ ಸ್ಥಿತಿಯಲ್ಲಿ ಮೆರೆದ ತುಮಕೂರಿನ ಏಕಲವ್ಯ, ಚಿತ್ರದುರ್ಗದ ಮದಕರಿ ನಾಯಕ, ಶಿವಮೊಗ್ಗದ ಮಲ್ನಾಡ್ ಗ್ರೂಪ್, ಕೋಲಾರದ ಶ್ರೀಕೃಷ್ಣರಾಜ, ಹಾಸನದ ಹೊಯ್ಸಳ, ಬೆಂಗಳೂರಿನ ಫ್ರೀ–ಇಂಡಿಯ, ಕೆನಡಿ ಸಲಾವುದ್ದೀನ್, ಮುಂತಾದ ಗುಂಪುಗಳನ್ನು ನೆನೆಯಲೇಬೇಕು.

ಮುಕ್ತದಳಗಳು ಸಂಸ್ಥೆಯ ಜೀವನಾಡಿ ಆಗಬೇಕು. ಆಗ ಶಾಲಾ ಕಾಲೇಜುಗಳ ಕಾಲಮಾನದ ಇತಿ–ಮಿತಿಯಿಂದ ಹೊರಬಂದು, ಮಕ್ಕಳಿಗೆ ಮನೆಯ ಕುಟುಂಬದ ವಾತಾವರಣದಲ್ಲಿ ಬೆಳೆದು ವಿಕಾಸಗೊಳ್ಳಲು ವಿಫುಲವಾದ ಅವಕಾಶಗಳು ದೊರೆಯುತ್ತದೆ. ಇದೇ ಮೇ 20ರಂದು ರಾಜ್ಯ ಕಾರ್ಯಾಲಯದ ಆವರಣದಲ್ಲಿ ನಡೆದ ಮುಕ್ತದಳ ಸ್ಕೌಟರ್–ಗೈಡರ್‌ಗಳ ಸಮಾವೇಶದಲ್ಲಿ ಭಾಗವಹಿಸುವ ಸುಯೋಗ ನನ್ನ ಪಾಲಿಗೆ ಬಂತು. ಈ ಸಂದರ್ಭದಲ್ಲಿ 1956ರಲ್ಲಿ ತುಮಕೂರಿನಲ್ಲಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯಾಗಿ ಪರಿವರ್ತನೆ ಆದ ಬಳಿಕ 16 ವರ್ಷಗಳ ಅಂತರದಲ್ಲಿ ನಡೆದ 10ನೇ ರಾಜ್ಯಜಾಂಬೋರಿ (ಜಾಂಬೋರೆಟ್)ಯ ವೇಳೆ (ಜಾಂಬೋರಿ ಸಾವೆನೀರ್‌ನಲ್ಲಿ ರೆಕಾರ್ಡ್ ಆಗಿದೆ) ನಾನು ಸಂಘಟಿಸಿದ್ದ ರಾಜ್ಯದ ಮುಕ್ತದಳ ಸ್ಕೌಟರ್‌ಗಳ ಪ್ರಥಮ ಸಮಾವೇಶವನ್ನು ನೆನೆಸಿಕೊಂಡೆ. 10–12 ಸ್ಕೌಟರ್‌ಗಳು ಭಾಗವಹಿಸಿದ್ದರು. ಅಷ್ಟೇಅಲ್ಲ 1962ರಲ್ಲಿ ಚಿತ್ರದುರ್ಗದಲ್ಲೂ (ಈ ಗುಂಪು 10 ವರ್ಷಕಾಲ ಪ್ರಚಲಿತವಿದ್ದಿತು) 1963–66ರಲ್ಲಿ ದಾವಣಗೆರೆಯಲ್ಲೂ, 1966–68 ಕಲಬುರಗಿಯಲ್ಲೂ, 1968–1970 ಕೋಲಾರದಲ್ಲೂ ಸ್ಥಾಪಿಸಿ, ನಡೆಸಿದ ಮುಕ್ತದಳಗಳೂ, ಆದಳಗಳಲ್ಲಿ ಭಾಗವಹಿಸಿದ ನನ್ನ ನೆಚ್ಚಿನ ಸ್ಕೌಟುಗಳೂ, ಆ ಸ್ಥಳಗಳಲ್ಲಿ ನಾನು ಸಂಘಟಿಸಿದ ಸ್ಥಳೀಯ, ಜಿಲ್ಲಾ ಹಾಗೂ ರಾಜ್ಯ ಮಟ್ಟದ ತರಬೇತಿ ಹಾಗೂ ಮೇಳಗಳು, ಸ್ಥಾಪನೆಗಾಗಿ ಯೋಜನೆ ತಯಾರಿಸಿಕೊಟ್ಟ ರಾಜ್ಯ ಶಿಬಿರ ಕೇಂದ್ರ ಹಾಗೂ ವಿಶ್ರಾಂತಿ ಕೇಂದ್ರಗಳು, ಇಂದು ಉನ್ನತ ಸ್ಥಾನಗಳನ್ನಲಂಕರಿಸಿರುವ ನನ್ನ ನೆಚ್ಚಿನ ಬಾಲಕರು (ಇಂದು ಪ್ರೌಢರು), ಇವೆಲ್ಲವೂ ಸ್ಮೃತಿಪಟಲದಲ್ಲಿ ಹಾದು ಹೆಮ್ಮೆ ಎನಿಸಿತು.

ಬಿ.ಪಿ. ಸ್ಕೌಟಿಂಗ್‌ಅನ್ನು ಚಳವಳಿ (Movement) ಎಂದು ಕರೆದರು. ಹಾಗಾಗಿ ಸ್ಕೌಟ್–ಗೈಡ್ ಚಳವಳಿ ಮುಕ್ತದಳಗಳ ಆಗರವಾಗಿ ಮೆರೆಯಬೇಕು.